ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಅವರ ಪರಿಸ್ಥಿತಿ ತಿಳಿಯಲು ಸ್ಕ್ಯಾನ್ ಮಾಡಿ
ಸ್ಟ್ರೋಕ್ ಚಿಕಿತ್ಸೆಗೆ ಮಣಿಪಾಲ್ ಹಾಸ್ಪಿಟಲ್ಸ್ ಸದಾ ಸನ್ನದ್ಧ
MARS 080 2222 1111

ಹಿಮಾಚಲ ಪ್ರದೇಶ: ಶೇ 65.92ರಷ್ಟು ಮತದಾನ 6
ಕಾರಾಗೃಹದಿಂದ ರಾಜೀವ್ ಹಂತಕರ ಬಿಡುಗಡೆ 6
ಇಂದು ಭಾನುವಾರದ ಪುರವಣಿ 8
ಗುಜರಾತ್ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ ಪ್ರಕಟ
10 ಲಕ್ಷ ನೌಕರಿ ಸೃಷ್ಟಿಯ ವಾಗ್ದಾನ 6

ಟರ್ಮಿನಲ್ –2 ಡಿಸೆಂಬರ್‌ನಲ್ಲಿ ಸೇವೆಗೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಮಾರು ₹13 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಎರಡನೇ ಟರ್ಮಿನಲ್ ಪ್ರಯಾಣಿಕರ ಸೇವೆಗೆ ಡಿಸೆಂಬರ್‌ನಲ್ಲಿ ಲಭ್ಯವಾಗಲಿದೆ. 5B

ಚಿನಕುರಳಿ

ಪ್ರಕಾಶ್ ಶೆಟ್ಟಿ

ಐದಾರು ವರ್ಷಗಳಲ್ಲೇ ದುಪ್ಪಟ್ಟಾದ ಅಡಿಕೆ ಬೆಳೆಯುವ ಪ್ರದೇಶ

ಬಯಲುಸೀಮೆ: ಅಡಿಕೆ ಘಮಲು!

• ವಿನಾಯಕ ಭಟ್

ಒಳನೋಟ
ಅಡಿಕೆಗಿಲ್ಲ ಗಡಿರೇಖೆ
ಪ್ರತಿಕ್ರಿಯಿಸಿ: 9606038256
feedback@prajavani.co.in

ದಾವಣಗೆರೆ: ಜಮೀನಿನಲ್ಲಿ ವರ್ಷವಿಡೀ ಬೆವರು ಹರಿಸಿದರೂ ಬದುಕಿನ ಬಂಡಿಯನ್ನು ಎಳೆಯಲು ಬೇಕಾದ ಕನಿಷ್ಠ ಆದಾಯವೂ ಕೈಗೆಟುಕದೆ ಬಯಲುಸೀಮೆ ಭಾಗದ ರೈತರು ಹತಾಶರಾಗಿ ಸಾಂಪ್ರದಾಯಿಕ ಕೃಷಿ ಬೆಳೆಗಳಿಂದ ವಿಮುಖರಾಗುತ್ತಿದ್ದಾರೆ. ಅಡಿಕೆ ಬೆಳೆಗಾರರ ಬದುಕಿನಲ್ಲಾಗುತ್ತಿರುವ 'ಆರ್ಥಿಕ' ಹಾಗೂ 'ಸಾಮಾಜಿಕ' ಬದಲಾವಣೆಗಳಿಂದ ಪ್ರಭಾವಿತರಾಗುತ್ತಿರುವ ಈ ಭಾಗದ ರೈತರು, 'ಹೆಚ್ಚು ಆದಾಯ ಪಡೆಯಬೇಕು' ಎಂಬ ಕನಸಿನ ಬೆನ್ನೇರಿ ಅಡಿಕೆ ತೋಟ ಮಾಡುತ್ತಿದ್ದಾರೆ.

ಇದರ ಪರಿಣಾಮವೇ ಬಯಲುಸೀಮೆಯ ಹಲವು ಜಿಲ್ಲೆಗಳಲ್ಲಿ ಅಡಿಕೆ ಬೆಳೆಯುವ ಪ್ರದೇಶ ಐದಾರು ವರ್ಷಗಳಲ್ಲೇ ದುಪ್ಪಟ್ಟಾಗಿದ್ದು, ಅಲ್ಲೂ ಅಡಿಕೆಯ ಘಮಲು ಪಸರಿಸುತ್ತಿದೆ.

ಕರಾವಳಿ- ಮಲೆನಾಡಿನ ಪ್ರಮುಖ ಬೆಳೆಯಾಗಿದ್ದ ಅಡಿ ಕೆಗೆ ಸಿಗುತ್ತಿರುವ 'ಚಿನ್ನದ ಬೆಲೆ'ಯು ಬಯಲುಸೀಮೆಯ ರೈತರನ್ನು ಬೆರಗುಗೊಳಿಸಿದೆ. ತುಮಕೂರು, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಗದಗ, ಬಳ್ಳಾರಿ ಜಿಲ್ಲೆಗಳ ರೈತರು ಅಲ್ಲಿರುವ ಅಲ್ಪಸ್ವಲ್ಪ ನೀರಾವರಿ ಸೌಲಭ್ಯ ಬಳಸಿಕೊಂಡು ಅಡಿಕೆ ತೋಟ ನಿರ್ಮಿಸುತ್ತಿದ್ದಾರೆ. ಕರಾವಳಿ–ಮಲೆನಾಡಿನ ಅಡಿಕೆ ಬೆಳೆಗಾರರೊಂದಿಗೆ ಅಲ್ಲಿನ ರೈತರು ಪೈಪೋಟಿಗೆ ಇಳಿದಿದ್ದಾರೆ.

ತೋಟಗಾರಿಕೆ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ 2021ರ ಅಂತ್ಯಕ್ಕೆ 5.63 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದ್ದು, ವಾರ್ಷಿಕ ಅಂದಾಜು 8.64 ಲಕ್ಷ ಟನ್ ಅಡಿಕೆ ಉತ್ಪಾದನೆಯಾಗುತ್ತಿದೆ.

2017–18ರಿಂದ 2021–22ವರೆಗಿನ ಐದು ವರ್ಷಗಳ ಅವಧಿಯಲ್ಲಿ ತುಮಕೂರು ಜಿಲ್ಲೆಯಲ್ಲಿ 34,839 ಹೆಕ್ಟೇರ್ (ಶೇ 99), ಚಿತ್ರದುರ್ಗ ಜಿಲ್ಲೆಯಲ್ಲಿ 20,061 ಹೆಕ್ಟೇರ್ (ಶೇ 85), ದಾವಣಗೆರೆ ಜಿಲ್ಲೆಯಲ್ಲಿ 28,811 ಹೆಕ್ಟೇರ್ (ಶೇ 60) ಹಾಗೂ ಹಾವೇರಿ ಜಿಲ್ಲೆಯಲ್ಲಿ 5,901 ಹೆಕ್ಟೇರ್‌ನಷ್ಟು (ಶೇ 301) ಅಡಿಕೆ ಬೆಳೆಯುವ ಪ್ರದೇಶ ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ 24,214 ಹೆಕ್ಟೇರ್ (ಶೇ 109) ಏರಿಕೆಯಾಗಿದೆ.

ಐದು ವರ್ಷಗಳ ಹಿಂದೆ ಗದಗ ಜಿಲ್ಲೆಯಲ್ಲಿ ಕೇವಲ 22 ಎಕರೆಯಷ್ಟಿದ್ದ ಅಡಿಕೆ ಕ್ಷೇತ್ರ ಇದೀಗ 250 ಎಕರೆಗೆ ವಿಸ್ತರಣೆಗೊಂಡಿದೆ. ಮುಂಡರಗಿ, ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲ್ಲೂಕಿನ ರೈತರು ಅಡಿಕೆ ಬೆಳೆಯತ್ತ ಒಲವು ತೋರಿಸುತ್ತಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಅಡಿಕೆ ಬೆಳೆ ವಿಸ್ತರಣೆ ತೀವ್ರಗತಿಯಲ್ಲಿ ನಡೆಯುತ್ತಿದ್ದು, ರೈತರೊಬ್ಬರ ತೋಟದಲ್ಲಿ ಅಡಿಕೆ ಸಸಿಗಳನ್ನು ಬೆಳೆಸಿರುವುದು

ಪ್ರಜಾವಾಣಿ ಚಿತ್ರ – ವಿ. ಚಂದ್ರಪ್ಪ

ಅಡಿಕೆ ಬೆಳೆ ವಿಸ್ತರಣೆ ವಿವರ (ಹೆಕ್ಟೇರ್‌ಗಳಲ್ಲಿ)

ಜಿಲ್ಲೆ	2017-18	2018-19	2019-20	2020-21	2021-22
ತುಮಕೂರು	35,161	55,147	55,708	65,771	70,000
ಚಿತ್ರದುರ್ಗ	23,697	33,690	34,314	38,873	43,758
ದಾವಣಗೆರೆ	47,895	56,344	65,279	69,711	76,796
ಹಾವೇರಿ	1,955	6,409	7,087	7,158	7,856
ಚಿಕ್ಕಮಗಳೂರು	22,057	31,438	37,679	41,386	46,271

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ಶಿಷ್ಟಾಚಾರ: ನಿಲ್ಲದ ವಾಕ್ಸಮರ

ಪ್ರತಿಮೆ ಅನಾವರಣ: ಎಚ್‌ಡಿಡಿ, ಸಿದ್ದರಾಮಯ್ಯ ಹೆಸರಿಲ್ಲ–ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಅನಾವರಣ ಸಮಾರಂಭದಿಂದ ವಿರೋಧ ಪಕ್ಷಗಳ ಪ್ರಮುಖರನ್ನು ದೂರ ಇಟ್ಟಿರುವುದು ಆಡಳಿತ ಮತ್ತು ಪ್ರತಿಪಕ್ಷಗಳ ಮಧ್ಯೆ ತೀವ್ರ ವಾಕ್ಸಮರಕ್ಕೆ ಎಡೆಮಾಡಿದೆ. ಸರ್ಕಾರದ ನಿಲುವಿಗೆ ಜೆಡಿಎಸ್ ಮತ್ತು ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿವೆ.

ಒಕ್ಕಲಿಗ ಸಮುದಾಯದ ಪ್ರಮುಖ ರಾಜಕಾರಣಿಯೂ ಆಗಿರುವ ರಾಜ್ಯಸಭೆಯ ಜೆಡಿಎಸ್ ಸದಸ್ಯ ಎಚ್‌. ಡಿ. ದೇವೇಗೌಡರು ಸಮಾರಂಭದಲ್ಲಿ ಪಾಲ್ಗೊಂಡಿರಲಿಲ್ಲ. ಅವರಿಗೆ ಆಹ್ವಾನವನ್ನೇ ನೀಡಿರಲಿಲ್ಲ ಎಂದು ಜೆಡಿಎಸ್ ಶುಕ್ರವಾರವೇ ದೂರಿತ್ತು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದೇವೇಗೌಡರಿಗೆ ಬರೆದಿದ್ದ ಪತ್ರವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಬಿಜೆಪಿ ಮುಖಂಡರು, 'ಕೆಂಪೇಗೌಡರ ಪ್ರತಿಮೆ ಅನಾವರಣ ಸಮಾರಂಭಕ್ಕೆ ಆಹ್ವಾನ ನೀಡಿಲ್ಲ ಎಂಬ ಆರೋಪದಲ್ಲಿ ಹುರುಳಿಲ್ಲ' ಎಂದಿದ್ದರು. ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ ಹಲವರು ಇದೇ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಅದಕ್ಕೆ ಮತ್ತೆ ಪ್ರತಿಕ್ರಿಯಿಸಿರುವ ಜೆಡಿಎಸ್ ನಾಯಕರು, 'ಮುಖ್ಯಮಂತ್ರಿ ಕಚೇರಿಯಿಂದ ಕಾಟಾಚಾರಕ್ಕೆ ಎಂಬಂತೆ ಆಹ್ವಾನ ನೀಡಲಾಗಿತ್ತು. ತಡರಾತ್ರಿ ಪತ್ರ ಕಳುಹಿಸಿದ್ದರು' ಎಂದು ತಿರುಗೇಟು ನೀಡಿದ್ದಾರೆ.

5ನೇ ಪುಟ ನೋಡಿ

ಇಡಬ್ಲ್ಯುಎಸ್: ತಮಿಳುನಾಡು ತಿರಸ್ಕಾರ

ಚೆನ್ನೈ (ಪಿಟಿಐ): ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿಯನ್ನು ಶನಿವಾರ ಇಲ್ಲಿ ನಡೆದ ಸರ್ವ ಪಕ್ಷಗಳ ಸಭೆ ತಿರಸ್ಕರಿಸಿತು.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅಧ್ಯಕ್ಷತೆಯಲ್ಲಿ ನಡೆದ ಸರ್ವಪಕ್ಷ ಸಭೆಯು, 'ಇಡಬ್ಲ್ಯುಎಸ್‌ನವರಿಗೆ ಕೇಂದ್ರ ಸರ್ಕಾರ ನೀಡಿರುವ ಮೀಸಲಾತಿ ಬಡವರಲ್ಲಿ ಜಾತಿ ತಾರತಮ್ಯಕ್ಕೆ ಕಾರಣವಾಗಿದೆ' ಎಂದು ಪ್ರತಿಪಾದಿಸಿತು.

'ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲ ಪಕ್ಷಗಳು ಈ ವಿಷಯಕ್ಕೆ ಸಂಬಂಧಿಸಿ ತಮ್ಮ ಬೆಂಬಲ ವ್ಯಕ್ತಪಡಿಸಿದವು' ಎಂದು ಉನ್ನತ ಶಿಕ್ಷಣ ಸಚಿವ ಕೆ.ಪೊನ್ಮುಡಿ ಅವರು ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಪ್ರಮುಖ ವಿರೋಧ ಪಕ್ಷ ಎಐಎಡಿಎಂಕೆ ಹಾಗೂ ಅದರ ಮಿತ್ರಪಕ್ಷ ಬಿಜೆಪಿ ಈ ಸಭೆಯನ್ನು ಬಹಿಷ್ಕರಿಸಿದ್ದವು. ಅಲ್ಲದೇ, ಈ ತಿದ್ದುಪಡಿಯನ್ನು ವಿರೋಧಿಸಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗುವ ಮರುಪರಿಶೀಲನಾ ಅರ್ಜಿಯಲ್ಲಿ ಈ ಕುರಿತು ದೃಢವಾದ ಅಭಿಪ್ರಾಯಗಳನ್ನು ದಾಖಲಿಸುವಂತೆ ಈ ಎರಡು ಪಕ್ಷಗಳು ಒತ್ತಾಯಿಸಿವೆ.

ಇಡಬ್ಲ್ಯುಎಸ್‌ನವರಿಗೆ ಶೇ 10ರಷ್ಟು ಮೀಸಲಾತಿ ನೀಡುವ ಸಂವಿಧಾನದ 103ನೇ ತಿದ್ದುಪಡಿಯನ್ನು ಎತ್ತಿಹಿಡಿದು ಸುಪ್ರೀಂಕೋರ್ಟ್‌ನ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ನ್ಯಾಯಪೀಠ ನ. 8ರಂದು ನೀಡಿರುವ ತೀರ್ಪನ್ನು ಪ್ರಶ್ನಿಸಿ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸುವುದಾಗಿ ಆಡಳಿತಾರೂಢ ಡಿಎಂಕೆ ಈಗಾಗಲೇ ಘೋಷಿಸಿದೆ.

ಇನ್ನೊಂದು ಸುದ್ದಿ 6

ಬಿಡಿಎ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿ ● ಅನುಮೋದನೆ ನೀಡಲು ಮುಂದಾದ ರಾಜ್ಯ ಸರ್ಕಾರ

ಸರ್ಕಾರಿ ಕಟ್ಟಡಗಳ ಎಫ್‌ಎಆರ್ 5ಕ್ಕೆ ಹೆಚ್ಚಳ?

• ಮಂಜುನಾಥ್ ಹೆಬ್ಬಾರ್

ಪ್ರಜಾವಾಣಿ ವಿಶೇಷ

ನವದೆಹಲಿ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಇಲಾಖೆಗಳು ಕಟ್ಟಡ ನಿರ್ಮಾಣ ಮಾಡುವಾಗ ಒಟ್ಟು 5ರಷ್ಟು ಎಫ್‌ಎಆರ್ (ಫ್ಲೋರ್ ಏರಿಯಾ ರೇಶಿಯೊ) ನೀಡಲು ಕರ್ನಾಟಕ ಸರ್ಕಾರ ಮುಂದಾಗಿದೆ. ಈ ಮೂಲಕ ಬೆಂಗಳೂರು ಉಪನಗರ ರೈಲು ಯೋಜನೆಗೆ ಸಂಪನ್ಮೂಲ ಕ್ರೋಡೀಕರಣ ಮಾಡುವ ಗುರಿ ಹೊಂದಿದೆ.

ಬಿಡಿಎ 2015ರ ನಗರ ಮಹಾಯೋಜನೆ ಪ್ರಕಾರ ಬೆಂಗಳೂರಿನಲ್ಲಿ ಗರಿಷ್ಠ 3.25ರಷ್ಟು ಎಫ್‌ಎಆರ್‌ಗೆ ಅವಕಾಶವಿದೆ. 2031ರ ನಗರ ಮಹಾ ಯೋಜನೆಯ ಈ ಹಿಂದಿನ ಕರಡಿನಲ್ಲಿ ಮೆಟ್ರೊ ನಿಲ್ದಾಣಗಳ ಬಳಿ ಗರಿಷ್ಠ 4 ಎಫ್‌ಎಆರ್‌ವರೆಗೆ ಅವಕಾಶ ಕಲ್ಪಿಸುವ ಪ್ರಸ್ತಾವವಿತ್ತು. ರೈಲ್ವೆ, ಆದಾಯ ತೆರಿಗೆ ಇಲಾಖೆ ಹಾಗೂ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಸೇರಿ ಹಲವು ಇಲಾಖೆಗಳು ಎಫ್‌ಎಆರ್ ಅನ್ನು 5ಕ್ಕೆ ಏರಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದವು. ವಿವಿಧ ಇಲಾಖೆಗಳು ಕಟ್ಟಡ ನಿರ್ಮಿಸುವ ವೇಳೆ 5 ಎಫ್‌ಎಆರ್ ನೀಡಲು ಅನುಮೋದನೆ ಕೋರಿದರೆ ಅವಕಾಶ ನೀಡಬಹುದು ಎಂದು ನಗರಾಭಿವೃದ್ಧಿ ಇಲಾಖೆ ಪ್ರಸ್ತಾವನೆ ಸಿದ್ಧಪಡಿಸಿದ್ದು, ಮುಖ್ಯಮಂತ್ರಿ ಅವರ ಒಪ್ಪಿಗೆ ಬಾಕಿ ಇದೆ.

ಆದಾಯ ತೆರಿಗೆ ಇಲಾಖೆಯು ಬೆಂಗಳೂರಿನಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಲು ಮುಂದಾಗಿದೆ. ಅದರ ಹೊಣೆಯನ್ನು ಕೇಂದ್ರ ಲೋಕೋಪಯೋಗಿ ಇಲಾಖೆಗೆ ವಹಿಸಿದೆ. ಈ ಕಟ್ಟಡಕ್ಕೆ ಐದು ಎಫ್‌ಎಆರ್ ನೀಡುವಂತೆ ಆ ಇಲಾಖೆಯ ಅಧಿಕಾರಿಗಳು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಇತ್ತೀಚೆಗೆ ಮನವಿ ಮಾಡಿದ್ದಾರೆ.

ನಾಗವಾರ ಮೆಟ್ರೊ ನಿಲ್ದಾಣದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಅವಕಾಶವಾಗುವಂತೆ 5 ಎಫ್‌ಎಆರ್ ಬಳಸಲು ಅನುಮತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಬಿಎಂಆರ್‌ಸಿಎಲ್ 2021ರ ನವೆಂಬರ್ 6ರಂದು ಪ್ರಸ್ತಾವ ಸಲ್ಲಿಸಿದೆ.

ರೈಲ್ವೆ ಭೂಮಿ, ರೈಲ್ವೆ ನಿಲ್ದಾಣ ಹಾಗೂ ರೈಲ್ವೆ ಕಾಲೊನಿಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ಹೂಡಿಕೆ ತರಲು ರೈಲ್ವೆ ಇಲಾಖೆ ಉದ್ದೇಶಿಸಿದೆ. ಇದಕ್ಕೆ ರಾಜ್ಯ ಸರ್ಕಾರ ಅನುವು ಮಾಡಿಕೊಡಬೇಕು ಎಂದು ರೈಲ್ವೆ ಸಚಿವಾಲಯ 2021ರ ಜೂನ್ 25ರಂದು ಪತ್ರ ಬರೆದಿದೆ.

ಉಪನಗರ ರೈಲು ಯೋಜನೆಯ ಅನುಷ್ಠಾನಕ್ಕೆ ಬೆಂಗಳೂರಿನಲ್ಲಿ ರೈಲ್ವೆ ಆಸ್ತಿಯಿಂದ ₹14,186 ಕೋಟಿಯಷ್ಟು ನಗದೀಕರಣಕ್ಕೆ (ಸಂಪನ್ಮೂಲ ಸಂಗ್ರಹ) ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ–ರೈಡ್) ಮುಂದಾಗಿದೆ. ಮೊದಲ ಹಂತದಲ್ಲಿ 56.38 ಎಕರೆ ಆಸ್ತಿ ನಗದೀಕರಣಕ್ಕೆ ಅಣಿಯಾಗಿದೆ. ಉಪನಗರ ರೈಲು ಯೋಜನೆಯ ಕಾರಿಡಾರ್‌ಗಳ ಆಸುಪಾಸಿನಲ್ಲಿರುವ ರೈಲ್ವೆ ಜಾಗದಲ್ಲಿ ಬಹುಮಹಡಿ ಕಟ್ಟಡಗಳಿಗೆ ಅನುಮತಿ ನೀಡುವಾಗ 5ರವರೆಗೆ ಎಫ್‌ಎಆರ್ ಬಳಕೆಗೆ ಅವಕಾಶ ಕಲ್ಪಿಸುವ ಮೂಲಕ ಇಲ್ಲಿ ಹೂಡಿಕೆಗೆ ಅನುಕೂಲ ಕಲ್ಪಿಸುವುದು ಇದರ ಉದ್ದೇಶ. ಎಫ್‌ಎಆರ್ ಪ್ರಮಾಣವನ್ನು 5ಕ್ಕೆ ಹೆಚ್ಚಿಸಿದರೆ ಉಪನಗರ ರೈಲು ಯೋಜನೆಗೆ ಸಂಪನ್ಮೂಲ ಕ್ರೋಡೀಕರಣಕ್ಕೂ ಅನುಕೂಲವಾಗುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಎಫ್‌ಎಆರ್ ಎಂದರೇನು?

ನಿವೇಶನದ ಅಳತೆ ಆಧರಿಸಿ ನಿರ್ಮಿಸಬಹುದಾದ ಕಟ್ಟಡದ ವಿಸ್ತೀರ್ಣ ಮತ್ತು ಅಂತಸ್ತುಗಳ ಮಿತಿಯೇ ಎಫ್‌ಎಆರ್.

ನಿವೇಶನದ ವಿಸ್ತೀರ್ಣ ಮತ್ತು ಅದು ಇರುವ ರಸ್ತೆ ಅಗಲವನ್ನು ಆಧರಿಸಿ ಎಷ್ಟು ಮಹಡಿಯ ಕಟ್ಟಡ ನಿರ್ಮಿಸಬಹುದು ಅಥವಾ ಎಷ್ಟು ಮಹಡಿಗಳನ್ನು ನಿರ್ಮಿಸಲು ಅವಕಾಶ ನೀಡಬಹುದು ಎಂಬುದನ್ನು ಲೆಕ್ಕಾಚಾರ ಹಾಕಲಾಗುತ್ತದೆ.

ಎಫ್‌ಎಆರ್‌ಗಳನ್ನು ಮೂಲ ಎಫ್‌ಎಆರ್ (ನಿವೇಶನದ ಅಳತೆ ಆಧರಿಸಿದ್ದು), ಟಿಡಿಆರ್ (ಅಭಿವೃದ್ಧಿ ಹಕ್ಕು ವರ್ಗಾವಣೆ) ಆಧಾರದ ಎಫ್‌ಎಆರ್ ಹಾಗೂ ಪ್ರೀಮಿಯಂ ಎಫ್‌ಎಆರ್ ಎಂದು ವರ್ಗೀಕರಿಸಬಹುದು. ಪ್ರೀಮಿಯಂ ಎಫ್‌ಎಆರ್‌ಗಳನ್ನು ಸರ್ಕಾರವೇ ಮಾರಾಟ ಮಾಡುತ್ತದೆ.

ಟಿಡಿಆರ್ ಅಥವಾ ಪ್ರೀಮಿಯಂ ಎಫ್‌ಎಆರ್–ಅನ್ನು ಖರೀದಿಸಿ ಕಟ್ಟಡದಲ್ಲಿ ನಿವೇಶನದ ಅಳತೆಗೆ ನಿಗದಿಪಡಿಸಿದ ಎಫ್‌ಎಆರ್‌ಗಿಂತ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗುತ್ತದೆ. ನಿರ್ದಿಷ್ಟ ಪ್ರದೇಶದಲ್ಲಿ ಎಲ್ಲ ರೀತಿಯ ಎಫ್‌ಎಆರ್‌ಗಳನ್ನು ಸೇರಿಸಿ ಗರಿಷ್ಠ ಎಷ್ಟು ಅಂತಸ್ತುಗಳ ಅಥವಾ ವಿಸ್ತೀರ್ಣದ ಕಟ್ಟಡ ನಿರ್ಮಿಸಬಹುದು ಎಂಬ ಕುರಿತು ನಗರ ಮಹಾಯೋಜನೆಯಲ್ಲಿ ಮಿತಿ ನಿಗದಿಪಡಿಸಲಾಗುತ್ತದೆ.

ಲೋಪ ಸರಿಪಡಿಸಿದ ಅಕಾಡೆಮಿಗಳು

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಕಾಡೆಮಿಗಳು ತಮ್ಮ ಜಾಲತಾಣದಲ್ಲಿ ಕಾರ್ಯಕಾರಿ ಸಮಿತಿ ವಿವರದ ಬಗೆಗಿನ ಲೋಪವನ್ನು ಸರಿಪಡಿಸಿವೆ.

ಸಾಹಿತ್ಯ ಸೇರಿ ವಿವಿಧ ಅಕಾಡೆಮಿಗಳ ಅಧ್ಯಕ್ಷ, ಸದಸ್ಯರ ಮೂರು ವರ್ಷದ ಅಧಿಕಾರವಧಿ ಮುಗಿದು ತಿಂಗಳು ಕಳೆದರೂ ಜಾಲತಾಣದಲ್ಲಿ ಮಾಹಿತಿ ಪರಿಷ್ಕರಿಸಿರಲಿಲ್ಲ. ಜಾಲತಾಣಗಳಲ್ಲಿ ಅವರೇ ಹಾಲಿ ಅಧ್ಯಕ್ಷರೆಂದು ಹಳೆಯ ವಿವರಗಳೇ ಉಳಿದಿದ್ದವು. ಈ ಬಗ್ಗೆ 'ಪ್ರಜಾವಾಣಿ'ಯ ನ. 11ರ ಸಂಚಿಕೆಯಲ್ಲಿ 'ಮಾಜಿಗಳೆ ಹಾಲಿ ಅಧ್ಯಕ್ಷರು!' ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಲಾಗಿತ್ತು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜಾಲತಾಣದ ಮುಖಪುಟದಲ್ಲಿ ಬಿ.ವಿ. ವಸಂತಕುಮಾರ್ ಹಾಲಿ ಅಧ್ಯಕ್ಷರು ಎಂಬ ಮಾಹಿತಿಯಿತ್ತು. ಅದೇ ರೀತಿ, ಹಿಂದಿನ ಕಾರ್ಯಕಾರಿ ಸಮಿತಿಯ ವಿವರವನ್ನು ಹಾಲಿ ಕಾರ್ಯಕಾರಿ ಸಮಿತಿ ಎಂದು ಉಲ್ಲೇಖಿಸಲಾಗಿತ್ತು. ಈಗ ಆ ಮಾಹಿತಿಯನ್ನು ತೆಗೆದು, ಆಡಳಿತಾಧಿಕಾರಿಯಾಗಿ ನೇಮಕಗೊಂಡಿರುವ ಬನಶಂಕರಿ ವಿ.ಅಂಗಡಿ ಅವರ ಹೆಸರು ಸೇರಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯ ಜಾಲತಾಣವನ್ನೂ ಪರಿಷ್ಕರಿಸಲಾಗಿದೆ. ಮಂಜಮ್ಮ ಜೋಗತಿ ಅವರು ಪ್ರಸ್ತುತ ಅಧ್ಯಕ್ಷರು ಎಂಬ ಮಾಹಿತಿಯು ಹಾಗೇ ಉಳಿದಿತ್ತು. ಈಗ ಅವರ ಅಧಿಕಾರವಧಿಯನ್ನು ನಮೂದಿಸಲಾಗಿದೆ.

ನೈಋತ್ಯ ರೈಲ್ವೆ

ಅರ್ಜಿ ಸೂಚನೆ ಸಂ.: 210/Halt/SBC/11/2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಬೆಂಗಳೂರು–ಬಂಗಾರಪೇಟೆ ವಿಭಾಗದಲ್ಲಿ, ಕಮೀಷನ್ ಆಧಾರದ ಮೇರೆಗೆ ಕಾಯ್ದಿರಿಸದ ಟಿಕೇಟುಗಳನ್ನು ವಿತರಿಸುವ ಸಲುವಾಗಿ ಬ್ಯಾಟರಾಯನಹಳ್ಳಿ ಟ್ರೈನ್ ಹಾಲ್ಟ್ ನಿಲ್ದಾಣದ ಆಸುಪಾಸಿನಲ್ಲಿ ವಾಸಿಸುವ ವಿದ್ಯಾವಂತ ನಿರುದ್ಯೋಗಿಗಳಿಂದ ಮೊಹರು ಬಂದ ಮಾಡಿದ ಅರ್ಜಿಗಳ ಮೂಲಕ ಹಾಲ್ಟ್ ಏಜೆಂಟ್‌ಗಳ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಈ ಕೆಲಸವು ಐದು (05) ವರ್ಷಗಳ ಅವಧಿಯವರೆಗೆ ಅಥವಾ ನಿಲ್ದಾಣವನ್ನು ಉನ್ನತೀಕರಣ ಗೊಳಿಸುವವರೆಗೆ, ಯಾವುದು ಮೊದಲೋ ಅದುವರೆಗೆ ಚಾಲ್ತಿಯಲ್ಲಿರುತ್ತದೆ.

ಕೆಲಸವನ್ನು ತೊಡಗಿಸಿಕೊಳ್ಳಬೇಕಾದ ದಿನಾಂಕ: ಈ ದಿನಾಂಕವನ್ನು ಆಡಳಿತ ಮಂಡಳಿಯವರು ಸೂಚನೆಯ ಮೂಲಕ ತಿಳಿಸುತ್ತಾರೆ.

ಅರ್ಜಿಗಳನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ ಮತ್ತು ವೇಳೆ: 25.11.2022, 10:00 ರಿಂದ 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

PUB/480/AAD/PRB/SWR/2022-23

S.W.Railways | SWRRLY | SWRRLY

'ಬಿಕ್ಕಟ್ಟುಗಳಲ್ಲಿ ಸಿಲುಕಿದ ಸಾಹಿತ್ಯ ಲೋಕ'

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್. ಎಲ್. ಪುಷ್ಪಾ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಸನ್ನಿವೇಶದಲ್ಲಿ ಸಾಹಿತ್ಯ ಲೋಕ ಹಲವು ಬಿಕ್ಕಟ್ಟುಗಳಲ್ಲಿ ಸಿಲುಕಿಕೊಂಡಿದೆ. ಅವುಗಳನ್ನು ಮೀರಿ ಬರವಣಿಗೆಯಲ್ಲಿ ತೊಡಗುವ ಸವಾಲು ನಮ್ಮ ಮುಂದಿದೆ' ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್. ಎಲ್.ಪುಷ್ಪಾ ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘ ಮತ್ತು ಕಮಲಾ ಹಂಪನಾ ಸಾಹಿತ್ಯ ವೇದಿಕೆ ಜಂಟಿಯಾಗಿ ಶನಿವಾರ ಇಲ್ಲಿ ಏರ್ಪಡಿಸಿದ್ದ 'ನಾಡೋಜ ಡಾ. ಕಮಲಾ ಹಂಪನಾ ದತ್ತಿ ಉಪನ್ಯಾಸ' ಕಾರ್ಯಕ್ರಮದಲ್ಲಿ ಎಸ್.ಪಿ.ಪದ್ಮ ಪ್ರಸಾದ್ ಹಾಗೂ ಹನುಮಾಕ್ಷಿ ಗೋಗಿ ಅವರಿಗೆ ಕಮಲಾ ಹಂಪನಾ ಹೆಸರಿನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಎಸ್.ಪಿ.ಪದ್ಮಪ್ರಸಾದ್ ಮತ್ತು ಹನುಮಾಕ್ಷಿ ಗೋಗಿ ಅವರಿಗೆ 'ಕಮಲಾ ಹಂಪನಾ ದತ್ತಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ಎಡದಿಂದ) ಸಾಹಿತಿ ಹಂ.ಪ.ನಾಗರಾಜಯ್ಯ, ಎಚ್.ಎಲ್. ಪುಷ್ಪಾ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಬಿ.ಯು. ಸುಮಾ ಮತ್ತು ಹಾಗೂ ಕಮಲಾ ಹಂಪನಾ ಇದ್ದಾರೆ. –ಪ್ರಜಾವಾಣಿ ಚಿತ್ರ

ಪ್ರಾಧ್ಯಾಪಕಿ ಬಿ.ಯು.ಸುಮಾ, 'ಸಂಶೋಧನಾ ಪ್ರಕಾರ ಇಂದು ವಿಸ್ತಾರವಾಗಿದೆ. ಕಮಲಾ ಹಂಪನಾ ಅವರ ಸಂಶೋಧನಾ ಕೃತಿಗಳು ವಸ್ತು ವೈವಿಧ್ಯದಿಂದ ಕೂಡಿದ್ದು, ಭಾಷಾ ವೈವಿಧ್ಯತೆಯನ್ನು ಅವರ ಬರಹಗಳಲ್ಲಿ ಕಾಣಬಹುದು' ಎಂದು ತಿಳಿಸಿದರು.

ಸಾಹಿತಿ ಕಮಲಾ ಹಂಪನಾ, 'ಕನ್ನಡಿಗರು ಕನ್ನಡ ಭಾಷೆಯ ಮೂಲಕವೇ ಹೇಗೆ ಜೀವಿಸಬೇಕು ಎಂಬುದನ್ನು ನಾನು ನನ್ನ ಗುರುಗಳಿಂದ ಕಲಿತಿದ್ದೇನೆ. ಕಾವ್ಯವನ್ನು ಹೇಗೆ ಓದಬೇಕು? ಹಳಗನ್ನಡ ಹಾಗೂ ನಡುಗನ್ನಡವನ್ನು ಅರ್ಥೈಸಿಕೊಳ್ಳುವ ಮತ್ತು ಸಂವಹನ ನಡೆಸುವ ಬಗ್ಗೆ ತೀ.ನಂ. ಶ್ರೀಕಂಠಯ್ಯ, ತಾ.ಸು. ಶ್ಯಾಮ ರಾಯ ಮತ್ತು ಪರಮೇಶ್ವರ ಭಟ್ ಅವರಿಂದ ಕಲಿತುಕೊಂಡೆ' ಎಂದರು.

ಪ್ರಶಸ್ತಿ ಪುರಸ್ಕೃತ ಎಸ್.ಪಿ.ಪದ್ಮಪ್ರಸಾದ್, 'ಇತ್ತೀಚಿನ ದಿನ ಗಳಲ್ಲಿ ಸಂಶೋಧಕರು ಹಾಗೂ ವಿಮರ್ಶ ಕರ ಸಂಖ್ಯೆ ಕ್ಷೀಣಿಸುತ್ತಿದೆ. ಈ ಬೆಳವಣಿಗೆಯಿಂದ ಒಂದು ಪ್ರದೇಶದ ಸಂಸ್ಕೃತಿ, ಸಾಹಿತ್ಯ ಬೆಳೆಯದು' ಎಂದರು.

ಹನುಮಾಕ್ಷಿ ಗೋಗಿ, 'ರಾಜ್ಯದಾದ್ಯಂತ ಇರುವ ಎಲ್ಲ ಶಾಸನಗಳು ಹಾಗೂ ಜೈನ ಕವಿಗಳ ಬಗ್ಗೆ ಅಧ್ಯಯನ ನಡೆಸಬೇಕು. ಮಹಿಳೆಯರು ವ್ಯಾಕರಣಾತ್ಮಕ ಸಂಶೋಧನೆ ಕಡೆಗೂ ಗಮನ ಹರಿಸಬೇಕು' ಎಂದರು.

ಸುದ್ದಿ 2 ನಿಮಿಷ

ಟಿಪ್ಪು ಪ್ರತಿಮೆ ನಿರ್ಮಿಸಿದರೆ ತಪ್ಪೇನು?: ಸಿದ್ದರಾಮಯ್ಯ

ಬೆಂಗಳೂರು: 'ಟಿಪ್ಪು ಪ್ರತಿಮೆ ನಿರ್ಮಿಸಲಿ ಬಿಡಿ. ಅದರಲ್ಲಿ ತಪ್ಪೇನಿದೆ?' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಮೈಸೂರಲ್ಲಿ ಟಿಪ್ಪು ಪ್ರತಿಮೆ ನಿರ್ಮಾಣ ಮಾಡುವುದಾಗಿ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಯವರು ಇತಿಹಾಸ ತಿರುಚುವವರು' ಎಂದರು.

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ, 'ಟಿಪ್ಪು ಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಬೆಳವಾಡಿ ಮಲ್ಲಮ್ಮ ಅವರೆಲ್ಲರೂ ಬ್ರಿಟಿಷರ ವಿರುದ್ಧ ಹೋರಾಡಿದ್ದಾರೆ. ಅವರ ಪ್ರತಿಮೆಗಳ ನಿರ್ಮಿಸುವ ಅಪೇಕ್ಷೆಗೆ ಯಾರೂ ವಿರೋಧಿಸಬಾರದು' ಎಂದರು.

ಶಾಸಕ ಜಿ.ಪರಮೇಶ್ವರ ಮಾತನಾಡಿ, 'ಟಿಪ್ಪು ಪ್ರತಿಮೆ ಕುರಿತು ಬಿಜೆಪಿಯವರು ಮುಗಿಬಿದ್ದಿದ್ದಾರೆ. ಮೊದಲಿನಿಂದಲೂ ವಿರೋಧಿಸುತ್ತಲೇ ಬಂದಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಪ್ರತಿಮೆ ನಿರ್ಮಿಸುವ ವಿಚಾರದಲ್ಲಿ ತನ್ವೀರ್ ಸೇಠ್ ಅವರ ಅಭಿಪ್ರಾಯದ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದರು.

'ರಾಜ್ಯದಲ್ಲಿ ಎಲ್ಲೇ ಟಿಪ್ಪು ಪ್ರತಿಮೆ ಸ್ಥಾಪಿಸಿದರೂ ಅದನ್ನು ಧ್ವಂಸ ಮಾಡುತ್ತೇವೆ' ಎಂಬ ಶ್ರೀರಾಮಸೇನೆಯ ಮುಖಂಡ ಪ್ರಮೋದ್ ಮುತಾಲಿಕ್ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಈ ವಿಷಯದಲ್ಲಿ ಮುಖ್ಯಮಂತ್ರಿ ಉತ್ತರಿಸಬೇಕು. ಬೊಮ್ಮಾಯಿ ಅವರು ನಾವು ಎಲ್ಲ ವರ್ಗದವರ ರಕ್ಷಣೆ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡಿದ್ದಾರೆ. ಇದು ಅವರ ಕರ್ತವ್ಯ' ಎಂದರು.

ಟನ್ ಕಬ್ಬಿಗೆ ₹500 ಪ್ರೋತ್ಸಾಹ ಧನ: ಮುಖ್ಯಮಂತ್ರಿಗೆ ಶಾಸಕರ ಮನವಿ

ಬೆಂಗಳೂರು: ಟನ್ ಕಬ್ಬಿಗೆ ₹500 ಪ್ರೋತ್ಸಾಹಧನ ನೀಡುವುದರ ಜತೆಗೆ, ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು ಎಂದು ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ.

ಉತ್ಪಾದನಾ ವೆಚ್ಚ, ರಾಸಾಯನಿಕ ಗೊಬ್ಬರಗಳ ಬೆಲೆ ಏರಿಕೆ,ಕಟಾವು ಮತ್ತು ಸಾಗಣೆ ವೆಚ್ಚ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಅದರ ಅನುಸಾರವಾಗಿ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಯಾಗಿಲ್ಲ. ಇದರಿಂದ ಕಬ್ಬು ಬೆಳೆಗಾರರ ಬದುಕು ದುಸ್ತರವಾಗಿದೆ ಎಂದೂ ಗಮನಸೆಳೆದಿದ್ದಾರೆ.

ಸರ್ಕಾರ ಈಗ ನಿಗದಿಪಡಿಸಿರುವ ಟನ್ ಕಬ್ಬಿನ ಬೆಲೆಯಿಂದ ಕಬ್ಬು ಬೆಳೆಗಾರರಿಗೆ ಲಾಭ ಸಿಗುತ್ತಿಲ್ಲ. ಮೈಸೂರು ದಸರಾ ಉತ್ಸವದ ಸಮಯದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸಲು ಜನಪ್ರತಿನಿಧಿಗಳು ಮತ್ತು ರೈತ ಮುಖಂಡರ ಸಭೆಯನ್ನು ಕರೆಯುವುದಾಗಿ ಭರವಸೆ ನೀಡಿದ್ದೀರಿ. ಈವರೆಗೂ ಸಭೆ ನಡೆಸಿಲ್ಲ. ಇದರಿಂದ ಹತಾಶರಾಗಿರುವ ರೈತರು ಪ್ರತಿಭಟನೆಗೆ ಮುಂದಾಗಿದ್ದಾರೆ ಎಂದೂ ಅವರು ವಿವರಿಸಿದ್ದಾರೆ.

Azadi Ka Amrit Mahotsav | icmr INDIAN COUNCIL OF MEDICAL RESEARCH | NIMS NATIONAL INSTITUTE OF MEDICAL STATISTICS

DEPT. OF HEALTH RESEARCH, MOH&FW,
Govt. of India, Nirmal Bhawan- ICMR Complex, Poojanahalli Road, Kannamangala Post, Bengaluru–562 110, Telephone: 080-22176400

Advertisement No. 14 & 15/2022

Applications are invited for **WALK-IN-INTERVIEW** for the various temporary / contractual project posts i.e. **Project Scientist – C (Medical), Project Scientist – C (Non-Medical), Project Scientist – B (Medical), Research Associate – III, Computer Programmer (Grade A), Computer Programmer (Grade B), Project Technical Officer (Statistics), Project Technical Officer, Project Assistant, Data Entry Operator (Grade A), Data Entry Operator (Grade B), Project Admin Assistant.** Detailed advertisement and other terms and conditions can be viewed / downloaded from the websites **www.ncdirindia.org / www.icmr.nic.in**

Sd/-
Director

ಪಾಸ್ ಬಳಕೆಗೆ ಸಮಯ ನಿಗದಿ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ದಿನದ 24 ಗಂಟೆಯೂ ಪಾಸ್ ಬಳಸಿ ಪ್ರಯಾಣ ಮಾಡಬಹುದು ಎಂದು ಬಿಎಂಟಿಸಿ ಸ್ಪಷ್ಟಪಡಿಸಿದೆ.

ಸಂಜೆ 7.30ರ ನಂತರ ಪಾಸ್ ಮಾನ್ಯವಿಲ್ಲವೆಂದು ಕೆಲ ನಿರ್ವಾಹಕರು ವಿದ್ಯಾರ್ಥಿಗಳಿಗೆ ಟಿಕೆಟ್ ನೀಡುತ್ತಿರುವ ಬಗ್ಗೆ ವಿದ್ಯಾರ್ಥಿಗಳು ಬಿಎಂಟಿಸಿ ಕಚೇರಿಗೆ ದೂರು ನೀಡಿದ್ದರು. ಈ ಸಂಬಂಧ ಸ್ಪಷ್ಟನೆ ನೀಡಿರುವ ಅಧಿಕಾರಿಗಳು, 'ಪಾಸ್ ಹೊಂದಿರುವ ವಿದ್ಯಾರ್ಥಿಗಳ ಬಳಿ ನಿರ್ವಾಹಕರು ಟಿಕೆಟ್ ಪಡೆಯುವಂತಿಲ್ಲ. ವಿದ್ಯಾರ್ಥಿಗಳು ಪಾಸ್ ಬಳಸಿ ಯಾವ ಸಮಯದಲ್ಲಾದರೂ ಪ್ರಯಾಣಿಸಬಹುದು' ಎಂದು ತಿಳಿಸಿದ್ದಾರೆ.

ಚಾಣಕ್ಯ ವಿ.ವಿ ಲಾಂಛನ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಣಕ್ಯ ವಿಶ್ವವಿದ್ಯಾಲಯವು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ತನ್ನ ಲಾಂಛನವನ್ನು ಅನಾವರಣ ಮಾಡಿತು.

'ಮೌಲ್ಯ ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ವಿಶ್ವವಿದ್ಯಾಲಯದ ಧ್ಯೇಯವು ಲಾಂಛನದ ಮೂಲಕ ವ್ಯಕ್ತವಾಗಿರುವುದು ಸಂತಸ ತಂದಿದೆ' ಎಂದು ಉದ್ಯಮ್ ಲರ್ನಿಂಗ್ ಫೌಂಡೇಶನ್ ಸಂಸ್ಥಾಪಕ ಮೇಕಿನ್ ಮಹೇಶ್ವರಿ ತಿಳಿಸಿದರು.

'ಲಾಂಛನವು ವಿಶ್ವವಿದ್ಯಾಲಯದ ತತ್ವ, ಧ್ಯೇಯ ನಿಷ್ಠೆಯನ್ನು ಬಿಂಬಿಸುತ್ತದೆ. ಲಾಂಛನ ಅನಾವರಣವು ಐತಿಹಾಸಿಕ ಸಂದರ್ಭ. ಇದ ರಲ್ಲಿ ವಿ.ವಿಯ ಸಂಪೂರ್ಣ ದೃಷ್ಟಿ ಬಿಂಬಿತವಾಗಿದೆ' ಎಂದು ಚಾಣಕ್ಯ ವಿವಿಯ ಕುಲಪತಿ ಪ್ರೊ. ಯಶವಂತ ಡೋಂಗ್ರೆ ತಿಳಿಸಿದರು.

'ಲಾಂಛನ ಅನಾವರಣ ಕಾರ್ಯಕ್ರಮವು ವಿಶ್ವವಿದ್ಯಾಲಯದ ಅಧಿಕೃತ ಲೋಕಾರ್ಪಣೆಗೆ ಮುನ್ನುಡಿಯಾಗಿದೆ. 2022ರ ನ.19ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ' ಎಂದರು.

ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಸುಶಾಂತ್ ಜೋಶಿ, ಸಂವಹನ ನಿರ್ದೇಶಕ ವಿನಯಚಂದ್ರ ಬನವತಿ ಇದ್ದರು.

ನಿಧನ ವಾರ್ತೆ

ಕೆ.ಜಿ.ಮೂರ್ತಿ

ಡಾಬಸ್‌ಪೇಟೆ: ನೆಲಮಂಗಲ ತಾಲ್ಲೂಕು ನರಸೀಪುರ ಆತ್ಮರಾಮ ಪ್ರೌಢಶಾಲೆಯ ಪ್ರಭಾರ ಮುಖ್ಯಶಿಕ್ಷಕ ಕೆ.ಜಿ.ಮೂರ್ತಿ ಅವರು ಶನಿವಾರ ತುಮಕೂರಿನ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. 1991ರಲ್ಲಿ ಶಾಲೆಗೆ ಸೇರಿದ್ದು, 32 ವರ್ಷ ಕಾರ್ಯನಿರ್ವಹಿಸಿದ್ದರು. ಅಂತ್ಯಕ್ರಿಯೆ ಸ್ವಗ್ರಾಮ ಕಾಟೇನಹಳ್ಳಿಯಲ್ಲಿ ಭಾನುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

PUBLIC NOTICE

Public are hereby informed that our client intends to enter into an arrangement of joint development in respect of residentially converted lands comprised in various survey numbers described in the Schedule hereunder (hereinafter collectively referred to as the Schedule Property) with its respective owners as mentioned in the Schedule hereunder, who have represented to be the absolute owners of their respective constituent parcels of the Schedule Property with uninhibited rights of alienation over the same.

Any person claiming to have any manner of right, title, claim or interest in the Schedule Property is hereby called upon to notify the undersigned with supporting documents thereof within Fourteen (14) days from the date of this notice, after which period, our client shall proceed with the joint development of the constituent parcels of the Schedule Property on the basis that there are no claims of whatsoever nature with regard to the Schedule Property or any part thereof nor any objections for our client entering into an arrangement for joint development of the Schedule Property with the owners.

SCHEDULE
(Description of the Schedule Property)

All that piece and parcel of immovable property being residentially converted lands aggregately measuring 4 Acres 18 Guntas, situated in Gonighattapura Village, Sarjapura Hobli, Anekal Taluk, Bengaluru Urban District:

No.	Survey No.	Extent (Guntas)	Name of the Owner/s
1.	91/4	18	Shri. Srinivasamurthy C., son of Late Chikka Annaiah
2.	91/6	4.5	
3.	91/8	13.5	
4.	91/5	17	Smt. Ambuja, wife of Late Ramachandra D. M. Shri. Rajendra D. M., son of Late Munivenkatappa, Shri. Prakash D. M., son of Late Munivenkatappa
5.	91/7	4.5	
6.	91/9	13.5	
7.	90/2A	3	Shri. Nanja Reddy, son of Late Muniswamy Reddy
8.	90/2B	15	
9.	90/3	18	
10.	90/4	17	Shri. Y. Srinivas, son of Late Yallappa
11.	90/6	3.5	
12.	90/8	15.5	
13.	90/5	17	Shri. Ramachandra Y. C., son of Late Yallappa, Shri. M. Lakshmanakumar, son of Late Munivenkatappa
14.	90/7	3.5	
15.	90/9	14.5	

The Schedule Property is compositely bounded as follows:
East by : Lands comprised in Survey Nos. 91/2A, 91/2B and 91/3 owned by Smt. Puttamma;
West by : Private Property;
North by: Lands comprised in Survey Nos. 90/1 and 91/1; and
South by: Road.

Place: Bengaluru **Date:** November 13, 2022

Sd./- Anirudh Shenoy, **CrestLaw Partners**
No. 33, Xavier Layout, 1st Cross, Victoria Road,
Bengaluru–560 047. **Ph: 080 – 4147 3535 / 36 / 37**

ಬಬ್ಬೂರುಕಮ್ಮೆ ಸೇವಾ ಸಮಿತಿ (ರಿ.)
ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿ ವಿದ್ಯಾರ್ಥಿ ನಿಲಯ, ನಂ. 17, ಶೇಷಾದ್ರಿ ರಸ್ತೆ, ಬೆಂಗಳೂರು–560 009 ದೂರವಾಣಿ ಸಂಖ್ಯೆ: 080–22281848, 9380301904
Reg.No. 246/34-35

2021–2022 ನೇ ಸಾಲಿನ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರ

ಬಬ್ಬೂರುಕಮ್ಮೆ ಸೇವಾ ಸಮಿತಿಯ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯು ದಿನಾಂಕ: 20–11–2022ನೇ ಭಾನುವಾರ, ಮಧ್ಯಾಹ್ನ 2.30 ಘಂಟೆಗೆ ಸಮಿತಿಯ ಅಧ್ಯಕ್ಷರಾದ **ಡಾ. ಎ. ವಿ. ಪ್ರಸನ್ನ** ಅವರ ಅಧ್ಯಕ್ಷತೆಯಲ್ಲಿ ಬಬ್ಬೂರುಕಮ್ಮೆ ಸೇವಾ ಸಮಿತಿಯ ಆವರಣದಲ್ಲಿ ಸೇರಲಿದೆ. ಸದಸ್ಯರೆಲ್ಲರೂ ಸಭೆಗೆ ಸಕಾಲಕ್ಕೆ ದಯಮಾಡಿಸಬೇಕಾಗಿ ವಿನಂತಿ.

ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿಯ ಆವರಣ ನಂ. 17, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು–560 009

ವಿಶೇಷ ಸೂಚನೆ: ಶ್ರೀಮತಿ ಶಾರದಮ್ಮ ಎಂ.ವಿ. ದೇವರಯ್ಯ ವಿದ್ಯಾರ್ಥಿನಿಯರ ನಿಲಯದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ

ದಿನಾಂಕ: 20–11–2022 ನೇ ಭಾನುವಾರ ಬೆಳಿಗ್ಗೆ : 9:30 ಘಂಟೆಗೆ
ಸ್ಥಳ: ನಂ. 344, 36ನೇ 'ಎ' ಕ್ರಾಸ್, 9ನೇ ಮುಖ್ಯರಸ್ತೆ, 5ನೇ ಬ್ಲಾಕ್, ಜಯನಗರ, ಬೆಂಗಳೂರು–560 041

ಆಡಳಿತ ಮಂಡಳಿಯ ಪರವಾಗಿ
ಡಾ॥ ಎನ್. ಸತ್ಯಪ್ರಕಾಶ್
ಗೌ॥ ಕಾರ್ಯದರ್ಶಿ

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 17/SBC/22 ದಿನಾಂಕ: 04.11.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	**ಬೆಂಗಳೂರು–ಜೋಲಾರ್‌ಪೇಟೆ ವಿಭಾಗ: ಉಪ–ಕಾಮಗಾರಿ–1:** ಪ್ರಸ್ತಾವನೆಯಂತೆ ಬಂಗಾರಪೇಟೆಯಲ್ಲಿ ಎರಡನೇ ಪ್ರವೇಶದ್ವಾರ – ಪ್ಲಾಟ್‌ಫಾರ್ಮ್ ನಂ. 6 ಅನ್ನು ಸಂಪರ್ಕಿಸುವಂತಿದ್ದು 1 ರಿಂದ 6 ರವರೆಗಿನ ಎಲ್ಲಾ ರಸ್ತೆಗಳನ್ನು ದಾಟುವಂತಿರುವ ಕಾಲ್ನಡಿಗೆಯ ಮೇಲುಸೇತುವೆ ನಿರ್ಮಾಣ & ಪ್ಲಾಟ್‌ಫಾರ್ಮ್ 1 & 2, 3 & 4 ಹಾಗೂ 5 & 6 ಕ್ಕೆ ಆಶ್ರಯಗಳ ನಿರ್ಮಾಣ. **ಉಪ–ಕಾಮಗಾರಿ–2:** ಬಂಗಾರಪೇಟೆಯಲ್ಲಿ ಪ್ರಸ್ತಾವನೆಯಂತೆ ಟಿಟಿಇ ಕೊಠಡಿಯೊಂದಿಗೆ 2ನೇ ಪ್ರವೇಶ ದ್ವಾರದ ನಿರ್ಮಾಣ. **ನಿರ್ವಹಣೆಯ ಅವಧಿ 6 ತಿಂಗಳುಗಳು.**	ರೂ. 7,73,97,107/-
2	**ಬೆಂಗಳೂರು–ಜೋಲಾರ್‌ಪೇಟೆ ವಿಭಾಗ: ಉಪ–ಕಾಮಗಾರಿ–1:** ಮಾಲೂರು (ಎಂಎಲ್‌ಒ) ರಲ್ಲಿ ಪ್ಲಾಟ್‌ಫಾರ್ಮ್ 1 ಮತ್ತು 2 & 3 ಮತ್ತು 4 ರಲ್ಲಿ ಹಾಗೂ ದೇವನಗೊಂದಿ (ಡಿಕೆಎನ್) ಯಲ್ಲಿ ಪ್ಲಾಟ್‌ಫಾರ್ಮ್ 1 & 2 ಮತ್ತು 3 ರಲ್ಲಿ ಆಶ್ರಯಗಳ ನಿರ್ಮಾಣ. **ಉಪ–ಕಾಮಗಾರಿ–2:** ವೈಟ್‌ಫೀಲ್ಡ್ (ಡಬ್ಲ್ಯೂಎಫ್‌ಡಿ), ದೇವನಗೊಂದಿ (ಡಿಕೆಎನ್), ಸಾಟಲೈಟ್ ಗೂಡ್ಸ್ ಟರ್ಮಿನಲ್ (ಎಸ್‌ಜಿಟಿ) ಮತ್ತು ಮಾಲೂರು (ಎಂಎಲ್‌ಒ) ರಲ್ಲಿ ರಸ್ತೆಗಳು, ನೀರಿನ ಸರಬರಾಜು, ಒಳಚರಂಡಿ ಹಾಗೂ ಸಿಬ್ಬಂದಿ ವಸತಿಗೃಹಗಳ ಅಭಿವೃದ್ಧಿ ಕಾರ್ಯ. **ಉಪ–ಕಾಮಗಾರಿ–3:** ಡೀಸೆಲ್ ಷೆಡ್ ಕೃಷ್ಣರಾಜಪುರಂನಲ್ಲಿ ಕಾಲೊನಿಗೆ ಬೇಕಾದ ಅಭಿವೃದ್ಧಿ ಕೆಲಸಗಳಾದ ರಸ್ತೆ, ನೀರಿನ ಸರಬರಾಜು, ಒಳಚರಂಡಿ ಇತ್ಯಾದಿ., ಹಾಗೂ ಡೀಸೆಲ್ ಲೊಕೊ ಷೆಡ್/ಕೃಷ್ಣರಾಜಪುರಂನಲ್ಲಿರುವ ವಸತಿಗೃಹಗಳ ಅಭಿವೃದ್ಧಿ ಕಾರ್ಯ. **ಉಪ–ಕಾಮಗಾರಿ–4:** ಪ್ರಸ್ತಾವನೆಯಂತೆ ಗೇಟ್ ಲಾಡ್ಜ್‌ಗಳು ಹಾಗೂ ಲೆವೆಲ್ ಕ್ರಾಸಿಂಗ್‌ನ ರಸ್ತೆಯ ಮೇಲ್ಮೈಗೆ ಬೇಕಾದ ಅಭಿವೃದ್ಧಿ ಕೆಲಸಕಾರ್ಯಗಳು (ಒಟ್ಟು 20 ನಂ.) **ನಿರ್ವಹಣೆಯ ಅವಧಿ 6 ತಿಂಗಳುಗಳು.**	ರೂ. 3,45,05,323/-
3	**ಬೆಂಗಳೂರು–ಮೈಸೂರು ವಿಭಾಗ: ಉಪ–ಕಾಮಗಾರಿ–1:** ಪ್ರಸ್ತಾವನೆಯಂತೆ 2 ಲಿಫ್ಟ್‌ಗಳ ಜೋಡಣೆಗಾಗಿ ಬೇಕಾದ ಸಿವಿಲ್ ಕಾಮಗಾರಿ – ಕ್ರಮವಾಗಿ ಚನ್ನಪಟ್ಟಣ (ಸಿಪಿಟಿ) ಹಾಗೂ ರಾಮನಗರ (ಆರ್‌ಎಂಜಿಎಂ) ನಿಲ್ದಾಣಗಳಲ್ಲಿ. **ಉಪ–ಕಾಮಗಾರಿ–2:** ಕೆಂಗೇರಿ ಮತ್ತು ಮಂಡ್ಯ ನಿಲ್ದಾಣಗಳಲ್ಲಿರುವ ಸ್ಟೋರ್ ಡಿಪೋಗಳಲ್ಲಿ ಪ್ರಸ್ತಾವನೆಯಂತೆ ಎಸ್‌ಎಸ್‌ಇ/ಪಿ.ವೇ.ಗಳ ನಿರ್ಮಾಣ ಕಾರ್ಯ. **ನಿರ್ವಹಣೆಯ ಅವಧಿ 4 ತಿಂಗಳುಗಳು.**	ರೂ. 1,48,07,399/-
4	**ಬೆಂಗಳೂರು–ಮೈಸೂರು ವಿಭಾಗ: ಉಪ–ಕಾಮಗಾರಿ–1: ಮಂಡ್ಯ :** ಪ್ಲಾಟ್‌ಫಾರ್ಮ್ 1ರಲ್ಲಿ ಮೇಲೆ ಚಲಿಸುವ ಎಸ್ಕಲೇಟರಿನ ನಿರ್ಮಾಣ. **ಉಪ–ಕಾಮಗಾರಿ–2:** ಪ್ಲಾಟ್‌ಫಾರ್ಮ್1, 2 ಮತ್ತು 3 ರಲ್ಲಿ ಮೇಲೆ ಚಲಿಸುವ ಹಾಗೂ ಕೆಳಗೆ ಕೊಂಡೊಯ್ಯುವ ಎಸ್ಕಲೇಟರುಗಳ ನಿರ್ಮಾಣ. **ನಿರ್ವಹಣೆಯ ಅವಧಿ 4 ತಿಂಗಳುಗಳು.**	ರೂ. 1,00,58,885/-
5	**ಬೆಂಗಳೂರು–ಸೇಲಂ :** ಸೇಲಂ–ಬೆಂಗಳೂರು ವಿಭಾಗದಲ್ಲಿ ಸ್ಟೇಷನ್ ಅಪ್ರೋಚ್ ರಸ್ತೆಗಳ ನಿರ್ಮಾಣ. ನಿಲ್ದಾಣಗಳು: ಸೆಮ್ಮಂಡಪಟ್ಟಿ (ಎಸ್‌ಎಂಡಿಟಿ), ಕರುವಳ್ಳಿ (ಕೆವಿಎಲ್‌ಆರ್), ತೊಪ್ಪೂರು (ಟಿಪಿಪಿ), ಮುಟ್ಟಂಪಟ್ಟಿ (ಎಂಪಿಸಿ), ಶಿವಾಡಿ (ಎಸ್‌ಜಡ್‌ವಿ), ಧರ್ಮಪುರಿ (ಡಿಪಿಜೆ), ಪಾಲಕ್ಕೋಡು (ಪಿಸಿವಿ), ಮಾರಂಡಹಳ್ಳಿ (ಎಂಜಡ್‌ಯು), ರಾಯಕೊಟ್ಟೈ (ಆರ್‌ವೈಸಿ), ಪೆರಿಯನಾಗತುಣೈ (ಪಿಆರ್‌ಎನ್‌ಟಿ), ಕೆಲಮಂಗಲಂ (ಕೆಎಂಎಲ್‌ಎಂ), ಹೊಸೂರು (ಹೆಚ್‌ಎಸ್‌ಆರ್‌ಎ), ಮಾರನಾಯಕನಹಳ್ಳಿ (ಎಂಎನ್‌ಕೆಹೆಚ್), ಆನೇಕಲ್ (ಎಇಕೆ), ಹೀಲಲಿಗೆ (ಹೆಚ್‌ಎಲ್‌ಇ), ಕಾರ್ಮೆಲರಾಮ್ (ಸಿಆರ್‌ಎಲ್‌ಎಂ), ಬೆಳ್ಳಂದೂರು ರೋಡ್ (ಬಿಎಲ್‌ಆರ್‌ಆರ್), ಬಾಣಸವಾಡಿ (ಬಿಎಎನ್‌ಡಿ) ಮತ್ತು ಹೆಬ್ಬಾಳ (ಹೆಚ್‌ಇಬಿ). **ನಿರ್ವಹಣೆಯ ಅವಧಿ 6 ತಿಂಗಳುಗಳು.**	ರೂ. 1,64,23,939/-
6	**ಬೆಂಗಳೂರು–ಸೇಲಂ :** ಸೇಲಂ–ಬೆಂಗಳೂರು ವಿಭಾಗದ 19 ನಿಲ್ದಾಣಗಳಲ್ಲಿ ಪ್ರಯಾಣಿಕರ ಸವಲತ್ತುಗಳಿಗೆ ಬೇಕಾದ ಅಭಿವೃದ್ಧಿ ಕೆಲಸಗಳು. ನಿಲ್ದಾಣಗಳು: ಸೆಮ್ಮಂಡಪಟ್ಟಿ (ಎಸ್‌ಎಂಡಿಟಿ), ಕರುವಳ್ಳಿ (ಕೆವಿಎಲ್‌ಆರ್), ತೊಪ್ಪೂರು (ಟಿಪಿಪಿ), ಮುಟ್ಟಂಪಟ್ಟಿ (ಎಂಪಿಸಿ), ಶಿವಾಡಿ (ಎಸ್‌ಜಡ್‌ವಿ), ಧರ್ಮಪುರಿ (ಡಿಪಿಜೆ), ಪಾಲಕ್ಕೋಡು (ಪಿಸಿವಿ), ಮಾರಂಡಹಳ್ಳಿ (ಎಂಜಡ್‌ಯು), ರಾಯಕೊಟ್ಟೈ (ಆರ್‌ವೈಸಿ), ಪೆರಿಯನಾಗತುಣೈ (ಪಿಆರ್‌ಎನ್‌ಟಿ), ಕೆಲಮಂಗಲಂ (ಕೆಎಂಎಲ್‌ಎಂ), ಹೊಸೂರು (ಹೆಚ್‌ಎಸ್‌ಆರ್‌ಎ), ಮಾರನಾಯಕನಹಳ್ಳಿ (ಎಂಎನ್‌ಕೆಹೆಚ್), ಆನೇಕಲ್ (ಎಇಕೆ), ಹೀಲಲಿಗೆ (ಹೆಚ್‌ಎಲ್‌ಇ), ಕಾರ್ಮೆಲರಾಮ್ (ಸಿಆರ್‌ಎಲ್‌ಎಂ), ಬೆಳ್ಳಂದೂರು ರೋಡ್ (ಬಿಎಲ್‌ಆರ್‌ಆರ್), ಬಾಣಸವಾಡಿ (ಬಿಎಎನ್‌ಡಿ) ಮತ್ತು ಹೆಬ್ಬಾಳ (ಹೆಚ್‌ಇಬಿ). **ನಿರ್ವಹಣೆಯ ಅವಧಿ 6 ತಿಂಗಳುಗಳು.**	ರೂ. 1,85,60,755/-
7	**ಬೆಂಗಳೂರು ವಿಭಾಗ:** ಸೇಲಂ–ಬೆಂಗಳೂರು ವಿಭಾಗದಲ್ಲಿ ಎಸ್‌ಬಿಸಿ–ಡಿಎಂಎಂ ನ ಗೌರಿಬಿದನೂರು (ಜಿಬಿಡಿ) ಯಾರ್ಡ್‌ನ ಕಿಮೀ. 76/900–77/000 ರಲ್ಲಿರುವ ಸೇತುವೆ ನಂ 328 (9x18.9ಮೀ) ಅನ್ನು ಉನ್ನತೀಕರಣಗೊಳಿಸುವುದು. ಮುಟ್ಟಂಪಟ್ಟಿ–ಶಿವಾಡಿ (ಎಂಪಿಸಿ–ಎಸ್‌ಜಡ್‌ವಿ) ಯ ಕಿಮೀ. 51/100–200 ರಲ್ಲಿ ಬ್ರಿಡ್ಜ್ ಸಂ. 122 (1x12.19ಮೀ) ಹಾಗೂ ಸಿಆರ್‌ಎಲ್‌ಎಂ–ಬಿವೈಪಿಎಲ್ ನಿಲ್ದಾಣಗಳ ಕಿಮೀ. 205/200–300 ರಲ್ಲಿ ಬ್ರಿಡ್ಜ್ ಸಂ. 531 ಆರ್‌ಯುಬಿ (1x12x22ಮೀ) ಇವುಗಳ ಸೂಪರ್ ಸ್ಟಕ್ಚರ್ ರೀಗಿರ್ಡರಿಂಗ್ ಕಾಮಗಾರಿ. **ನಿರ್ವಹಣೆಯ ಅವಧಿ 3 ತಿಂಗಳುಗಳು.**	ರೂ. 2,22,26,749/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.11.2022, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

PUB/482/AAD/PRB/SWR/2022-23 | ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

S.W.Railways | sw_rly | SWRRLY | southwesternrailway | SWRRLY

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಮತ್ತು ರಂಗೋಲಿ ಹಾಗೂ ಮಕ್ಕಳ ಕ್ರೀಡಾ ಸ್ಪರ್ಧೆ: ಅತಿಥಿಗಳು: ಸೋನಿಕಾ ಗೌಡ, ಎಚ್.ಟಿ. ಬಾಲಕೃಷ್ಣ, ಉಪಸ್ಥಿತಿ: ಗೋಪಿನಾಥ್, ಎಸ್. ಉಮೇಶ್, ಆಯೋಜನೆ: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ, ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಹತ್ತಿರ ಕಬ್ಬನ್ ಪಾರ್ಕ್, ಬೆಳಿಗ್ಗೆ 8 ರಿಂದ ಪ್ರಾರಂಭ ಮಧ್ಯಾಹ್ನ 2ಕ್ಕೆ ಸಭಾ ಕಾರ್ಯಕ್ರಮ

ಜೆ ಪ್ರಿಯದರ್ಶಿನಿ

ಭರತನಾಟ್ಯ ರಂಗಪ್ರವೇಶ: ಜೆ.ಪ್ರಿಯದರ್ಶಿನಿ, ಅತಿಥಿಗಳು: ಕೆ.ನಾಗರಾಜ, ವಸಂತ ಲಕ್ಷ್ಮೀ, ಮೀರಾ ಈಶ್ವರನ್, ಆಯೋಜನೆ: ಕನಕಪ್ರಿಯಾ ನಾಟ್ಯ ಕಲಾಕೇಂದ್ರ ಟ್ರಸ್ಟ್, ಸ್ಥಳ: ಏಕದಂತ ಪ್ರವಚನ ಮಂದಿರ, ಬಿಇಎಲ್ ಮಹಾಗಣಪತಿ ದೇವಸ್ಥಾನ, ಬಿಇಎಲ್ ಕಾಲೊನಿ, ಜಾಲಹಳ್ಳಿ, ಬೆಳಿಗ್ಗೆ 10

ರಾಜ್ಯೋತ್ಸವ ಸಮಾರಂಭ: ಧ್ವಜಾರೋಹಣ: ನಾರಾಯಣ ಗೌಡ, ವಿಶೇಷ ಅಹ್ವಾನಿತರು: ಎಂ.ಕೃಷ್ಣಪ್ಪ, ಸೃಜನ್ ಲೋಕೇಶ್, ನೆ.ಲ. ನರೇಂದ್ರಬಾಬು, ಎಸ್.ಕೆ.ನಟರಾಜ, ಹನುಮಂತರಾಯ್, ಅತಿಥಿಗಳು: ಗೀತಾ ಸಿಹಿಕಹಿ ಚಂದ್ರು, ಗಿರಿಜಾ ಲೋಕೇಶ್, ಮಹೇಂದ್ರ ಮುನ್ನೋತ್, ಅಭಿಜಿತ್, ಲೂಸ್ ಮಾದ ಯೋಗಿ, ವಶಿಷ್ಠ ಸಿಂಹ, ಆಯೋಜನೆ: ಕರ್ನಾಟಕ ಕಿರುತೆರೆ ನಿರ್ಮಾಣ ನಿರ್ವಾಹಕರು, ಸ್ಥಳ: ಮಹಾರಾಜ ಪ್ಯಾಲೆಸ್, ಗುಬ್ಬಲಾಳ, ಬನಶಂಕರಿ 6ನೇ ಹಂತ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಸ್ಫೂರ್ತಿ ಶ್ರೀಧರ್, ಅತಿಥಿಗಳು: ವೈಜಯಂತಿ ಕಾಶಿ, ಪದ್ಮಾ ಹೇಮಂತ, ಅನಿಲ್ ಕುಮಾರ್ ಸಿ.ಎಸ್., ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಸ್ಫೂರ್ತಿ ಶ್ರೀಧರ್

'ದಿ ವಿಸ್ಡಮ್ ಬ್ರಿಡ್ಜ್' ಪುಸ್ತಕ ಬಿಡುಗಡೆ: ಪಿ. ಕೃಷ್ಣಕಾಂತ್, ಆಯೋಜನೆ: ಹಾರ್ಟ್‌ಫುಲ್‌ನೆಸ್, ಸ್ಥಳ: ಶ್ರೀರಾಮಚಂದ್ರ ಮಿಷನ್, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

ಸಹಸ್ರಾರ್ಜುನ ಮಹಾರಾಜರ ಜಯಂತಿ: ಉದ್ಘಾಟನೆ: ವಿ.ಸೋಮಣ್ಣ, ಮೆರವಣಿಗೆ ಉದ್ಘಾಟನೆ: ಡಮಾಮ್ ವಿ.ಸತ್ಯನಾರಾಯಣ, ಅಧ್ಯಕ್ಷತೆ: ಸ್ವಾಮಿಸಾ ಎಲ್.ಖೋಡೆ, ಅತಿಥಿಗಳು: ಶ್ರೀನಿವಾಸ್ ಶ್ರೀಹರಿ ಖೋಡೆ, ಪಿ.ಸಿ.ಮೋಹನ್, ದಿನೇಶ್ ಗುಂಡೂರಾವ್, ಎಂ.ಕೃಷ್ಣಪ್ಪ, ಆಯೋಜನೆ: ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜ ಜಯಂತಿ ಸಮಿತಿ, ಸ್ಥಳ: ಶಿಕ್ಷಕರ ಸದನ, ಬೆಳಿಗ್ಗೆ 11

ಟಿ.ಎಸ್.ಲೋಹಿತಾಶ್ವ ಶ್ರದ್ಧಾಂಜಲಿ: ಅತಿಥಿಗಳು: ಮೋಹನ್ ಕೊಂಡಜ್ಜಿ, ಸಿ.ಸೋಮಶೇಖರ್, ಎಸ್.ಜಿ. ಸಿದ್ಧರಾಮಯ್ಯ, ಭಾ.ಮ.ಹರೀಶ್, ಸುಂದರ್ ರಾಜ್, ಕೆ.ವಿ. ನಾಗರಾಜಮೂರ್ತಿ, ಡಿಂಗ್ರಿ ನಾಗರಾಜ್, ಕೆ.ಎಸ್.ವಿಮಲಾ, ಶಶಿಧರ್ ಭಾರಿಘಾಟ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ರಂಗಭೂಮಿ ಕ್ರಿಯಾಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ ಆವರಣ, ಬೆಳಿಗ್ಗೆ 11

ಮಾಧ್ಯಮ ಮೈಲುಗಲ್ಲು ನಲವತ್ತರ ಹೊಸ್ತಿಲು: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಅನಿಲ್ ಕುಮಾರ್ ಮಂಗಳಗಿ, ಅತಿಥಿಗಳು: ಹರಿಪ್ರಕಾಶ್ ಕೋಣೆಮನೆ, ಕೆ.ಎನ್. ಚನ್ನೇಗೌಡ, ಪ್ರಿಯಾಂಕಾ ಉಪೇಂದ್ರ, ಆಯೋಜನೆ: ಪ್ರಸಾರ ಭಾರತಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ದೂರದರ್ಶನ ಕೇಂದ್ರ, ಬೆಳಿಗ್ಗೆ 11

ಭರತನಾಟ್ಯ ತರಬೇತಿ ಶಿಬಿರದ ಸಮಾರೋಪ: ಉದ್ಘಾಟನೆ: ಶಿವರುದ್ರಪ್ಪ, ಅಧ್ಯಕ್ಷತೆ: ಗೋಪಿನಾಥ್, ಅತಿಥಿಗಳು: ಎಂ.ಆರ್.ವಿ.ಪ್ರಸಾದ್, ಆಯೋಜನೆ: ದೇವಾದೇವಿ ಕಲಾನಿಕೇತನ, ಸ್ಥಳ: ನೃತ್ಯಶ್ರೀ ಕಲಾಮಂದಿರ, ಕೃಷ್ಣಯ್ಯನ ಪಾಳ್ಯ, ಇಂದಿರಾನಗರ, ಮಧ್ಯಾಹ್ನ 1

20ನೇ ಸಂಗೀತೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ: ಉದ್ಘಾಟನೆ: ಕೆ.ಎ.ಶಿವರಾಮಯ್ಯ, ಸಂತೋಷ್ ಹೆಗ್ಡೆ, ಸತೀಶ ಹಂಪಿಹೊಳಿ, ಸಂತೋಷ್. ಎಸ್., ತಬಲಾ: ರಾಚಯ್ಯ ಹಿರೇಮಠ್, ಸಂತೀಶ್ ಹೊಂಪಿಹೊಳಿ, ಅಮೃತೇಶ ಕುಲಕರ್ಣಿ, ಹಿಂದೂಸ್ಥಾನಿ ಗಾಯನ: ಉಮಾ ಕುಲಕರ್ಣಿ ಮತ್ತು ತಂಡ, ಹಾರ್ಮೋನಿಯಂ: ಆಶಿಶ್ ನಾಯಕ್, ಗೌರವ ಗಡಿಯಾರ್, ತಾನಪೂರಾ: ಶಿವಪ್ರಸಾದ್ ಬಿ.ಎನ್., ಕೀ–ಬೋರ್ಡ್: ಲೇಖ ಪಿ.ಆರ್., ಆಯೋಜನೆ: ಗುರುಸಮರ್ಥ ಸಂಗೀತ ವಿದ್ಯಾಲಯ, ಸ್ಥಳ: ಜೆ.ಎಸ್.ಎಸ್ ಸಭಾಂಗಣ, ಜಯನಗರ, ಸಂಜೆ 4

ರಾಜ್ಯೋತ್ಸವದ ಪ್ರಯುಕ್ತ 'ಕವಿಯೊಂದಿಗೆ ಭಾವ ಸಂಭ್ರಮ': ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ಎಚ್.ಡುಂಡಿರಾಜ್, ಕಾ.ವೆಂ. ಶ್ರೀನಿವಾಸ ಮೂರ್ತಿ, ಬಾಗೂರು ಮಾರ್ಕಾಂಡೇಯ, ಶೈಲೇಶ್ ಪಟ್ಟವರ್ಧನ್, ನಲ್ಲೂರು ಪ್ರಸಾದ್ ಆರ್.ಕೆ., ನಾ.ದಾಮೋದರ್ ಶೆಟ್ಟಿ, ಶ್ರೀಶೈಲ ಮಾದಣ್ಣವರ, ಆಯೋಜನೆ: ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಹರಿದಾಸ ರೂಪಕ: ಹರಿದಾಸರು ಕಂಡ ಶ್ರೀಕೃಷ್ಣ: ಗಾಯನ: ದಿವ್ಯಾ ಗಿರಿಧರ್, ಪಿಟೀಲು: ದೀಪಕ್ ಮೂರ್ತಿ, ಮೃದಂಗ: ಪೃಥ್ವಿಕೃಷ್ಣ, ಪುರಂದರದಾಸರ ನವರತ್ನ ಮಾಲಿಕೆ ಗೋಷ್ಠಿ: ರೇಖಾ ಪ್ರಸಾದ್ ಮತ್ತು ತಂಡ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 5

ದಿವ್ಯಾ ಗಿರಿಧರ್

ಗುಡಿಹಳ್ಳಿ ನಾಗರಾಜ್ ಸಂಸ್ಮರಣೆ, ಎ.ವಿ.ಸೂರ್ಯನಾರಾಯಣಸ್ವಾಮಿ ಮತ್ತು ಎಚ್.ಎಸ್. ಗೋವಿಂದಗೌಡ ಸಂಗ್ರಹಿಸಿರುವ 'ರಂಗಭೂಮಿ' ಪುಸ್ತಕ ಬಿಡುಗಡೆ ಮತ್ತು ರಂಗಸಂಗೀತ ಗಾಯನ: ಉದ್ಘಾಟನೆ ಮತ್ತು ಪುಸ್ತಕ ಬಿಡುಗಡೆ: ಬಿ.ವಿ.ರಾಜಾರಾಂ, ಅಧ್ಯಕ್ಷತೆ: ಲಕ್ಷ್ಮಣದಾಸ್, ಅತಿಥಿಗಳು: ಆರ್.ಜಿ. ಹಳ್ಳಿ ನಾಗರಾಜ್, ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಉಪಸ್ಥಿತಿ: ಗಿರಿಜಾ ಗುಡಿಹಳ್ಳಿ, ನಿಶಾಂತ್ ಗುಡಿಹಳ್ಳಿ, ಆಯೋಜನೆ: ರಂಗರತ್ನಾಕರ, ಸ್ಥಳ: ಸಿವಗಂಗ ರಂಗಮಂದಿರ, ಸರ್ ಎಂ.ವಿ. ಬಡಾವಣೆ, ಕೆಂಗೇರಿ ಉಪನಗರ, ಸಂಜೆ 5.30

ಮಲ್ನಾಡ ದೀಪೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ: ಯಕ್ಷಗಾನ: ರಾಘವೇಂದ್ರ ಮಯ್ಯ, ಕಿರಾಡಿ ಪ್ರಕಾಶ್ ಮತ್ತು ಅರ್ಪಿತಾ ಹೆಗಡೆ, ಸುಗಮ ಸಂಗೀತ: ಆರ್ಡಿಕೊಪ್ಪ ಸಿಸ್ಟರ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರ, ಸಂಜೆ 5.45

ವರ್ಷಿಣಿ ಕೃಷ್ಣಪ್ಪ

ಭರತನಾಟ್ಯ ರಂಗಪ್ರವೇಶ: ವರ್ಷಿಣಿ ಕೃಷ್ಣಪ್ಪ, ಗುರು: ಸೀತಾ ಗುರುಪ್ರಸಾದ್, ಆಯೋಜನೆ: ಭರತಾಂಜಲಿ ನಾಟ್ಯ ಶಾಲೆ, ಸ್ಥಳ: ಗಾಯನ ಸಮಾಜ, ಬಸವನಗುಡಿ, ಸಂಜೆ 6

'ಮಿಸ್ಟರ್ ಆ್ಯಂಡ್ ಮಿಸ್ ಅವಸಮ್': ನಿರ್ದೇಶನ: ರಿಜ್ವಾನ್, ಆಯೋಜನೆ: ರಿಜ್ ಫ್ಯಾಷನ್, ಸ್ಥಳ: ತೆಲುಗು ವಿಜ್ಞಾನ ಸಮಿತಿ, ವೈಯಾಲಿ ಕಾವಲ್, ಸಂಜೆ 6

ಬೃಹತ್ ವಾಣಿಜ್ಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ವಿ.ಸೋಮಣ್ಣ, ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಎಸ್.ಟಿ.ಸೋಮಶೇಖರ್, ಆಯೋಜನೆ: ವಸತಿ ಇಲಾಖೆ, ಸ್ಥಳ: ವಳಗೇರಹಳ್ಳಿ, ಕೆ.ಎಚ್.ಬಿ.ಪ್ಲಾಟಿನಂ ವಸತಿ ಸಂಕೀರ್ಣದ ಹತ್ತಿರ, ಕೆಂಗೇರಿ, ಸಂಜೆ 6

ಎಲ್‌ಇಡಿ ಲೈಟ್ಸ್ ಮತ್ತು ಸ್ಮಾರ್ಟ್ ಕಂಟ್ರೋಲರ್ ಕಾಮಗಾರಿಗೆ ಚಾಲನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ವಿ.ಸೋಮಣ್ಣ, ಅತಿಥಿಗಳು: ತೇಜಸ್ವಿಸೂರ್ಯ, ಆಯೋಜನೆ: ಬಿಬಿಎಂಪಿ, ಸ್ಥಳ: ಪಾಲಿಕೆ ಸೌಧ, ಗೋವಿಂದರಾಜನಗರ, ಸಂಜೆ 6

ಜನೌಷಧ: 40 ಮಳಿಗೆಗಳಿಗೆ ಪ್ರಸ್ತಾವನೆ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಹೊಸದಾಗಿ 500 ಜನೌಷಧ ಮಳಿಗೆಗಳಿಗೆ ತೆರೆಯುವ ಗುರಿ ಇದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ 40 ಮಳಿಗೆಗೆ ಅನುಮತಿ ಕೋರಿ ಭಾರತೀಯ ಔಷಧ ಮಂಡಳಿಗೆ (ಬಿಪಿಪಿಐ) ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

'ಬಡ, ಹಿಂದುಳಿದ ಮತ್ತು ಮಧ್ಯಮ ವರ್ಗದವರಿಗೆ ರಿಯಾಯಿತಿ ದರದಲ್ಲಿ ಔಷಧ ಹಾಗೂ ಶಸ್ತ್ರಚಿಕಿತ್ಸೆಯ ಪರಿಕರಗಳು ಲಭ್ಯವಾಗಲಿವೆ. ರಾಜ್ಯದಲ್ಲಿ ಈವರೆಗೆ 1,052 ಜನೌಷಧ ಮಳಿಗೆಗಳನ್ನು ತೆರೆಯಲಾಗಿದೆ' ಎಂದು ಹೇಳಿದ್ದಾರೆ.

'ಮಳಿಗೆ ಸ್ಥಾಪನೆಯಲ್ಲಿ ಉತ್ತರ ಪ್ರದೇಶದ ನಂತರ ಸ್ಥಾನದಲ್ಲಿ ಕರ್ನಾಟಕ ಇದೆ. ಕೇರಳ ಮೂರನೇ ಸ್ಥಾನದಲ್ಲಿದೆ. ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಮಳಿಗೆಗಳನ್ನು ತೆರೆಯಲು ಸರ್ಕಾರ ಒತ್ತುನೀಡಿದೆ. ಈ ವರ್ಷದ ಫೆಬ್ರುವರಿ ಬಳಿಕ 300 ಮಳಿಗೆಗಳನ್ನು ತೆರೆಯಲಾಗಿದೆ' ಎಂದು ತಿಳಿಸಿದ್ದಾರೆ.

ಅಗ್ಗದ ದರ: 'ಉತ್ತರ ಕರ್ನಾಟಕ, ಹಳೆ ಮೈಸೂರು ಭಾಗದಿಂದಲೂ ಜನೌಷಧಿ ಮಳಿಗೆಗಳ ಪ್ರಾರಂಭಕ್ಕೆ ಹೆಚ್ಚಿನ ಒತ್ತಡವಿದೆ. ರಾಜ್ಯದಲ್ಲಿ ಜನರಿಕ್ ಔಷಧಗಳು ಮಾರುಕಟ್ಟೆ ದರಕ್ಕಿಂತ ಶೇ 50ರಿಂದ ಶೇ 80ರಷ್ಟು ಅಗ್ಗದ ದರದಲ್ಲಿ ದೊರೆಯುತ್ತಿವೆ. ಒಟ್ಟು 1,451 ಔಷಧಗಳು ಮತ್ತು 240 ಶಸ್ತ್ರಚಿಕಿತ್ಸೆ ಪರಿಕರಗಳು ಹಾಗೂ ದುಬಾರಿ ವೆಚ್ಚದ ಕ್ಯಾನ್ಸರ್ ಔಷಧಗಳೂ ದೊರೆಯುತ್ತವೆ' ಎಂದು ಹೇಳಿದ್ದಾರೆ.

'ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಜನೌಷಧ ಕೇಂದ್ರ ಪ್ರಾರಂಭಿಸಲು ಫಾರ್ಮಸಿ ಪದವೀಧರರಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಸ್ವಾಯತ್ತ ಸಂಸ್ಥೆಗಳಿಗೆ 120 ಚದರ ಅಡಿ ಸ್ಥಳವನ್ನು ಉಚಿತವಾಗಿ ನೀಡಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಯುವಜನರಲ್ಲಿ ಮಧುಮೇಹ ಹೆಚ್ಚಳ: ವರದಿ

ಬೆಂಗಳೂರು: ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರಶೈಲಿ ಸೇರಿ ವಿವಿಧ ಕಾರಣಗಳಿಂದ ಯುವಜನರಲ್ಲಿ ಮಧುಮೇಹ ಸಮಸ್ಯೆ ಹೆಚ್ಚುತ್ತಿದೆ. ಮಧುಮೇಹಿಗಳ ಪ್ರಮಾಣ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಶೇ 44ರಷ್ಟು ಹೆಚ್ಚಿದೆ ಎಂದು ಪ್ರಾಕ್ಟೊ ಆರೋಗ್ಯ ಸಂಸ್ಥೆ ತಿಳಿಸಿದೆ.

ಸಂಸ್ಥೆ ಈ ಬಗ್ಗೆ ಅಧ್ಯಯನ ನಡೆಸಿದೆ. ನಗರದಲ್ಲಿ ಮಧುಮೇಹಕ್ಕೆ ಸಂಬಂಧಿಸಿದಂತೆ 2021ರಲ್ಲಿ ಶೇ 29ರಷ್ಟಿದ್ದ ವೈದ್ಯರ ಭೇಟಿ, ಈ ವರ್ಷ ಶೇ 77ರಷ್ಟು ಹೆಚ್ಚಿದೆ.

ವೈದ್ಯರ ಭೇಟಿಗೆ ಬರುವವರಲ್ಲಿ 25 ರಿಂದ 34 ವರ್ಷದವರು ಹೆಚ್ಚಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವಯೋಮಾನದವರ ಪ್ರಮಾಣ ಶೇ 46ರಷ್ಟು ಹೆಚ್ಚಳವಾಗಿದೆ. ಈ ಪ್ರಮಾಣ 18ರಿಂದ 24 ವರ್ಷದವರಲ್ಲಿ ಶೇ 5ರಿಂದ ಶೇ 91ರಷ್ಟಕ್ಕೆ ಹೆಚ್ಚಳವಾಗಿದೆ. 54 ವರ್ಷ ಮೀರಿದವರಲ್ಲಿ ಕಳೆದ ವರ್ಷ ಶೇ 4 ರಷ್ಟಿದ್ದ ಈ ಪ್ರಮಾಣ, ಈಗ ಶೇ 0.41ಕ್ಕೆ ಇಳಿಕೆಯಾಗಿದೆ.



ಪೊಲೀಸ್ ಇಲಾಖೆಯಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ಜೇನಾ ಪಿಂಟೊ, ಅರ್ಚನಾ, ಸಂಗೀತಾ, ಶಿವಕುಮಾರ್ ರಾಥೋಡ್, ಎಂ. ನಾಗರಾಜ್ ಅವರನ್ನು ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಅಸಾಧಾರಣ ಸೇವೆ ಸಲ್ಲಿಸಿದ ಪೊಲೀಸ್ ಸಿಬ್ಬಂದಿಗೆ ಸನ್ಮಾನ

ನಿವೃತ್ತ ಸಿಬ್ಬಂದಿ ಚಿಕಿತ್ಸೆಗೆ ಹಣದ ಕೊರತೆ ಇಲ್ಲ: ಪ್ರವೀಣ್ ಸೂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿವೃತ್ತ ಪೊಲೀಸ್ ಸಿಬ್ಬಂದಿಯ ಚಿಕಿತ್ಸೆಗೆ ಹಣದ ಕೊರತೆ ಇಲ್ಲ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಶನಿವಾರ ಹೇಳಿದರು.

ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಕಾಡುಮಲ್ಲೇಶ್ವರ ಗೆಳೆಯರ ಬಳಗ ನಗರದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾನವೀಯ ಹಾಗೂ ಅಸಾಧಾರಣ ಸೇವೆ ಸಲ್ಲಿಸಿದ ಪೊಲೀಸ್ ಸಿಬ್ಬಂದಿಗೆ ಸನ್ಮಾನಿಸಿ ಅವರು ಮಾತನಾಡಿದರು.

ಮುಖ್ಯಾಂಶಗಳು
- ₹25 ಕೋಟಿಗೆ ಆರೋಗ್ಯ ನಿಧಿ ಹೆಚ್ಚಳ
- ಆರೋಗ್ಯ ರಕ್ಷಣೆಗೆ ಇಲ್ಲ ತೊಂದರೆ

'ಆರೋಗ್ಯ ನಿಧಿಯನ್ನು ₹25 ಕೋಟಿಗೆ ಹೆಚ್ಚಳ ಮಾಡಲಾಗಿದೆ. ಆಯುಷ್ಮಾನ್ ಭಾರತ್ ಯೋಜನೆಯನ್ನೂ ಸಹ ಜೋಡಿಸಲಾಗಿದೆ. ಭವಿಷ್ಯದಲ್ಲಿ ಆರೋಗ್ಯ ರಕ್ಷಣೆಗೆ ಯಾವುದೇ ಸಮಸ್ಯೆ ಇರುವುದಿಲ್ಲ' ಎಂದರು.

ನಗರದ ಪೊಲೀಸ್ ಆಯುಕ್ತ ಸಿ.ಎಚ್. ಪ್ರತಾಪ್ ರೆಡ್ಡಿ ಮಾತನಾಡಿ, 'ಪೊಲೀಸರು ಸದಾ ಕಾಲ ಕರ್ತವ್ಯ ಪ್ರಜ್ಞೆಯನ್ನು ಹೊಂದಿರಬೇಕು' ಎಂದರು.

ಹೆಚ್ಚುವರಿ ಪೊಲೀಸ್ ಆಯುಕ್ತ (ಅಪರಾಧ) ಸಂದೀಪ್ ಪಾಟೀಲ್, ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಕೆ.ಶಿವರಾಂ ಮತ್ತು ವೇಮಗಲ್ ನಾರಾಯಣಸ್ವಾಮಿ ಅವರು ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

'ಎಸ್‌ಸಿ, ಎಸ್‌ಟಿ ಸಮಾವೇಶ: 20ರಂದು ಸಭೆ'

ಬೆಂಗಳೂರು: 'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮಾವೇಶ ನಡೆಸಲು ಪಕ್ಷದ ವರಿಷ್ಠರು ನಿರ್ಧರಿಸಿದ್ದು, ಈ ಬಗ್ಗೆ ಚರ್ಚಿಸಲು ಇದೇ 20ರಂದು ಪೂರ್ವಭಾವಿ ಸಭೆ ನಡೆಸುತ್ತೇವೆ' ಎಂದು ಕಾಂಗ್ರೆಸ್ ಶಾಸಕ ಜಿ. ಪರಮೇಶ್ವರ ಶನಿವಾರ ತಿಳಿಸಿದರು.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಭೇಟಿ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಸಮಾವೇಶ ಆಯೋಜಿಸುವ ಬಗ್ಗೆ ಇಬ್ಬರೂ ಚರ್ಚಿಸಿದ್ದೇವೆ. ಯಾವಾಗ ಸಮಾವೇಶ ನಡೆಸಬೇಕು, ಯಾರನ್ನು ಕರೆಯಬೇಕೆಂದು ಸಭೆಯಲ್ಲಿ ತೀರ್ಮಾನಿಸುತ್ತೇವೆ' ಎಂದರು.

'ಪಕ್ಷದ ಮುಖಂಡ ಎಚ್.ಸಿ. ಮಹದೇವಪ್ಪ ಅವರ ಜೊತೆ ಈಗಾಗಲೇ ಈ ಬಗ್ಗೆ ಮಾತನಾಡಿದ್ದೇನೆ. ಸಮಾವೇಶ ಆಯೋಜಿಸುವ ವಿಚಾರದಲ್ಲಿ ಅವರಿಗೂ ಹೆಚ್ಚಿನ ಜವಾಬ್ದಾರಿ ವಹಿಸುತ್ತೇವೆ' ಎಂದರು.

'ಪಂಚರತ್ನ' ರಥಯಾತ್ರೆ ಮುಂದೂಡಿಕೆ

ಕೋಲಾರ: ಸತತ ಮಳೆ ಮತ್ತು ಹವಾಮಾನ ವೈಪರೀತ್ಯ ಕಾರಣ ಜಿಲ್ಲೆಯಲ್ಲಿ ನ.14ರಿಂದ ಐದು ದಿನ ಹಮ್ಮಿಕೊಂಡಿದ್ದ ಜೆಡಿಎಸ್ 'ಪಂಚರತ್ನ' ರಥಯಾತ್ರೆಯನ್ನು ಮತ್ತೆ ಮುಂದೂಡಲಾಗಿದೆ ಎಂದು ಜೆಡಿಎಸ್‌ನ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಕೆ. ವೆಂಕಟ ಶಿವಾರೆಡ್ಡಿ ತಿಳಿಸಿದರು.

'ಮುಳಬಾಗಿಲಿನಲ್ಲಿ ಮಳೆಯ ಕಾರಣ ಈಗಾಗಲೇ ಒಮ್ಮೆ ಮುಂದೂಡಲಾಗಿತ್ತು. ಪರಿಷ್ಕೃತ ದಿನಾಂಕ ಪ್ರಕಟಿಸಿದ ಮೇಲೆ ಮತ್ತೆ ಮಳೆ ಬರುತ್ತಿದೆ. ಮುಂದಿನ ದಿನಗಳಲ್ಲಿ ಸಭೆ ಸೇರಿ ರಥಯಾತ್ರೆಯ ದಿನಾಂಕ ಅಂತಿಮಗೊಳಿಸುತ್ತೇವೆ' ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಶೈವ ದೇವಸ್ಥಾನಗಳಲ್ಲಿ ವೈಷ್ಣವ ಸಂಪ್ರದಾಯ ಆಚರಣೆಗೆ ವಿರೋಧ

ಮಂಗಳೂರು: 'ರಾಜ್ಯದ ಮುಜರಾಯಿ ದೇವಸ್ಥಾನಗಳಲ್ಲಿ ಆಗಮ ಶಾಸ್ತ್ರಕ್ಕೆ ವಿರುದ್ಧವಾದ ಮುದ್ರಾ ಧಾರಣೆಯಂಥ ಧಾರ್ಮಿಕ ಆಚರಣೆಯ ಮೂಲಕ ವೈಷ್ಣವರು ಆಧಿಪತ್ಯ ಸ್ಥಾಪಿಸುತ್ತಿದ್ದಾರೆ. ಇದನ್ನು ನಿಷೇಧಿಸಿರುವ ಆದೇಶವನ್ನು ಒತ್ತಡಕ್ಕೆ ಮಣಿದು ಹಿಂದೆ ಪಡೆದರೆ ಧಾರ್ಮಿಕ ದತ್ತಿ ಇಲಾಖೆ ವಿರುದ್ಧ ಹೋರಾಟ ನಡೆಸಲಾಗುವುದು' ಎಂದು ದಕ್ಷಿಣ ಕನ್ನಡ ಜಿಲ್ಲೆಯ ಶೈವಕ್ಷೇತ್ರ ಸಂರಕ್ಷಣಾ ವೇದಿಕೆ ಹೇಳಿದೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಸ್ಥಾಪಕ ನಿರ್ದೇಶಕ ಶ್ರೀನಾಥ್ ಟಿ.ಎಸ್, 'ವಿವಿಧ ಜಯಂತಿಗಳನ್ನು ಆಚರಿಸುವ ಮತ್ತು ಫಲಕ ಅಳವಡಿಸುವ ಮೂಲಕ ಹಿಂದೂಗಳಲ್ಲಿ ಒಡಕು ಉಂಟುಮಾಡುವ ಹುನ್ನಾರ, ವಿಗ್ರಹಗಳನ್ನು ಬದಲಿಸಿ ದೇವರನ್ನೇ ಮತಾಂತರ ಮಾಡುವ ಕುತಂತ್ರ ನಡೆಯುತ್ತಿದೆ' ಎಂದು ಅವರು ದೂರಿದರು.

'ಆಗಮ ಶಾಸ್ತ್ರಕ್ಕೆ ವಿರುದ್ಧವಾದ ಆಚರಣೆಗಳು ಸಲ್ಲದು ಎಂದು ನವೆಂಬರ್ 2ರಂದು ಧಾರ್ಮಿಕ ದತ್ತಿ ಇಲಾಖೆ ಸೂಚಿಸಿದೆ. ಇದನ್ನು ವಾಪಸ್ ಪಡೆದುಕೊಳ್ಳುವಂತೆ ಇಲಾಖೆಯ ಮೇಲೆ ಒತ್ತಡ ಹೇರಲಾಗುತ್ತಿದೆ' ಎಂದು ಶ್ರೀನಾಥ್ ಆರೋಪಿಸಿದರು.

WATCH WITH ENGLISH SUBTITLES
PVR CINEMAS {Phoenix Marketcity, 12:30, 7:00, 9:45 p.m. | Forum Mall, 12:15, 3:20, 7:00, 10:15 p.m. | Orion Mall, 1:00, 3:20, 7:00, 9:45 p.m. | Vaishnavi Sapphire Mall, 12:10, 4:00, 10:10 p.m. | VR Mall, 12:40, 3:05, 7:00, 10:15 p.m. | MSR Regalia Mall, 12:50, 7:00, 10:30 p.m. | Spirit Mall, 3:30, 9:50 p.m. | Superplex Vega City Mall, 12:45, 4:45, 6:30, 10:00 p.m. | Uptown Omr Mall, 3:50, 10:20 p.m.} | INOX CINEMAS {Garuda Mall, 12:30, 6:55, 10:20 p.m. | Mantri Mall, 12:35, 6:25, 9:50 p.m. | Central Mall, 2:55, 9:50 p.m. | Lido, 3:20, 9:50 p.m. | Value Mall, 2:45, 10:20 p.m. | Garuda Yelahanka, 12:15, 6:45 p.m. | RMZ Yelahanka, 3:45, 10:10 p.m.} | CINEPOLIS CINEMAS {Royal Meenakshi Mall, 11:30, 2:55, 6:20, 9:45 p.m. | Shantiniketan, 12:15, 3:40, 7:05, 10:30 p.m. | ETA Mall, 12:10, 3:35, 7:00, 10:25 p.m. | SJR Spectrum Mall, 12:45, 6:55, 10:20 p.m.} | GOPALAN {Innovation Mall, 2:45, 10:00 p.m. | Legacy Mall, 3:45, 9:00 p.m.} | INNOVATIVE MULTIPLEX {Marathahalli, 3:30, 6:00, 9:40 p.m.} | BHARATH CINEMAS {Mangalore, 12:30, 7:00 p.m.} | PVR CINEMAS {Fiza Mall, Mangalore, 1:00, 6:30 p.m. | Forum Mall, Mysore, 3:50, 9:30 p.m.} | INOX {Satyam Mall, Mysore, 6:35, 10:30 p.m.} | CINEPOLIS {City Centre Mall, Mangalore, 1:15, 5:50, 10:25 p.m.} | DRC CINEMA {Mysore, 7:00, 10:10 p.m.}.
a yash raj films™ release
farnaz

IN IMAX® AT
PVR CINEMAS {Forum Mall, Koramangala, 8:30, 12:00, 3:30, 7:00, 10:30 p.m. | VR Mall, 8:30, 12:00, 3:30, 7:00, 10:30 p.m. | Vega City, 8:00, 11:30, 3:00, 6:30, 10:00 p.m.} | INOX {Mantri Square Mall, Malleshwaram, 9:00, 12:15, 3:40, 7:05, 10:30 p.m. | Galleria Mall, Yelahanka, 9:00, 12:15, 3:40, 7:05, 10:30 p.m.} | CINEPOLIS {Shanthiniketan, 8:50, 12:15, 3:40, 7:05, 10:30 p.m.}.
IN 4DX™ AT
PVR CINEMAS {Phoenix Marketcity Mall, 8:00, 11:30, 3:00, 6:30, 10:00 p.m. | Forum Mall, Koramangala, 8:00, 11:30, 3:00, 6:30, 10:00 p.m. | Vega City, 8:30, 12:00, 3:30, 7:00, 10:30 p.m. | Orion Mall, 8:30, 12:00, 3:30, 7:00, 10:30 p.m.} | CINEPOLIS {Shanthiniketan, 10:30, 1:55, 5:20, 8:45 p.m.}.
PVR CINEMAS | INOX CINEMAS | CINEPOLIS CINEMAS | GOPALAN CINEMAS | INNOVATIVE MULTIPLEX {Marathahalli} | KINO CINEMAS | ROCKLINE CINEMAS | URVASHI {Lalbagh Road} | MUKUNDA {Banaswadi Main Road} | SWAGATH SHANKARNAG {M.G Road} | SWAGATH POORNIMA {JC Road} | BALAJI {Chikkalsandra} | THIRUMALA {Agara} | LAKSHMI {Taverkare} | MAHADESHWARA {Banashankari} | CAUVERY {Sankey Road} | PUSHPANJALI {Sultanpalaya} | VICTORY CINEMAS {Magadi Raod} | ARUNA {Srirampuram} | MANASA {Konankunte} | SANDHYA {Madivala} | VINAYAKA THEATRE {Vartur} | AMRUTH {Lingrajapuram} | VIJAYA {Byatarayanapura} | ANJAN {Magadi Raod} | RAVI {Sarjapura} | MUKTA A2 {Uttarahalli} | RADHAKRISHNA {Matadahalli} | VENKATESHWARA {Konappana Agrahara} | VAIBHAV {Sanjay Nagar} | SRI VINAYAKA {Marathahalli} | SAVITHA {Malleshwaram} | NARTAKI {K G Road} | VINAYAKA {DJ Halli} | SANTOSH {RPC Layout} | VIJAYALAKSHMI {Garudacharpalya} | SIDDESHWARA {JP Nagar} | DRC CINEMAS {Mysore} | INOX CINEMAS {Mysore} | PVR CINEMAS {Mysore} | VISION CINEMAS {Mysore} | CINEPOLIS {Mangalore} | BHARATH CINEMAS {Mangalore} | PVR CINEMAS {Mangalore} | CINE GALAXY {Surathkal} | BHARATH CINEMAS {Padubidri} | SUCHITRA THEATER {Mangalore} | BHARATH CINEMAS {Manipal} | INOX CINEMAS {Manipal} | BHARATH CINEMAS {Shivamoga} | BHARATH CINEMAS {Kundapura} & Others Cinemas.
FOR ANY CHANGES OR CANCELLATION IN SHOW TIMINGS, PLEASE CONTACT THE THEATRE
farnaz

SAD DEMISE

SHRI. S. RAGHU
18-08-1950 to 12-11-2022
s/o Late Shri.P.Siddaramappa
Lingarajapura

Founder - Chairman
SSR GROUP OF INSTITUTIONS
BENGALURU

Our inspiration, who established the Educational Institutions with magnanimity and hard work has left for heavenly abode in the wee hours today. You live in our hearts and thoughts forever.
Your Vision , Our Responsibility
Family, Friends, Management & Staff of
SSR GROUP OF INSTITUTIONS

ಬಯಲುಸೀಮೆ ಅಡಿಕೆ ಘಮಲು!

ಚಿತ್ರದುರ್ಗ ಜಿಲ್ಲೆಯಲ್ಲಿ ಅಡಿಕೆ ಬೆಳೆ ವಿಸ್ತರಣೆ ತೀವ್ರಗತಿಯಲ್ಲಿ ನಡೆಯುತ್ತಿದ್ದು, ರೈತರೊಬ್ಬರ ತೋಟದಲ್ಲಿ ಹಸಿರಿನಿಂದ ಕಂಗೊಳಿಸುತ್ತಿರುವ ಅಡಿಕೆ ಗಿಡಗಳು. ಪ್ರಜಾವಾಣಿ ಚಿತ್ರ – ವಿ. ಚಂದ್ರಪ್ಪ

ಒಂದನೇ ಪುಟದಿಂದ..

ವಿಜಯನಗರ ಜಿಲ್ಲೆಯ ಹರಪನಹಳ್ಳಿ, ಹೂವಿನಹಡಗಲಿ, ಹೊಸಪೇಟೆ ಹಾಗೂ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕುಗಳಲ್ಲೂ ಅಡಿಕೆ ತೋಟಗಳು ತಲೆ ಎತ್ತುತ್ತಿವೆ.

ಒಂದು ಎಕರೆ ಅಡಿಕೆ ತೋಟದಿಂದ ಖರ್ಚೆಲ್ಲ ತೆಗೆದು ವರ್ಷಕ್ಕೆ ₹ 3.5 ಲಕ್ಷ ಲಾಭ ಸಿಗುತ್ತಿದೆ. ಈ ತೋಟದ ಪಕ್ಕದಲ್ಲೇ ಮೆಕ್ಕೆಜೋಳ ಮತ್ತಿತರ ಬೆಳೆ ಬೆಳೆಯುತ್ತಿರುವ ರೈತರಿಗೆ ಎಕರೆಗೆ ₹ 20,000 ಲಾಭ ಸಿಕ್ಕರೇ ಹೆಚ್ಚು ಎಂಬ ಸ್ಥಿತಿ ಇದೆ. ಅಡಿಕೆ ಬೆಳೆಗಾರರು ನಡೆಸುತ್ತಿರುವ ಐಷಾರಾಮಿ ಜೀವನ ಬೇರೆ ಬೆಳೆ ನೆಚ್ಚಿಕೊಂಡ ರೈತರನ್ನು ಆಕರ್ಷಿಸುತ್ತಿದೆ. 'ವರ್ಷವಿಡೀ ದುಡಿದರೂ ಕೈಗೆ 'ಬಿಡಿಗಾಸು' ಸಿಗುವುದಾದರೆ, ನಾವೇಕೆ ಇನ್ನೂ ಕೃಷಿ ಬೆಳೆಯನ್ನೇ ನಂಬಿಕೊಂಡು ಬದುಕಬೇಕು' ಎಂಬ ಭಾವನೆಯೊಂದಿಗೆ ಅಡಿಕೆ ತೋಟದತ್ತ ಮುಖಮಾಡುತ್ತಿದ್ದಾರೆ.

ಕಣ್ಣು ಕುಕ್ಕುತ್ತಿರುವ ದರ: ಏಳೆಂಟು ವರ್ಷಗಳ ಹಿಂದೆ ಅಡಿಕೆ ದರವು ಒಂದು ಕ್ವಿಂಟಲ್‌ಗೆ ₹ 80,000ದ ಗಡಿ ದಾಟಿತ್ತು. ಕಡಿಮೆ ಖರ್ಚು ಹಾಗೂ ಅಧಿಕ ಲಾಭ ತಂದುಕೊಡುವ ಅಡಿಕೆಗೆ ಕೆಲವು ವರ್ಷಗಳಿಂದ ಒಳ್ಳೆಯ ದರ ಇದೆ. ಕಳೆದ ಅಕ್ಟೋಬರ್‌ನಲ್ಲಿ ದರ ₹ 53,000 ಇತ್ತು. ಕೇಂದ್ರ ಸರ್ಕಾರ ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಳ್ಳಲು ಅನುಮತಿ ನೀಡಿದ್ದರಿಂದ ದರ ತುಸು ಕಸಿದಿದ್ದರೂ ಕನಿಷ್ಠ ₹ 45,000 ಬೆಲೆ ಈಗಲೂ ಸಿಗುತ್ತಿದೆ. ಅಡಿಕೆಗೆ ಸಿಗುತ್ತಿರುವ 'ಬಂಗಾರದ ಬೆಲೆ'ಯು ಭತ್ತ, ಮೆಕ್ಕೆಜೋಳ, ತರಕಾರಿ, ದಾಳಿಂಬೆ, ಕಬ್ಬು ಬೆಳೆಯುವ ರೈತರ ಕಣ್ಣು ಕುಕ್ಕುತ್ತಿದ್ದು, ನಾಲ್ಕೈದು ಎಕರೆ ಭೂಮಿಯಲ್ಲಿ ಅಡಿಕೆ ಸಸಿ ನೆಡಲು ಆರಂಭಿಸಿದ್ದಾರೆ. ಈಗಾಗಲೇ ಅಡಿಕೆ ಬೆಳೆದವರೂ ಕ್ಷೇತ್ರ ವಿಸ್ತರಣೆಗೆ ಒತ್ತು ನೀಡುತ್ತಿದ್ದಾರೆ.

ಚನ್ನಗಿರಿ ತಾಲ್ಲೂಕಿನ ಬೆಳಗೆರೆಯಲ್ಲಿ ಮಹಿಳೆಯರು ಹಸಿ ಅಡಿಕೆ ಸುಲಿಯುತ್ತಿರುವುದು.

'ಕೆಲ ವರ್ಷಗಳ ಹಿಂದೆ ಭತ್ತಕ್ಕೆ ಒಳ್ಳೆಯ ದರ ಬಂದಾಗ ದಾವಣಗೆರೆ ಜಿಲ್ಲೆಯಲ್ಲಿ ತೆಂಗಿನ ತೋಟ ತೆಗೆದು ಭತ್ತ ಬೆಳೆದಿದ್ದರು. ಈಗ ಅಡಿಕೆಯ ಸರದಿ. ಮುಂದಿನ 20–30 ವರ್ಷಗಳ ಕಾಲ ಅಡಿಕೆ ತೋಟದಿಂದ ಕನಿಷ್ಠ ಲಾಭ ಸಿಕ್ಕೇ ಸಿಗುತ್ತದೆ ಎಂಬುದು ರೈತರ ನಂಬಿಕೆಯಾಗಿದೆ' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಉಪಾಧ್ಯಕ್ಷ ತೇಜಸ್ವಿ ಪಟೇಲ್ ಹೇಳುತ್ತಾರೆ.

'ಒಂದು ಎಕರೆ ತೋಟ ನಿರ್ವಹಣೆಗೆ ವರ್ಷಕ್ಕೆ ಗರಿಷ್ಠ ₹ 75,000 ಖರ್ಚಾಗಬಹುದು. ಎಕರೆಗೆ 8ರಿಂದ 10 ಕ್ವಿಂಟಲ್ ಇಳುವರಿ ಪಕ್ಕಾ. ₹ 45,000ಕ್ಕಿಂತಲೂ ಹೆಚ್ಚು ದರ ಇರುವುದರಿಂದ ಎಕರೆಗೆ ಕನಿಷ್ಠ ₹ 3 ಲಕ್ಷ ಲಾಭ ಸಿಗುತ್ತದೆ. ನಾವೇ ಅಡಿಕೆ ಸುಲಿಸಿ, ಒಣಗಿಸಿ ಮಾರಿದರೆ ಒಂದು ಎಕರೆಗೆ ಖೇಣಿ (ಫಸಲು ಗುತ್ತಿಗೆ) ನೀಡುವುದಕ್ಕಿಂತ ₹ 50,000 ಹೆಚ್ಚು ಲಾಭ ಸಿಗಲಿದೆ' ಎಂಬುದು ಚನ್ನಗಿರಿ ತಾಲ್ಲೂಕು ಕಾರಿಗನೂರಿನ ರೈತ ಗುಂಟನೂರು ಮುರಗೇಶ್ ಅವರ ಲೆಕ್ಕಾಚಾರ.

'ದಾವಣಗೆರೆಯವರೂ ಅಡಿಕೆ ಬೆಳೆಯಬಹುದಾದರೆ ನಮಗೇಕೆ ಅಸಾಧ್ಯ ಎಂಬ ಪ್ರಶ್ನೆಯೇ ಅಡಿಕೆ ಬೆಳೆಯಲು ಸ್ಫೂರ್ತಿಯಾಯಿತು. ಆರಂಭದಲ್ಲಿ ನಾಲ್ಕು ಎಕರೆಯಲ್ಲಿ ಅಡಿಕೆ ಬೆಳೆದೆ. ಈಗ 14 ಎಕರೆಗೆ ವಿಸ್ತರಿಸಿದ್ದೇನೆ. ಕಳೆದ ವರ್ಷ ₹ 13 ಲಕ್ಷ ಆದಾಯ ಬಂದಿದೆ' ಎಂದು ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಹಮ್ಮಿಗಿ ಗ್ರಾಮದ ರೈತ ರಾಮಾಂಜನೇಯ ರಾಜು ತಿಳಿಸಿದರು.

'ಕೃಷಿ ಬೆಳೆಯನ್ನೇ ನಂಬಿಕೊಂಡಿರುವ ರೈತರು ಎಕರೆಗೆ ಅಬ್ಬಬ್ಬಾ ಎಂದರೆ ₹ 40,000 ಗಳಿಸಬಹುದು. ಅಂತೆಯೇ ಸಾಲ ಮಾಡಿ ಅಡಿಕೆ ಬೆಳೆಯುವ 'ರಿಸ್ಕ್' ತೆಗೆದುಕೊಳ್ಳುತ್ತಿದ್ದಾರೆ. ಬೆಳೆ ಕೈಕೊಟ್ಟರೆ ನಿರ್ವಹಿಸುವ ಸಾಮರ್ಥ್ಯವಿಲ್ಲದೆ, ಭಾರಿ ಲಾಭವಾದಾಗಿನ ಆರ್ಥಿಕ, ಸಾಮಾಜಿಕ ಅಸಮತೋಲನ ನಿಭಾಯಿಸುವ ಜಾಣ್ಮೆಯೂ ಇರುವುದಿಲ್ಲ. ಈ ಕಾರಣದಿಂದ ಇತಿಮಿತಿಯಲ್ಲೇ ಅಡಿಕೆ ಬೆಳೆಯುವುದು ಒಳಿತು' ಎಂಬುದು ಕೃಷಿ ಇಲಾಖೆಯ ದಾವಣಗೆರೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಕಿವಿಮಾತು.

'ಕರಾವಳಿ-ಮಲೆನಾಡಿಗೆ ಹೋಲಿಸಿದರೆ ಬಯಲುಸೀಮೆಯ ಅಡಿಕೆ ಬೆಳೆಗೆ ರೋಗಬಾಧೆ ಕಡಿಮೆ. ಮಲೆನಾಡಿನಲ್ಲಿ ರೋಗ ಕಾಣಿಸಿಕೊಂಡರೆ ಭಾರಿ ಪ್ರಮಾಣದಲ್ಲಿ ಫಸಲು ನಷ್ಟವಾಗುತ್ತದೆ. ಬಯಲು ಸೀಮೆಯಲ್ಲಿ ರೋಗದಿಂದ ಸ್ವಲ್ಪ ಇಳುವರಿ ಕಡಿಮೆಯಾದರೂ ಲಾಭ ಸಿಗುವುದರಲ್ಲಿ ಸಂದೇಹವಿಲ್ಲ. ಅಡಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆದಾಗ ಕೀಟಬಾಧೆಯಿಂದ ಇಳುವರಿ ಕುಸಿದು ಬೆಲೆ ಸ್ಥಿರವಾಗಿರುವ ಸಾಧ್ಯತೆಯೂ ಇದೆ' ಎಂದು ದಾವಣಗೆರೆಯ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಬಸವನಗೌಡ ಎಂ.ಜಿ. ಅಭಿಪ್ರಾಯಪಡುತ್ತಾರೆ.

ಉಷ್ಣಾಂಶ ಹೆಚ್ಚಾದರೆ ಇಳುವರಿ ಕುಸಿತ: 'ಬಯಲು ಸೀಮೆಯ ಅಡಿಕೆ ತೋಟಗಳಲ್ಲಿ ಸವಳು- ಜವಳು ಸಮಸ್ಯೆ ಕಾಣಿಸಿಕೊಂಡಿಲ್ಲ. ಭತ್ತದ ಗದ್ದೆಯನ್ನು ಅಡಿಕೆ ತೋಟ ಮಾಡಿದಾಗ ಬಸಿಗಾಲುವೆಗಳನ್ನು ನಿರ್ಮಿಸದಿದ್ದರೆ ಬೇರುಗಳಿಗೆ ಸರಿಯಾಗಿ ಗಾಳಿ ಸಿಗದೆ ರೋಗ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಬೇಸಿಗೆಯಲ್ಲಿ ಉಷ್ಣಾಂಶವು ನಿರಂತರ 40 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿದ್ದರೆ ಅಡಿಕೆ ಕಾಯಿ ಸ್ವಲ್ಪ ಉದುರುತ್ತದೆ. ಅಡಿಕೆಗೆ ಒಳ್ಳೆಯ ಬೆಲೆ ಇರುವುದರಿಂದ ಹೆಚ್ಚಿನ ನಷ್ಟವೇನೂ ಆಗುವುದಿಲ್ಲ' ಎಂದು ತೋಟಗಾರಿಕೆ ಇಲಾಖೆಯ ದಾವಣಗೆರೆ ಜಿಲ್ಲೆಯ ಉಪನಿರ್ದೇಶಕ ಜಿ.ಸಿ. ರಾಘವೇಂದ್ರ ಪ್ರಸಾದ್ ಅಭಿಪ್ರಾಯಪಡುತ್ತಾರೆ.

ಗರಿಗೆದರಿದ ನರ್ಸರಿ ಉದ್ಯಮ: 'ಈ ಹಿಂದೆ ಸಾಗರ, ತೀರ್ಥಹಳ್ಳಿ ಭಾಗದ ನರ್ಸರಿಗಳಿಂದ ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳ ರೈತರು ಅಡಿಕೆ ಸಸಿ ಖರೀದಿಸುತ್ತಿದ್ದರು. ಈಗ ದಾವಣಗೆರೆಯ ಚನ್ನಗಿರಿಯಲ್ಲೇ ಹಲವು ನರ್ಸರಿಗಳಲ್ಲಿ ಅಡಿಕೆ ಸಸಿ ಸಿಗುತ್ತಿದೆ. ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲೂ ಹಲವು ರೈತರು ತಮ್ಮ ತೋಟಗಳಲ್ಲೇ ಅಡಿಕೆ ಸಸಿ ಬೆಳೆಸಿ ಮಾರುತ್ತಿದ್ದಾರೆ. ಏಳೆಂಟು ವರ್ಷಗಳ ಹಿಂದೆ ವರ್ಷಕ್ಕೆ 5,000 ಅಡಿಕೆ ಸಸಿ ಬೆಳೆಸುತ್ತಿದ್ದೆವು. ಈಗ 2.50 ಲಕ್ಷ ಸಸಿ ಬೆಳೆಸಿದರೂ ಬೇಡಿಕೆ ಪೂರೈಸಲು ಸಾಧ್ಯವಾಗುತ್ತಿಲ್ಲ' ಎಂದು ಸಾಗರದ ಸಹ್ಯಾದ್ರಿ ನರ್ಸರಿಯ ಮಾಲೀಕ ಗಿರೀಶ್ ಹಕ್ರೆ ತಿಳಿಸಿದರು.

ಕರಾವಳಿ-ಮಲೆನಾಡಿನಲ್ಲೂ ಬೆಳೆ ವಿಸ್ತರಣೆ: ಕಳೆದ ಐದಾರು ವರ್ಷಗಳಲ್ಲಿ ಕರಾವಳಿ-ಮಲೆನಾಡಿನ ಭಾಗದಲ್ಲೂ ಅಡಿಕೆ ಬೆಳೆಯುವ ಪ್ರದೇಶ ಗಣನೀಯವಾಗಿ ಏರಿಕೆಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ 2016ರಲ್ಲಿ 70,111 ಹೆಕ್ಟೇರ್ ಪ್ರದೇಶದಲ್ಲಿದ್ದ ಅಡಿಕೆ ಬೆಳೆಯುತ್ತಿದ್ದ ಪ್ರದೇಶ ಈಗ 1.20 ಲಕ್ಷ ಹೆಕ್ಟೇರ್ ಮುಟ್ಟಿದೆ. ಶುಂಠಿ, ಅನಾನಸ್ ಬೆಳೆಯಲು ಮೂರು ವರ್ಷಗಳ ಗುತ್ತಿಗೆ ನೀಡುತ್ತಿರುವ ಮಲೆನಾಡಿನ ರೈತರು, ಈ ಅವಧಿಯಲ್ಲಿ ಅಡಿಕೆ ಸಸಿ ಬೆಳೆಸಿ ತೋಟ ಮಾಡುತ್ತಿದ್ದಾರೆ. ಬಗರ್‌ಹುಕುಂ ಭೂಮಿಯಲ್ಲೂ ದೊಡ್ಡ ಪ್ರಮಾಣದಲ್ಲಿ ಅಡಿಕೆ ತೋಟ ಎಲೆ ಎತ್ತುತ್ತಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 2016ರಲ್ಲಿ 18,527 ಹೆಕ್ಟೇರ್ ಇದ್ದ ಅಡಿಕೆ ಪ್ರದೇಶ, ಈಗ 33,365 ಹೆಕ್ಟೇರ್‌ಗೆ ಏರಿಕೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ 4,300 ಹೆಕ್ಟೇರ್‌ನಷ್ಟು ಅಡಿಕೆ ಪ್ರದೇಶ ಹೆಚ್ಚಾಗಿದೆ.

ಅಡಿಕೆಗೂ ನರೇಗಾ ಬಲ: ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ಸಣ್ಣ-ಅತಿ ಸಣ್ಣ ರೈತರಿಗೆ ಅಡಿಕೆ ತೋಟ ನಿರ್ಮಿಸಲು ಒಂದು ಹೆಕ್ಟೇರ್‌ಗೆ ₹ 80,000ದವರೆಗೆ ಸಹಾಯಧನ ನೀಡಲಾಗುತ್ತಿದೆ. ಅರೆ ಮಲೆನಾಡು ಪ್ರದೇಶಗಳಾದ ಚನ್ನಗಿರಿ, ಹೊನ್ನಾಳಿ, ನ್ಯಾಮತಿ, ಹಾನಗಲ್ ತಾಲ್ಲೂಕುಗಳಲ್ಲಿ ಈ ಸೌಲಭ್ಯ ಪಡೆದು ಅಡಿಕೆ ತೋಟ ಎಬ್ಬಿಸಲು ರೈತರು ಪೈಪೋಟಿಗೆ ಇಳಿದಿದ್ದಾರೆ. ಇದರ ಬೆನ್ನಲ್ಲೇ ಬಯಲುಸೀಮೆಯ ತಾಲ್ಲೂಕುಗಳಿಗೂ ನರೇಗಾದಡಿ ನೆರವು ನೀಡಬೇಕು ಎಂಬ ಕೂಗು ರೈತರಿಂದ ಕೇಳಿಬರುತ್ತಿದೆ.

(ಪೂರಕ ಮಾಹಿತಿ: ಕೆ.ಜಿ. ಮರಿಯಪ್ಪ, ಜಿ.ಬಿ. ನಾಗರಾಜ್, ವೆಂಕಟೇಶ್ ಜಿ.ಎಚ್., ಕೆ.ಎಂ. ಸತೀಶ್ ಬೆಳ್ಳಕ್ಕಿ, ಸಿದ್ದು ಆರ್.ಜಿ. ಹಳ್ಳಿ, ಬಿ.ಜಿ. ಧನ್ಯಪ್ರಸಾದ್, ಸಂಧ್ಯಾ ಹೆಗಡೆ, ಗಣಪತಿ ಹೆಗಡೆ)

ಪರಿಸರ ಸಮತೋಲನ ಕಾಯ್ದುಕೊಳ್ಳಲಿ

ಅಡಿಕೆ ಪ್ರದೇಶ ಹೆಚ್ಚುತ್ತಿದ್ದರೂ ಆಹಾರ ಭದ್ರತೆ ಇನ್ನೂ ಆತಂಕದ ಸ್ಥಿತಿ ತಲುಪಿಲ್ಲ. ಹವಾಮಾನ ವೈಪರಿತ್ಯ ವಿಷಮ ಸ್ಥಿತಿ ತಲುಪಿಸಿದ್ದು, ಮುಂದಿನ 10 ವರ್ಷಗಳಲ್ಲಿ ಏನಾಗುತ್ತದೆ ಎಂಬುದನ್ನು ಊಹಿಸಲಸಾಧ್ಯ. ಅಡಿಕೆಯೊಂದಿಗೆ ಬೇಕಾದ ಆಹಾರ ಧಾನ್ಯಗಳನ್ನೂ ಬೆಳೆದುಕೊಳ್ಳಲಿ. ಪರಿಸರ ಸಮತೋಲನ ಕಾಯ್ದುಕೊಂಡರೆ ಮಾತ್ರ ತೋಟ ಬಹುಕಾಲ ಉಳಿಯಲು ಸಾಧ್ಯ.

ಶ್ರೀನಿವಾಸ್ ಚಿಂತಾಲ್, ಕೃಷಿ ಇಲಾಖೆ ಜಂಟಿ ನಿರ್ದೇಶಕ, ದಾವಣಗೆರೆ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಕಮ್ಮತ್ತ ಮರಿಕುಂಟೆಯಲ್ಲಿ ಅಡಿಕೆ ತೋಟ ನಿರ್ಮಿಸಲು ಸಸಿ ಹಾಕಿರುವುದು.

ರೈತಸ್ನೇಹಿ ಸಹಕಾರಿ ಮಾರುಕಟ್ಟೆ

'ಅಡಿಕೆ ಬೆಳೆಗೆ ಇರುವಷ್ಟು ವ್ಯವಸ್ಥಿತವಾದ ರೈತಸ್ನೇಹಿ ಸಹಕಾರಿ ಮಾರುಕಟ್ಟೆ ವ್ಯವಸ್ಥೆ ಉಳಿದ ಬೆಳೆಗಳಿಗೆ ಇಲ್ಲ. ಎರಡು ವರ್ಷ ಇಟ್ಟರೂ ಅಡಿಕೆ ಹಾಳಾಗುವುದಿಲ್ಲ. ದರ ಕುಸಿದರೆ ರೈತರು ಅಡಿಕೆಯನ್ನು ಮಾರಾಟ ಮಾಡದೇ ನಮ್ಮ ಗೋದಾಮಿನಲ್ಲಿ ಇಟ್ಟು ಅಡಮಾನ ಸಾಲ ಪಡೆದುಕೊಳ್ಳಬಹುದಾಗಿದೆ. ಒಳ್ಳೆಯ ಬೆಲೆ ಇದ್ದಾಗ ಮಾರಲು ಅವಕಾಶ ಇರುವುದರಿಂದ ಅಡಿಕೆ ಬೆಳೆಗಾರರು ನೆಮ್ಮದಿಯಿಂದ ಇದ್ದಾರೆ' ಎಂದು ಚನ್ನಗಿರಿಯ ತುಮ್ಕೋಸ್ ಅಧ್ಯಕ್ಷ ಆರ್.ಎಂ. ರವಿ ಅಭಿಪ್ರಾಯಪಡುತ್ತಾರೆ.

'ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಂಡಿದ್ದರಿಂದ ಹೆಚ್ಚಿನ ಪ್ರಮಾಣದಲ್ಲೇನೂ ಬೆಲೆ ಕುಸಿತವಾಗಿಲ್ಲ. ನಮ್ಮ ಬಹುಪಾಲು ಅಡಿಕೆ ನಮ್ಮಲ್ಲೇ ಬಳಕೆಯಾಗುತ್ತಿರುವುದೇ ಇದಕ್ಕೆ ಕಾರಣ. ಅಡಿಕೆ ತೋಟಗಳು ಹೆಚ್ಚುತ್ತಿರುವುದರಿಂದ ದರದ ಮೇಲೆ ಪರಿಣಾಮ ಬೀರಲು ಇನ್ನೂ ನಾಲ್ಕೈದು ವರ್ಷಗಳಾದರೂ ಬೇಕಾಗಬಹುದು. ಭವಿಷ್ಯದಲ್ಲೂ ಅಡಿಕೆಗೆ ಉತ್ತಮ ದರ ಕಾಯ್ದುಕೊಳ್ಳಲು ಉಪ ಉತ್ಪನ್ನಗಳ ಬಗ್ಗೆ ಸರ್ಕಾರ, ಸಹಕಾರ ಸೊಸೈಟಿಗಳು, ಬೆಳೆಗಾರರು ಸಂಶೋಧನೆ ನಡೆಸಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

ತುಮ್ಕೋಸ್, ದಾವಣಗೆರೆಯ ದ್ಯಾಮ್ಕೋಸ್, ಭದ್ರಾವತಿಯ ರ್ಯಾಮ್ಕೊ, ಸಾಗರದ ಆಪ್ಕೋಸ್, ಶಿವಮೊಗ್ಗದ ಮ್ಯಾಮ್ಕೋಸ್, ದಕ್ಷಿಣ ಕನ್ನಡದ ಕ್ಯಾಂಪ್ಕೊ, ಶಿರಸಿಯ ತೋಟಗಾರ ಸೊಸೈಟಿ... ಹೀಗೆ ಹಲವು ಸಹಕಾರ ಮಾರುಕಟ್ಟೆಗಳು ವ್ಯವಸ್ಥಿತವಾಗಿ ಅಡಿಕೆ ವಹಿವಾಟು ನಡೆಸುತ್ತಿದ್ದು, ಬೆಳೆಗಾರರ ಹಿತವನ್ನು ಕಾಯುತ್ತಿದೆ.

ತೋಟವನ್ನು ಖೇಣಿ (ಫಸಲು ಗುತ್ತಿಗೆ) ನೀಡುವ ಪದ್ಧತಿಯೂ ಬಯಲುಸೀಮೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದೆ. ಜೊತೆಗೆ ಹಸಿ ಅಡಿಕೆಯನ್ನು ಕೊಯ್ದು, ಸುಲಿದು, ಒಣಗಿಸಿ ಮಾರಾಟಕ್ಕೆ ಸಿದ್ಧಮಾಡಿ ವಾಪಸ್ ಕೊಡುವ ಪದ್ಧತಿಯೂ ಚಾಲ್ತಿಯಲ್ಲಿದೆ. ಹಸಿ ಅಡಿಕೆ ಮಾರಾಟ ಮಾಡಲೂ ಅವಕಾಶವಿದ್ದು, ಒಂದು ಕ್ವಿಂಟಲ್ ಹಸಿ ಅಡಿಕೆಗೆ ಸದ್ಯ ₹ 6,4000ವರೆಗೂ ದರ ಇದೆ.

ಚನ್ನಗಿರಿ ತಾಲ್ಲೂಕಿನ ಬೆಳಲಗೆರೆಯಲ್ಲಿ ಮಹಿಳೆಯರು ಹಸಿ ಅಡಿಕೆ ಸುಲಿಯುತ್ತಿರುವುದು. ಪ್ರಜಾವಾಣಿ ಚಿತ್ರ – ಸಂತೋಷ್ ಎನ್.ಜೆ.

ಅಡಿಕೆಗೆ ನೀರೆರೆದ ಯೋಜನೆ

ಭದ್ರಾ ಮೇಲ್ದಂಡೆ, ತುಂಗಾ ಮೇಲ್ದಂಡೆ ಹಾಗೂ ಕೆರೆ ತುಂಬಿಸುವ ಯೋಜನೆಗಳಿಂದಾಗಿ ಮಳೆಯಾಶ್ರಿತ ಪ್ರದೇಶಗಳಿಗೂ ನೀರಾವರಿ ಸೌಲಭ್ಯ ಸಿಗುತ್ತಿರುವುದರಿಂದ ಪಾಳುಬಿದ್ದಿದ್ದ ಜಮೀನಿನಲ್ಲೂ ಅಡಿಕೆ ತೋಟ ತಲೆ ಎತ್ತುತ್ತಿದೆ.

ಎರಡು ವರ್ಷಗಳಿಂದ ಉತ್ತಮ ಮಳೆಯಾಗಿದ್ದು, ಬಯಲುಸೀಮೆಯ ಜಿಲ್ಲೆಗಳ ಹಲವು ಕೆರೆಗಳು ತುಂಬಿ, ಅಂತರ್ಜಲ ಮಟ್ಟ ಹೆಚ್ಚಾಗಿದೆ. ಕೊಳವೆಬಾವಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದ್ದು, ಮೂರ್ನಾಲ್ಕು ವರ್ಷ ನೀರಿಗೆ 'ಬರ' ಉಂಟಾಗುವುದಿಲ್ಲ ಎಂಬ ವಿಶ್ವಾಸದಿಂದ ರೈತರು ಅಡಿಕೆ ಬೆಳೆಯ ಕಡೆ ಒಲವು ತೋರಿದ್ದಾರೆ.

ಭದ್ರಾ ಮೇಲ್ದಂಡೆ, ಎತ್ತಿನಹೊಳೆ ಯೋಜನೆ ನಂಬಿಕೊಂಡು ತುಮಕೂರು ಜಿಲ್ಲೆಯಲ್ಲಿ ರೈತರು ಈಗಿನಿಂದಲೇ ಅಡಿಕೆಯತ್ತ ಪೈಪೋಟಿಗೆ ಇಳಿದಿದ್ದಾರೆ. ಒಂದೆರಡು ವರ್ಷಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಪೂರ್ಣಗೊಳ್ಳಲಿದೆ ಎಂಬ ಕಾರಣಕ್ಕೆ ಚಿತ್ರದುರ್ಗ ಜಿಲ್ಲೆಯಲ್ಲೂ ನಾಲೆ ಪಕ್ಕದ ಎರಡೂ ಬದಿಯ ಜಮೀನುಗಳಲ್ಲಿ ಅಡಿಕೆ ಸಸಿಗಳು ಮೇಲೇಳುತ್ತಿವೆ. ಹಿರಿಯೂರಿನ ವಾಣಿವಿಲಾಸ ಸಾಗರ ಜಲಾಶಯ 89 ವರ್ಷಗಳ ಬಳಿಕ ಭರ್ತಿಯಾಗಿರುವುದೂ ರೈತರಲ್ಲಿ ಭರವಸೆ ಮೂಡಿಸಿದೆ.

ದಾಳಿಂಬೆ ಬೆಳೆಗಾರರೂ ಅಡಿಕೆ ಸೆಳೆತಕ್ಕೆ ಒಳಗಾಗುತ್ತಿದ್ದಾರೆ. ಈರುಳ್ಳಿ, ಮೆಕ್ಕೆಜೋಳ, ಶೇಂಗಾ, ಸಿರಿಧಾನ್ಯ ಬೆಳೆಯುತ್ತಿದ್ದ ಜಮೀನುಗಳಲ್ಲಿ ಅಡಿಕೆ ಕಾಣುತ್ತಿದೆ. ಕೆರೆ ತುಂಬಿಸುವ ಯೋಜನೆಯಿಂದಾಗಿ ಬರಪೀಡಿತ ಜಗಳೂರು ತಾಲ್ಲೂಕಿನ ರೈತರ ಮನದಲ್ಲೂ ಅಡಿಕೆ ತೋಟ ನಿರ್ಮಿಸಬೇಕೆಂಬ ಕನಸು ಚಿಗುರೊಡೆದಿದೆ.

ಬೆಳೆ ವಿಸ್ತರಣೆಗಿಂತ ಬೆಳೆ ವೈವಿಧ್ಯ ಮುಖ್ಯ

ಮಲೆನಾಡಿನಲ್ಲಿ ಈಗ ಅಡಿಕೆಗೆ ಎಲೆಚುಕ್ಕಿ ರೋಗ ಬಾಧಿಸಿದಂತೆ ಎರಡು ವರ್ಷಗಳ ಹಿಂದೆ ಬಯಲುಸೀಮೆಯಲ್ಲಿ ಮೆಕ್ಕೆಜೋಳಕ್ಕೆ ಲದ್ದಿಹುಳು ಬಾಧೆ ತೀವ್ರವಾಗಿ ಕಾಣಿಸಿಕೊಂಡಿತ್ತು. ಭಾರಿ ಮಳೆ ಹಾಗೂ ಬಿಸಿಲಿನಿಂದ ಅಡಿಕೆಗೆ ತೊಂದರೆ ಆಗಲಿದೆ. 2016–17ರಲ್ಲಿ ಬರಗಾಲ ಬಂದಾಗ ಕಡೂರು–ಅಜ್ಜಂಪುರ ಭಾಗದಲ್ಲಿ ಶೇ 30ರಷ್ಟು ಅಡಿಕೆ ತೋಟಗಳು ನಾಶವಾಗಿದ್ದವು. ಅಡಿಕೆಗಿಂತ ಕಾಳುಮೆಣಸು, ಕೊಕ್ಕೊ, ಲವಂಗ, ಜಾಯಿಕಾಯಿ, ತೆಂಗು ಬೆಳೆ ವೈವಿಧ್ಯ ಕಾಪಾಡಿಕೊಂಡರೆ ಆರ್ಥಿಕವಾಗಿಯೂ ಲಾಭವಾಗಲಿದೆ.

ಡಾ. ನಾಗರಾಜಪ್ಪ ಅಡಿವಪ್ಪರ್, ಮುಖ್ಯಸ್ಥರು, ಅಡಿಕೆ ಸಂಶೋಧನಾ ಕೇಂದ್ರ, ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

ಅಡಿಕೆ ಬೆಳೆ ಅವಲಂಬನೆ ತಗ್ಗಿಸಲಿ

ದಾವಣಗೆರೆ ಜಿಲ್ಲೆಯಲ್ಲಿ ಭತ್ತದ ಜೊತೆಗೆ ಕಬ್ಬನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಕಟಾವು, ದರದ ಸಮಸ್ಯೆಯಿಂದಾಗಿ ಕಬ್ಬಿನ ಜಾಗವನ್ನು ಅಡಿಕೆ ಆಕ್ರಮಿಸುತ್ತಿದೆ. ಭಾರತವು ಖಾದ್ಯ ತೈಲವನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವುದನ್ನು ತಪ್ಪಿಸಲು ಸರ್ಕಾರ ತಾಳೆ ಬೆಳೆಗೆ ಪ್ರೋತ್ಸಾಹ ನೀಡಿದ್ದರೆ ಅಡಿಕೆಯ ಅವಲಂಬನೆ ತಗ್ಗಿಸಲು ಸಾಧ್ಯ.

ತೇಜಸ್ವಿ ಪಟೇಲ್, ಉಪಾಧ್ಯಕ್ಷ, ರಾಜ್ಯ ಕಬ್ಬು ಬೆಳೆಗಾರರ ಸಂಘ

ಹಣಕಾಸಿನ ಪರಿಸ್ಥಿತಿ ಸುಧಾರಣೆ

ಆಹಾರ ಧಾನ್ಯ ಬೆಳೆಯ ವೆಚ್ಚ ಹೆಚ್ಚುತ್ತಿದ್ದು, ಕೃಷಿ ಕೂಲಿ ಕಾರ್ಮಿಕರ ಕೊರತೆಯೂ ಇರುವುದರಿಂದ ನೀರಾವರಿ ಸೌಲಭ್ಯಕ್ಕೆ ತಕ್ಕಂತೆ ಅಡಿಕೆ ಬೆಳೆಯುತ್ತಿದ್ದೇವೆ. ಅಡಿಕೆಗೆ ಉತ್ತಮ ಧಾರಣೆ ಇರುವುದರಿಂದ ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ.

ನಾಗರಾಜು, ಇಡಕನಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ

ಹಾಕಿದ ಬಂಡವಾಳವೂ ಬರುತ್ತಿರಲಿಲ್ಲ

ಈರುಳ್ಳಿ, ಮೆಕ್ಕೆಜೋಳ ಬೆಳೆಯುತ್ತಿದ್ದೆ. ಹಾಕಿದ ಬಂಡವಾಳವೂ ಬರುತ್ತಿರಲಿಲ್ಲ. ಮೂರು ವರ್ಷಗಳಿಂದ ಕೆರೆಗಳು ಭರ್ತಿಯಾಗಿವೆ. ಕೊಳವೆಬಾವಿಯಲ್ಲಿ ನೀರು ಬರುತ್ತಿದೆ. ಎಂಟು ತಿಂಗಳ ಹಿಂದೆ ಮೂರು ಎಕರೆಯಲ್ಲಿ ಅಡಿಕೆ ಸಸಿ ಹಾಕಿದ್ದೇನೆ.

ಎಚ್.ಆಂಜನೇಯ, ರೈತ, ಕಮ್ಮತ್ತ ಮರಿಕುಂಟೆ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ಬೆಳೆ ವಿಸ್ತರಣೆಯಿಂದ ದರ ಕುಸಿತದ ಆತಂಕ



ಮುಂದೆ ಅಡಿಕೆ ಬೆಳೆ ಪ್ರದೇಶ ವಿಸ್ತರಣೆಯಾದಂತೆ ಬೆಲೆ ಕುಸಿಯಲಿದೆ. ಭೂತಾನ್‌ನಿಂದ ಅಡಿಕೆ ಆಮದು ಆರಂಭವಾಗುತ್ತಿದ್ದಂತೆಯೇ ದೇಸಿ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ ₹ 2,000 ಬೆಲೆ ಕಡಿಮೆ ಆಗಿದೆ. ಪ್ರದೇಶ ಹೆಚ್ಚಾದರೆ ಸಹಜವಾಗಿಯೇ ಬೆಲೆಯ ಮೇಲೆ ಪರಿಣಾಮ ಬೀರಲಿದೆ.

ರಮೇಶ ಹೆಗ್ಡೆ, ಅಧ್ಯಕ್ಷ, ಶಿವಮೊಗ್ಗ ಜಿಲ್ಲಾ ಅಡಿಕೆ ಬೆಳೆಗಾರರ ಸಂಘ

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 13-11-1997

● ಬೆಂಗಳೂರು ತಿರುಪತಿ ಮಧ್ಯೆ ನೇರ ವಿಮಾನ ಸಂಚಾರ

ಬೆಂಗಳೂರು, ನವೆಂಬರ್ 12– ನಗರದ ವಿಮಾನ ನಿಲ್ದಾಣವನ್ನು 50 ಲಕ್ಷ ರೂಪಾಯಿ ವೆಚ್ಚದಲ್ಲಿ ಆಧುನೀಕರಣಗೊಳಿಸುವುದರ ಜೊತೆಗೆ ವಿಸ್ತರಿಸಲಾಗುವುದೆಂದು ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಹಾಗೂ ವಿಮಾನ ಸಂಚಾರ ಸಾರಿಗೆ ಸಚಿವೆ ಡಾ. ಸರೋಜಿನಿ ಮಹಿಷಿ ಅವರು ಇಂದು ಇಲ್ಲಿ ಪ್ರಕಟಿಸಿದರು. ದೇಶದ ಪ್ರಸಿದ್ಧ ಯಾತ್ರಾ ಸ್ಥಳವಾದ ಏಳು ಬೆಟ್ಟದ ತಿರುಪತಿ ಹಾಗೂ ನಗರದ ನಡುವೆ ಸಂಪರ್ಕವನ್ನು ಬೆಳಿಗ್ಗೆ ಎಚ್.ಎ.ಎಲ್ ವಿಮಾನ ನಿಲ್ದಾಣದ ಬಳಿ ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 13-11-1972

● ಬಂದ್ ನಿಷೇಧ ತೀರ್ಪಿಗೆ ಸುಪ್ರೀಂ ಕೋರ್ಟ್ ಅಸ್ತು

ನವದೆಹಲಿ, ನವೆಂಬರ್ 12 (ಪಿಟಿಐ)– ಧಾರ್ಮಿಕ ಸಂಘಟನೆಗಳು, ರಾಜಕೀಯ ಪಕ್ಷಗಳು ಹಾಗೂ ಇತರೆ ಸಂಘಟನೆಗಳು ಸಂಘಟಿಸುವ ಸಾರ್ವತ್ರಿಕ ಮುಷ್ಕರ ಅಥವಾ ಬಂದ್ ಕಾನೂನು ವಿರೋಧಿ ಹಾಗೂ ಸಂವಿಧಾನ ವಿರೋಧಿ ಎಂದು ಕೇರಳ ಹೈಕೋರ್ಟ್ ನೀಡಿದ ತೀರ್ಪನ್ನು ಸುಪ್ರೀಂ ಕೋರ್ಟ್ ಇಂದು ಎತ್ತಿ ಹಿಡಿದಿದೆ.

ಸಿಜೆಐ ಜೆ.ಎಸ್. ವರ್ಮಾ, ನ್ಯಾಯಮೂರ್ತಿಗಳಾದ ಬಿ.ಎನ್. ಕೃಪಾಲ್ ಹಾಗೂ ವಿ.ಎನ್. ಖಾರೆ ಒಳಗೊಂಡ ನ್ಯಾಯಪೀಠ ಜುಲೈ 28ರಂದು ಕೇರಳ ಹೈಕೋರ್ಟ್ ನೀಡಿದ ತೀರ್ಪನ್ನು ಪ್ರಶ್ನಿಸಿ ಸಿಪಿಎಂ ಸಲ್ಲಿಸಿದ ವಿಶೇಷ ಅರ್ಜಿಯನ್ನು ವಜಾ ಮಾಡಿದೆ.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ನವೆಂಬರ್ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಪಂಚಮಿ ಗಂ. 24-52 ನಕ್ಷತ್ರ: ಆರ್ದ್ರಾ ಗಂ. 10-18 ಯೋಗ: ಸಾಧ್ಯ ಗಂ. 22-19, ಕರಣ: ಕೌಲವ ಗಂ. 11-38, ತುಲಾ ಮಾಸದ 26 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-32 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 17 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 6, 8

ಮೇಷ: ಹಕ್ಕಿಯಂತೆ ಹಾರಾಡುವ ಆಸೆ ತಪ್ಪಲ್ಲ, ಆದರೆ ಸಾಧಕಬಾಧಕಗಳನ್ನು ಅರಿತುಕೊಂಡು ಹೆಜ್ಜೆ ಇಟ್ಟರೆ ಕ್ಷೇಮ. ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಈ ದಿನ ಹೆಚ್ಚಿನ ಜನ ಮನ್ನಣೆ ಲಭ್ಯವಾಗುವುದು.

ವೃಷಭ: ಇನ್ನೊಬ್ಬರ ಕಷ್ಟಗಳಿಗೆ ಸಹಕರಿಸುವ ಸಮಯದಲ್ಲಿ ನಿಮ್ಮ ಸ್ವಾರ್ಥವನ್ನು ಬಳಸಿಕೊಳ್ಳಬೇಡಿ. ಆ ಕೆಲಸವನ್ನು ದೇವರು ಮೆಚ್ಚುವುದಿಲ್ಲ. ಮಾತಿನಲ್ಲಿ ಬಿಗು ಮತ್ತು ಗಾಂಭೀರ್ಯವನ್ನು ಇಟ್ಟುಕೊಳ್ಳುವುದು ನಿಮ್ಮ ಗೌರವವನ್ನು ಹೆಚ್ಚಿಸುತ್ತದೆ.

ಮಿಥುನ: ಸಜ್ಜನರ ಸಹವಾಸ ಮತ್ತು ಸನ್ಮಾರ್ಗದ ಬುದ್ಧಿಯನ್ನು ಕಾಪಾಡಿಕೊಳ್ಳುವುದು ಉತ್ತಮ. ನಿಮ್ಮ ಕಾರ್ಯತಂತ್ರಗಳಿಗೆ ಎದುರಾಳಿಯ ಸೋಲು ನಿಶ್ಚಿತವಾಗುವುದು. ನವಗ್ರಹಗಳ ಆರಾಧನೆಯಿಂದ ಶುಭ ಫಲವನ್ನು ಹೊಂದುವಿರಿ.

ಕರ್ಕಾಟಕ: ಎಲ್ಲರನ್ನೂ ನಂಬುವ ನಿಮ್ಮ ದೌರ್ಬಲ್ಯದಿಂದ ತೊಂದರೆ ಉಂಟಾಗಬಹುದು. ಯಾವುದು ಸರಿ ಯಾವುದು ತಪ್ಪು ಎನ್ನುವ ತೀರ್ಮಾನಕ್ಕೆ ಬರುವುದು ಕಷ್ಟಕರವಾದ ವಿಚಾರ. ಪ್ರಯಾಣದಲ್ಲಿ ಜಾಗ್ರತೆ ವಹಿಸಿರಿ.

ಸಿಂಹ: ನಿಮ್ಮದೇ ಸ್ವಂತ ಉದ್ಯೋಗ ಘಟಕವನ್ನು ಹೊಂದಿದ್ದರೆ ಕಾರ್ಮಿಕರ ಉತ್ತಮವಾದ ಬೆಂಬಲ ಲಭ್ಯವಾಗಲಿದೆ. ಬಟ್ಟೆ ವ್ಯಾಪಾರಿಗಳಿಗೆ ರೇಷ್ಮೆ ಮತ್ತು ಹತ್ತಿ ಬಟ್ಟೆಯ ಮೇಲೆ ಅಧಿಕ ಬಂಡವಾಳ ಹೂಡುವ ಬಗ್ಗೆ ಯೋಚನೆ ಬರಲಿದೆ.

ಕನ್ಯಾ: ಮಕ್ಕಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಸರಿಯಲ್ಲ. ಯಾವುದೇ ರೀತಿಯ ಒತ್ತಡಗಳನ್ನು ಮಕ್ಕಳ ಮೇಲೆ ಹೇರಬೇಡಿ. ವ್ಯಾಪಾರಸ್ಥರು ವ್ಯಾಪಾರ ಸ್ಥಳದ ವಿನ್ಯಾಸ ಹೊಸದಾಗಿಡಲು ಮತ್ತು ಅಲಂಕೃತವಾಗಿಡಲು ಪ್ರಯತ್ನಿಸಿ.

ತುಲಾ: ಗೊಂದಲದಲ್ಲಿರುವ ನಿಮಗೆ ಒಳಿತಿನ ದಾರಿ ಸಿಗಲಿದೆ. ಔಷಧಿ ವ್ಯಾಪಾರಿಗಳಿಗೆ ಆದಾಯದ ಇನ್ನೊಂದು ಮೂಲ ಸಿಗುವುದು. ಕೃಷಿಕರು ಈಗಿನ ಕಾಲಕ್ಕೆ ತಕ್ಕಂತೆ ಯಂತ್ರೋಪಕರಣಗಳ ಬಳಕೆ ಮಾಡುವ ಬಗ್ಗೆ ಗಮನಹರಿಸಿ.

ವೃಶ್ಚಿಕ: ಯೋಗ್ಯತೆ ಇಲ್ಲದ ವ್ಯಕ್ತಿಗೆ ನಿಮ್ಮ ಉದಾರತೆ ತೋರುವುದರಿಂದ ನಿಮ್ಮ ದಡ್ಡತನದ ಪ್ರದರ್ಶನ ಆಗುವುದು. ಕೆಟ್ಟ ಮಾತಿಗೆ ಮಾತನ್ನು ಬೆಳೆಸುವ ಕಾರಣದಿಂದ ಸಂಬಂಧಗಳು ಒಡೆದುಹೋಗುವ ಸಂಭವವಿದೆ.

ಧನು: ಸರಳ ವ್ಯಕ್ತಿತ್ವ ನಿಮ್ಮ ಗೌರವವನ್ನು ಇಮ್ಮಡಿಗೊಳಿಸಲಿದೆ. ಬಾಳ ಸಂಗಾತಿಯ ಆಯ್ಕೆ ವಿಚಾರದಲ್ಲಿ ಸೌಂದರ್ಯಕ್ಕಿಂತ ಗುಣ, ನಡತೆಗೆ ಪ್ರಾಮುಖ್ಯತೆ ನೀಡಿ. ಕಪ್ಪು ವಸ್ತ್ರ ಈ ದಿನ ಶುಭವನ್ನು ಉಂಟುಮಾಡಲಿದೆ.

ಮಕರ: ಈ ದಿನದ ಕೆಲಸ ಕಾರ್ಯಗಳು ನಿಮ್ಮ ಯೋಚನೆಯ ವಿರುದ್ಧವಾಗಿ ನಡೆಯಲಿದೆ. ಗಾಬರಿಯಾಗುವ ಅವಶ್ಯಕತೆ ಇಲ್ಲ. ಹಣಕಾಸಿನ ಪರಿಸ್ಥಿತಿ ನಿಮ್ಮನ್ನು ನಿದ್ದೆಗೆಡಿಸಲಿದೆ. ಕಷ್ಟವನ್ನು ಎದುರಿಸುವ ಧೈರ್ಯವನ್ನು ತಂದುಕೊಳ್ಳಿರಿ.

ಕುಂಭ: ವಿದ್ಯಾರ್ಥಿಗಳಿಗೆ ಮಿತ್ರರ ಸಹವಾಸ ಅನುಕೂಲವಾಗಿ ಕಂಡುಬರುವುದು. ರಚನಾತ್ಮಕ ಕೆಲಸಗಳಿಗಿಂತ ಅಗತ್ಯವಾದ ಕೆಲಸ ನಿರ್ವಹಿಸುವ ಬಗ್ಗೆ ಮನಸ್ಸು ಬೆಳೆಸಿಕೊಳ್ಳುವುದು ಉತ್ತಮ. ಕಾರ್ಯ ಸಿದ್ಧಿಯಾಗುವುದು.

ಮೀನ: ಸಂಸಾರದ ಜವಾಬ್ದಾರಿ ಹೆಚ್ಚಲಿದೆ. ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಕೂಡ ಆತಂಕಕ್ಕೆ ಕಾರಣವಾಗಬೇಕಿಲ್ಲ. ಸಮಯಕ್ಕೆ ಸರಿಯಾದ ಆಹಾರ ಸೇವನೆಯಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಪದಬಂಧ 5137 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಾಧಕನಿಗುಂಟಾದ ಅಡ್ಡಿ! (3)
3.ಕೊನೆಗೆ ಬೆಲೆಯಿಟ್ಟಾಗಲೇ ಮಡಿಕೆ ಕಂಡೀತು (3)
5.ಪದಾತಿ ಹತ್ತಿರವಿರುವ ಗಂಡ (2)
6.ತರ್ಕ ಮಾಡುತ್ತಿರುವ ವ್ಯಾಪಾರಿ (3)
7.ನೆನಪಲ್ಲೇ ಇರುವ ಕಾರಣ (2)
9.ವಸತಿ ಹತ್ತಿರ ಕಾಣಿಸಿದ ತರುಣಿ (3)
10.ತಾಂಬೂಲವಿಲ್ಲಿ ಉಲ್ಟಾಪಲ್ಟಾ ಆಗಿದೆ (3)
11.ಹರಕೆ ಹೊತ್ತಿರುವವನ ಮೆಟ್ಟು (2)
13.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)
15.ಮಾವನ ಮರ್ಯಾದೆ (2)
16.ಪೈರು ಕೊಯ್ಯುವುದು (3)
17.ಲೋಭಿ ಇಲ್ಲಿದ್ದಾನೆ (3)

ಮೇಲಿಂದ ಕೆಳಕ್ಕೆ
1.ಹೆರಿಗೆಯಾದ ಹೆಂಗಸು (3)
2.ಕಕ್ಕಾಬಿಕ್ಕಿಯಾಗಿ ನಿಂತಿರುವ ಪೆದ್ದ! (3)
3.ಪದ ಹೇಳಿದ್ದಕ್ಕೆ ಬಹುಮಾನವಾಗಿ ಸಿಕ್ಕ ಬಿಲ್ಲೆ (3)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ಹಿಂದಿನಿಂದ ಉಳಿದು ಬಂದ ಪ್ರಾಣಿ ಪಕ್ಷಿಗಳ ಅವಶೇಷ (5)
8.ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವುದು (5)
12.ಈತ ಕಾಪಾಡುವವನು (3)
13.ಧಾನ್ಯಗಳನ್ನು ತುಂಬಿಡುವ ಕಣಜ (3)
14.ಮರಮುಟ್ಟುಗಳನ್ನು ತಿಂದು ಮಣ್ಣು ಮಾಡುವ ಹುಳು (3)
15.ತಿಂಗಳಿಗೊಮ್ಮೆ ಜರುಗುವಂಥದ್ದು (3)



5136ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸ್ವಾವಲಂಬನೆ 3.ಪುಲ್ಲಿಂಗ 5.ತಗಡು 7.ಪುಳಕ 9.ಸಂದೂಕ 12.ಕಲಹ 14.ಸರಕು 16.ಗುಜರಿ 17.ವಿಕಟಕವಿ

ಮೇಲಿಂದ ಕೆಳಕ್ಕೆ: 1.ಸ್ವಾಗತ 2.ನೆನಪು 3.ಪುಸ್ತಕ 4.ಗಯ್ಯಾಳಿ 6.ಗರ್ಜನೆ 8.ಳವಕ 9.ಸಂಕುಲ 10.ಅಧರ 11.ಅಲಗು 12.ಕಸ್ತೂರಿ 13.ಹರವಿ 15.ಕುಲಾವಿ

ಸುಡೊಕು 5523

	6		8	7			9	3
								4
	8		5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5522 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಿದ್ರೆಯಲ್ಲಿದ್ದ ಸೆಕ್ಯೂರಿಟಿ ಗಾರ್ಡ್ ಕತ್ತು ಹಿಸುಕಿ ಕೃತ್ಯ

ಪತಿ ಕೊಲೆ: ಪತ್ನಿ, ಪ್ರಿಯಕರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಿಯ ಕೊಲೆ ಆರೋಪದ ಮೇಲೆ ವಿದ್ಯಾರಣ್ಯಪುರ ಠಾಣೆಯ ಪೊಲೀಸರು ಗೃಹಿಣಿ ಮತ್ತು ಆಕೆಯ ಪ್ರಿಯಕರನನ್ನು ವಿದ್ಯಾರಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿ

ನ.6ರಂದು ವಿದ್ಯಾರಣ್ಯಪುರದ ವಡೇರಹಳ್ಳಿಯಲ್ಲಿ ರಾಕೇಶ್ ತೋಮಂಗ್ (54) ಕೊಲೆ ನಡೆದಿತ್ತು. ಮೃತನ ಪತ್ನಿ ದೇಬಿತಾಬಾಗ್ (42) ಹಾಗೂ ಆಕೆಯ ಪ್ರಿಯಕರ ಬಾಬುಅಲಿ (30) ಅವರನ್ನು ಬಂಧಿತರು.

'ಪಶ್ಚಿಮ ಬಂಗಾಳದ ರಾಕೇಶ್ ಸೆಕ್ಯೂರಿಟಿ ಗಾರ್ಡ್ ಆಗಿದ್ದರು. ಪತಿಗೆ ಊಟ ಕೊಡಲು ಬರುತ್ತಿದ್ದ ದೇಬಿತಾಬಾಗ್‌ಗೆ ಬಾಬು ಪರಿಚಯವಾಗಿದ್ದು, ಪರಿಚಯ ಪ್ರೇಮಕ್ಕೆ ತಿರುಗಿತ್ತು.

'ಮನೆಯಲ್ಲೇ ಅಡಗಿ ಹೊಂಚು ಹಾಕಿದ್ದ'

'ಮನೆಯಲ್ಲಿ ಎರಡು ಕೋಣೆಗಳಿದ್ದು, ಅನುಪಯುಕ್ತ ವಸ್ತುಗಳಿದ್ದ ಕೋಣೆಯಲ್ಲಿ ಅ.29ರಿಂದ ನ.6ರವರೆಗೂ ಬಾಬು ಅಲಿ ಅಡಗಿ ಕುಳಿತು ಕೊಲೆಗೆ ಪ್ರಯತ್ನಿಸಿದ್ದ. ದೇಬಿತಾಬಾಗ್ ಆತನಿಗೆ ಊಟ ಪೂರೈಸುತ್ತಿದ್ದಳು.'

ಕೊಲೆ ಬಳಿಕ ಪತಿಯ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ಪತ್ನಿ ತನ್ನ ಖಾತೆಗೆ ವರ್ಗಾಯಿಸಿಕೊಂಡಿದ್ದಳು. ಬಳಿಕ ಫೋನ್ ಪೇ ಮೂಲಕ ಬಾಬುಗೂ ಹಣ ಹಾಕಿದ್ದಳು. ಹೊಸ ಸಿಮ್ ಖರೀದಿಸಿ ಪ್ರಿಯಕರನಿಗೆ ನೀಡಿದ್ದಳು.

ಕೃತ್ಯದ ಬಳಿಕ ಹೊಸೂರಿನಲ್ಲಿ ಆರೋಪಿ ತಲೆಮರೆಸಿಕೊಂಡಿದ್ದ. ಮೊಬೈಲ್ ಕರೆ ಹಾಗೂ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಆಧರಿಸಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ರಾಕೇಶ್

ದೇಬಿತಾಬಾಗ್

ಬಾಬುಅಲಿ

ದಂಪತಿಯ ವಯಸ್ಸಿನ ಅಂತರವೂ ಕೊಲೆಗೆ ಕಾರಣವಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಾಕೇಶ್ ಮದ್ಯವ್ಯಸನಿಯಾಗಿದ್ದು ಲೈಂಗಿಕ ಆಸಕ್ತಿ ಕಳೆದುಕೊಂಡಿದ್ದರು. ಇದು, ದಂಪತಿ ನಡುವೆ ವೈಮನಸ್ಯಕ್ಕೆ ಕಾರಣವಾಗಿತ್ತು. ಬಾಬು ಆಗಾಗ್ಗೆ ಮನೆಗೆ ಬರುತ್ತಿದ್ದ. ಅ.29ರಂದು ಕೊಲೆಗೆ ಇಬ್ಬರು ಸಂಚು ರೂಪಿಸಿದ್ದರು. ರಾಕೇಶ್ ನಿದ್ರೆಯ ಮಂಪರಿನಲ್ಲಿದ್ದಾಗ ಇಬ್ಬರು ಸೇರಿ ಕಿತ್ತು ಹಿಸುಕಿ ಕೊಲೆ ಮಾಡಿದ್ದರು. ಬಳಿಕ ಅತಿಯಾಗಿ ಮದ್ಯ ಸೇವಿಸಿ ಎದೆ ಉರಿಯಿಂದ ಪತಿ ಮೃತಪಟ್ಟಿದ್ದಾರೆ ಎಂದು ಪೊಲೀಸರಿಗೆ ತಿಳಿಸಿದ್ದಳು.

ಕತ್ತಿನಲ್ಲಿ ಗಾಯದ ಗುರುತು ಗಮನಿಸಿದ್ದ ಪೊಲೀಸರು ಅನುಮಾನಾಸ್ಪದ ಪ್ರಕರಣ ದಾಖಲಿಸಿಕೊಂಡು ತನಿಖೆ ಚುರುಕುಗೊಳಿಸಿದ್ದರು.

'ಸವಾಲು ಹಾಕಿದ್ದ ಪ್ರಿಯತಮೆ': 'ಅನೈತಿಕ ಸಂಬಂಧದ ಬಗ್ಗೆ ಶಂಕೆ ಇದ್ದ ರಾಕೇಶ್, ಮೂರು ಬಾರಿ ಪತ್ನಿಗೆ ಎಚ್ಚರಿಸಿದ್ದ. ಈ ಮಧ್ಯೆ ಪತಿಯನ್ನು ಕೊಲೆ ಮಾಡು. ಇಲ್ಲದಿದ್ದರೆ ನನ್ನನ್ನು ಬಿಟ್ಟುಬಿಡು ಎಂದು ಬಾಬುವಿಗೆ ದೇವಿತಾ ಸವಾಲು ಹಾಕಿದ್ದಳು' ಎಂದು ಮೂಲಗಳು ತಿಳಿಸಿವೆ.

ರಸ್ತೆಗುಂಡಿಗೆ ಬಿದ್ದ ಯುವಕ: ಸ್ಥಳದಲ್ಲೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿಗೆ ಬಿದ್ದ ಬೈಕ್ ಸವಾರನೊಬ್ಬ ಅಲ್ಲೇ ಕುಳಿತು ಶನಿವಾರ ಪ್ರತಿಭಟನೆ ನಡೆಸಿದರು.

ಹಲಸೂರು ಮೆಟ್ರೊ ನಿಲ್ದಾಣದ ಎದುರಿನ ಗುಂಡಿಯಲ್ಲಿ ಸವಾರ ಬಿದ್ದರು. ರಸ್ತೆ ಗುಂಡಿ ಮುಚ್ಚದ ಬಿಬಿಎಂಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಸ್ಥಳದಲ್ಲೇ ಕುಳಿತು ಪ್ರತಿಭಟಿಸಿದರು. ಇದರಿಂದ ವಾಹನಗಳು ಸಾಲುಗಟ್ಟಿ ನಿಂತು ದಟ್ಟಣೆ ಉಂಟಾಯಿತು.

ಪೊಲೀಸರು ಸ್ಥಳಕ್ಕೆ ಬಂದು ಪ್ರತಿಭಟನೆ ನಡೆಸುತ್ತಿದ್ದ ಯುವಕನ ಮನವೊಲಿಸಲು ಪ್ರಯತ್ನಿಸಿದರು. ಆದರೂ ಜಗ್ಗದೆ ಅವರು ಧರಣಿ ಮುಂದುವರಿಸಿದರು. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕರ್ನಾಟಕ ಕಾಂಗ್ರೆಸ್ ಕೂಡ ಟ್ವಿಟರ್‌ನಲ್ಲಿ ಈ ವಿಡಿಯೊ ಹಂಚಿಕೊಂಡಿದೆ. 'ಬೆಂಗಳೂರಿನ ಹಲಸೂರಿನಲ್ಲಿನ ರಸ್ತೆ ಗುಂಡಿಗೆ ಬಿದ್ದ ಬೈಕ್ ಸವಾರ ಸುಮಾರು ಅರ್ಧ ದಿನ ಬಿದ್ದ ಜಾಗದಲ್ಲೇ ಕುಳಿತು ಪ್ರತಿಭಟಿಸಿದ್ದಾರೆ. ಮೋದಿ ಭೇಟಿಗಾಗಿ ತೇಪೆ ಹಾಕುವ ಸರ್ಕಾರ ಜನ ಸಾಯುತ್ತಿದ್ದರೂ ಗುಂಡಿ ಮುಚ್ಚುವುದಿಲ್ಲವೇಕೆ? ಜನರ ಹಿತ ಬಿಜೆಪಿಗೆ ಬೇಕಿಲ್ಲವೇ?, 'ಮಾನ, ಮರ್ಯಾದೆ, ನಾಚಿಕೆ' ಈ ಮೂರನ್ನೂ ಬಿಟ್ಟಿದೆ' ಎಂದು ಟೀಕಿಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಪೊಲೀಸರು, 'ಆ ಯುವಕ ಗುಂಡಿಗೆ ಬಿದ್ದಿರಲಿಲ್ಲ. ಗುಂಡಿಗಳ ಬಗ್ಗೆ ವಿಡಿಯೊ ಚಿತ್ರಿಸುತ್ತಿದ್ದರು. ಬಳಿಕ ಅಲ್ಲೇ ಕುಳಿತು ಪ್ರತಿಭಟನೆಗೆ ಮುಂದಾದರು. ಮನವೊಲಿಸಿ ವಾಪಸ್ ಕಳುಹಿಸಲಾಯಿತು' ಎಂದು ತಿಳಿಸಿದರು.

ಹಲಸೂರು ಬಳಿ ರಸ್ತೆಯಲ್ಲೇ ಕುಳಿತು ಪ್ರತಿಭಟನೆ ನಡೆಸಿದ ಯುವಕ

ಅಪಘಾತ: ಪಾದಚಾರಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ರಾತ್ರಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಿಣಾಮ ಪಾದಚಾರಿ ಬಾಪಿ ಕುಮಾರ್ (23) ಎಂಬುವವರು ಶುಕ್ರವಾರ ರಾತ್ರಿ ಮೃತಪಟ್ಟಿದ್ದಾರೆ.

ಹೆಬ್ಬಾಳ ಕಡೆಯಿಂದ ಕೆ.ಆರ್.ಪುರದ ಕಡೆಗೆ ತೆರಳುತ್ತಿದ್ದ ನಂಬರ್ ಪ್ಲೇಟ್ ರಹಿತ ವಾಹನ ಕ್ರೋಮಾ ಷೋರೂಂ ಎದುರು ರಸ್ತೆ ದಾಟುತ್ತಿದ್ದ ಕುಮಾರ್‌ಗೆ ಡಿಕ್ಕಿ ಹೊಡೆದಿದೆ. ಇದರಿಂದ ಬೆನ್ನು, ಸೊಂಟ ಹಾಗೂ ಹೊಟ್ಟೆಯ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿತ್ತು. ಸಾರ್ವಜನಿಕರು ಗಾಯಾಳುವನ್ನು 'ನಾರ್ಥ್ ಬೆಂಗಳೂರು ಆಸ್ಪತ್ರೆ'ಗೆ ಚಿಕಿತ್ಸೆಗೆ ದಾಖಲಿಸಿದ್ದು, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ವಾಹನ ಚಾಲಕನ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬುದ್ಧಿಮಾತಿಗೆ ಕೋಪ: ಬಾಲಕ ಆತ್ಮಹತ್ಯೆ

ಬೆಂಗಳೂರು: ಪೋಷಕರು ಬುದ್ಧಿಮಾತು ಹೇಳಿದ್ದಕ್ಕೆ ಸಿಟ್ಟಿಗೆದ್ದ ಬಾಲಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಚೋಳನಾಯಕನಹಳ್ಳಿಯ ಗೋವಿಂದಪ್ಪ ಅವರ ಪುತ್ರ ಸಾಯಿಕುಮಾರ್ (13) ಮೃತ ಬಾಲಕ. ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'7ನೇ ತರಗತಿ ಓದುತ್ತಿದ್ದ ಬಾಲಕ ಮನೆಯಲ್ಲಿ ಹೋಮ್‌ವರ್ಕ್ ಮಾಡಲಾರದ್ದಕ್ಕೆ ಪೋಷಕರು ಬುದ್ಧಿಮಾತು ಹೇಳಿದ್ದರು. ಇದರಿಂದ ಕೋಪಗೊಂಡ ಬಾಲಕ, ಬಟ್ಟೆ ಒಣಗಿಸಲು ಹಾಕಿದ್ದ ಕಂಬಿಗೆ ನೇಣು ಹಾಕಿಕೊಂಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಸಂಜೆಯಾದರೂ ಬಾಲಕ ಮನೆಗೆ ಬಂದಿರಲಿಲ್ಲ. ಆತಂಕಗೊಂಡ ಪೋಷಕರು ಸ್ನೇಹಿತರ ಮನೆ, ಆಟದ ಮೈದಾನ ಸೇರಿ ವಿವಿಧೆಡೆ ಹುಡುಕಾಟ ನಡೆಸಿದ್ದರು. ಪತ್ತೆಯಾಗಿರಲಿಲ್ಲ. ಒಣಗಿಸಲು ಹಾಕಿದ್ದ ಬಟ್ಟೆ ತರಲು ರಾತ್ರಿ ತಾರಸಿಗೆ ಹೋದಾಗ ಕೃತ್ಯ ಗೊತ್ತಾಗಿದೆ' ಎಂದು ತಿಳಿಸಿದ್ದಾರೆ.

ಲೈಂಗಿಕ ಕಿರುಕುಳ: ದೈಹಿಕ ಶಿಕ್ಷಣ ಶಿಕ್ಷಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪದಡಿ ದೈಹಿಕ ಶಿಕ್ಷಣ ಶಿಕ್ಷಕ ಅಂಜನಪ್ಪ (55) ಎಂಬಾತನನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸುಮಾರು 14 ವಿದ್ಯಾರ್ಥಿನಿಯರಿಗೆ ಈತ ಲೈಂಗಿಕ ಕಿರುಕುಳ ನೀಡಿದ್ದು ತನಿಖೆಯಿಂದ ಗೊತ್ತಾಗಿದೆ. ವಿದ್ಯಾರ್ಥಿನಿಯರ ಮಾಹಿತಿ ಆಧರಿಸಿ ಮುಖ್ಯ ಶಿಕ್ಷಕರೇ ದೂರು ನೀಡಿದ್ದರು. ತಿಂಗಳ ಹಿಂದಷ್ಟೇ ಈತ ಶಾಲೆಗೆ ವರ್ಗಾವಣೆಗೊಂಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪೋಕ್ಸೊ ಕಾಯ್ದೆಯಡಿ ಅಡಿ ಪ್ರಕರಣ ದಾಖಲಿಸಿಕೊಂಡು ಶಿಕ್ಷಕನನ್ನು ಬಂಧಿಸಲಾಗಿತ್ತು. ತರಬೇತಿ ನೀಡುವ ನೆಪದಲ್ಲಿ ವಿದ್ಯಾರ್ಥಿನಿಯರ ಜೊತೆಗೆ ಅನುಚಿತವಾಗಿ ವರ್ತಿಸಿ ಕಿರುಕುಳ ನೀಡುತ್ತಿದ್ದ ಎಂದು ವಿದ್ಯಾರ್ಥಿನಿಯರು ಅಳಲು ತೋಡಿಕೊಂಡಿದ್ದರು' ಎಂದು ತಿಳಿಸಿದರು.

ಬಳಗಾವಿ, ಪುಟ್ಟಸ್ವಾಮಿ ಮನೆಗೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕುರುಬ ಸಮುದಾಯವನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿ ನಿವೃತ್ತ ಅಧಿಕಾರಿಗಳಾದ ಟಿ.ಬಿ.ಬಳಗಾವಿ ಹಾಗೂ ಎಸ್. ಪುಟ್ಟಸ್ವಾಮಿ ಅವರ ಮನೆಗಳಿಗೆ ಪ್ರದೇಶ ಕುರುಬರ ಸಂಘದ ನೇತೃತ್ವದಲ್ಲಿ ಸಮುದಾಯದ ಮುಖಂಡರು ಹಾಗೂ ಸದಸ್ಯರು ಶನಿವಾರ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಕೆ.ಎಸ್. ಈಶ್ವರಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು ಹಾಗೂ ರಘುನಾಥರಾವ್ ಮಲ್ಕಾಪೂರೆ ಅವರನ್ನು ಸಭಾಪತಿ ಹುದ್ದೆಯಲ್ಲೇ ಮುಂದುವರಿಸಬೇಕು ಎಂದು ಆಗ್ರಹಿಸಿ ಬಳಗಾವಿ, ಪುಟ್ಟಸ್ವಾಮಿ ಮತ್ತು ಕೆ. ಮುಕುಡಪ್ಪ ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿದ್ದರು.

ಆಗ, ಸಿದ್ದರಾಮಯ್ಯ, ಸ್ವಾಮೀಜಿ ಹಾಗೂ ಕುರುಬ ಸಮುದಾಯಕ್ಕೆ ಅವಮಾನ ಉಂಟುಮಾಡುವ ರೀತಿಯಲ್ಲಿ ಅಶ್ಲೀಲವಾಗಿ ಮಾತನಾಡಿರುವ ವಿಡಿಯೊ ಬಹಿರಂಗವಾಗಿತ್ತು. ಅದನ್ನು ವಿರೋಧಿಸಿ ಪ್ರತಿಭಟನೆ ನಡೆದಿದೆ.

ಬಸವೇಶ್ವರನಗರದ ಕೆಎಚ್‌ಬಿ ಕಾಲೊನಿಯಲ್ಲಿರುವ ಬಳಗಾವಿ ಮನೆ ಹಾಗೂ ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಪುಟ್ಟಸ್ವಾಮಿ ಮನೆಗೆ ಮುತ್ತಿಗೆ ಹಾಕಿದ ಪ್ರತಿಭಟನಕಾರರು, ಆಕ್ರೋಶ ವ್ಯಕ್ತಪಡಿಸಿದರು.

ಪ್ರದೇಶ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ವೆಂಕಟೇಶಮೂರ್ತಿ ಸೇರಿದಂತೆ ಹಲವು ಮುಖಂಡರು ಪ್ರತಿ ಭಟನೆಯ ನೇತೃತ್ವ ವಹಿಸಿದ್ದರು. ಸಮುದಾಯವನ್ನು ಅವಮಾನಿಸಿರುವ ಇಬ್ಬರೂ ತಕ್ಷಣವೇ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಕೆಲಕಾಲ ಪ್ರತಿಭಟನೆ ನಡೆಸಿದ ಬಳಿಕ ಎಲ್ಲರನ್ನೂ ವಶಕ್ಕೆ ಪಡೆದ ಪೊಲೀಸರು, ಬೇರೆಡೆ ಕರೆದೊಯ್ದರು.

ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಎಲಿವೇಟೆಡ್ ಫ್ಲೈಓವರ್ ರಸ್ತೆಯಲ್ಲಿ ಶನಿವಾರ ಟೆಂಪೊ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಕೆ.ಎಸ್.ಪ್ರಕಾಶ್ (56) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಬೈಕ್ ಹಿಂದಿಕ್ಕುವಾಗ ಟೆಂಪೊ ಬೈಕ್‌ನ ಕನ್ನಡಿ, ಹ್ಯಾಂಡಲ್‌ಗೆ ತಗುಲಿದೆ. ಕೆಳಗೆ ಬಿದ್ದ ಸವಾರನ ತಲೆಗೆ ಪೆಟ್ಟುಬಿದ್ದು ಸ್ಥಳದಲ್ಲೇ ಮೃತಪಟ್ಟರು. ಟೆಂಪೊ ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರವೀಣ್ ನೆಟ್ಟಾರು ಹತ್ಯೆ: ಮತ್ತೊಬ್ಬ ವಶಕ್ಕೆ?

ಪ್ರಜಾವಾಣಿ ವಾರ್ತೆ

ಸುಳ್ಯ: ಬಿಜೆಪಿ ಯುವ ಮೋರ್ಚಾ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಣಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಸಂಬಂಧ ಮತ್ತೊಬ್ಬ ಆರೋಪಿಯನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಶನಿವಾರ ವಶಕ್ಕೆ ಪಡೆದು ವಿಚಾರಣೆ ನಡೆಸಿದೆ.

ಎನ್‌ಐಎ ತಂಡವು ಈ ಪ್ರಕರಣ ಸಂಬಂಧ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗಷ್ಟೇ ಮೂವರು ಆರೋಪಿಗಳನ್ನು ಬಂಧಿಸಿತ್ತು. ಶನಿವಾರ ವಶಕ್ಕೆ ಪಡೆದಿರುವ ವ್ಯಕ್ತಿ ಈ ಪ್ರಕರಣದಲ್ಲಿ ಇತ್ತೀಚೆಗೆ ಬಂಧನಕ್ಕೊಳಗಾದ ಆರೋಪಿಯೊಬ್ಬರ ಹತ್ತಿರದ ಸಂಬಂಧಿ ಎಂದು ಮೂಲಗಳು ತಿಳಿಸಿವೆ.

ಪ್ರವೀಣ್ ನೆಟ್ಟಾರು ಅವರನ್ನು ಜು.26ರಂದು ರಾತ್ರಿ ಬೆಳ್ಳಾರೆಯಲ್ಲಿ ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಪ್ರಕರಣದ ತನಿಖೆಯನ್ನು ಬೆಳ್ಳಾರೆ ಪೊಲೀಸರು ಆರಂಭಿಸಿದ್ದರು. ಬಳಿಕ ತನಿಖೆಯನ್ನು ಎನ್‌ಐಎಗೆ ವಹಿಸಲಾಗಿತ್ತು. ಪ್ರಕರಣ ಸಂಬಂಧ ಇದುವರೆಗೆ 13 ಮಂದಿಯನ್ನು ಬಂಧಿಸಲಾಗಿದೆ.

ಪ್ರಗತಿಯ ಪ್ರತಿಮೆ ಅನಾವರಣ ಕೆಲಸಕ್ಕೆ ₹ 500 ನೀಡುವ ಭರವಸೆ ನೀಡಿದ್ದ ಮುಖಂಡರು

ಕೂಲಿ ನೀಡದ ಬಿಜೆಪಿಗರ ವಿರುದ್ಧ ಕಾರ್ಮಿಕರ ಕಿಡಿ

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ: ಬೆಂಗಳೂರಿನಲ್ಲಿ ಶುಕ್ರವಾರ ನಡೆದ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಕೆಲಸ ಮಾಡಿದ ಕೂಲಿ ಕಾರ್ಮಿಕರಿಗೆ ಕೂಲಿ ಮತ್ತು ಊಟ ಕೊಡಿಸಿಲ್ಲ ಎಂಬ ಆರೋಪ ಕೇಳಿ ಬಂದಿದೆ.

ಬಿಜೆಪಿ ಮುಖಂಡರು ಸ್ಥಳೀಯ 40 ಕೂಲಿ ಕಾರ್ಮಿಕರನ್ನು ಕಾರ್ಯಕ್ರಮಕ್ಕೆ ಕರೆದೊಯ್ದಿದ್ದರು. ವಾಪಸ್ ಬರುವಾಗ ₹500 ನೀಡುವುದಾಗಿ ಭರವಸೆ ನೀಡಿದ್ದರು. ಇನ್ನೂ ಹಣ ನೀಡಿಲ್ಲ. ಕಾರ್ಯಕ್ರಮದಲ್ಲಿ ಕನಿಷ್ಠ ನೀರು, ಊಟವನ್ನು ಕೊಡಲಿಲ್ಲ ಎಂದು ಕಾರ್ಮಿಕರು ದೂರಿದ್ದಾರೆ.

40 ಕ್ಕೂ ಹೆಚ್ಚು ಕಾರ್ಮಿಕರು ಶನಿವಾರ ಬೆಳಿಗ್ಗೆ ಇಲ್ಲಿನ ಬಿಜೆಪಿ ಮುಖಂಡರೊಬ್ಬರ ಮನೆ ಬಾಗಿಲು ತಟ್ಟಿದ್ದಾರೆ. ಇದರಿಂದ ಆಕ್ರೋಶಗೊಂಡ ಆ ಮುಖಂಡ ಅದು ಸರ್ಕಾರಿ ಕಾರ್ಯಕ್ರಮ. ಅಲ್ಲಿ ಯಾರಿಗೂ ಹಣ ಕೊಟ್ಟಿಲ್ಲ. ಹಣ ಕೇಳಿದರೆ ಪೊಲೀಸರಿಗೆ ಪ್ರಕರಣ ದಾಖಲಿಸುತ್ತೇನೆ ಎಂದು ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ.

ಕಾರ್ಯಕ್ರಮಕ್ಕೆ ತೆರಳಿದ್ದ ಕೂಲಿ ಕಾರ್ಮಿಕರು ತಮ್ಮನ್ನು ಕರೆದೊಯ್ದು ಹಣ ನೀಡದ ಬಿಜೆಪಿ ಮುಖಂಡರ ವಿರುದ್ಧ ದೂರು ನೀಡಲು ಶಿಡ್ಲಘಟ್ಟ ನಗರ ಠಾಣೆಯ ಎದುರು ಜಮಾಯಿಸಿದ್ದರು

ಕೂಲಿ ಕಾರ್ಮಿಕರು ಶಿಡ್ಲಘಟ್ಟ ನಗರ ಠಾಣೆಯಲ್ಲಿ ದೂರು ದಾಖಲಿಸಲು ಮುಂದಾಗಿದ್ದಾರೆ. ಯಾರ ವಿರುದ್ಧ ಏನೆಂದು ದೂರು ಕೊಡಬೇಕು ಎಂದು ತಿಳಿಯದೆ ಅಲ್ಲೇ ಅರ್ಧ ಗಂಟೆಗೂ ಹೆಚ್ಚು ಕಾಲ ನಿಂತಿದ್ದರು. ಪೊಲೀಸರೂ ಸಹ ಅವರನ್ನು ವಾಪಸು ಕಳುಹಿಸಿದ್ದಾರೆ.

ಕಾರ್ಮಿಕರು ತಮಗೆ ತಿಳಿದಿರುವ ಬಿಜೆಪಿ ಮುಖಂಡರ ಮನೆ ಬಾಗಿಲು ಬಡಿಯತೊಡಗಿದ್ದಾರೆ. ಇದು ಬಿಜೆಪಿ ಮುಖಂಡರಿಗೆ ಇರಿಸು ಮುರುಸಿಗೆ ಕಾರಣವಾಗಿದೆ. ಜತೆಗೆ ಮೋದಿ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕರೆದೊಯ್ಯುವ ವ್ಯವಸ್ಥೆಯ ಹೊಣೆ ಹೊತ್ತಿದ್ದವರ ನಡುವೆ ಆರೋಪ ಪ್ರತ್ಯಾರೋಪಕ್ಕೂ ಕಾರಣವಾಗಿದೆ. ಕೊನೆಗೂ ತಲಾ ₹ 200 ನೀಡಲಾಗಿದೆ ಎಂದು ತಿಳಿದುಬಂದಿದೆ.

ನಗರದ ಬ್ರಿಗೇಡ್ ರಸ್ತೆಯಲ್ಲಿ ಶನಿವಾರ ತುಂತುರು ಮಳೆಯಲ್ಲಿ ಕೊಡೆ ಹಿಡಿದು ಸಾಗಿದ ಜನರು

ಜಿಟಿ ಜಿಟಿ ಮಳೆ ನಡುವೆ ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟೇಕ್‌ಆಫ್ ಆದ ವಿಮಾನ –ಪ್ರಜಾವಾಣಿ ಚಿತ್ರಗಳು

ನಗರದಲ್ಲಿ ಇನ್ನೂ ಮೂರು ದಿನ ಮಳೆ ಸಾಧ್ಯತೆ, ಚಳಿಯ ವಾತಾವರಣ

ದಿನವಿಡೀ ಸುರಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಶನಿವಾರ ದಿನವಿಡೀ ಜಿಟಿ ಜಿಟಿ ಮಳೆ ಸುರಿಯಿತು. ರಾತ್ರಿ ಮಳೆಯು ತುಸು ಬಿರುಸು ಪಡೆಯಿತು.

ವಾಯುಭಾರ ಕುಸಿತದ ಪರಿಣಾಮ ನಗರದಲ್ಲಿ ಚಳಿಯ ವಾತಾವರಣ ಇತ್ತು. ಉಷ್ಣಾಂಶ ಕುಸಿದಿದ್ದರಿಂದ ಮೈಕೊರೆಯುವ ಚಳಿಯ ಅನುಭವ ಉಂಟಾಯಿತು.

ಶುಕ್ರವಾರ ರಾತ್ರಿಯಿಂದಲೇ ಜಿಟಿಜಿಟಿ ಮಳೆ ಸುರಿಯಲು ಆರಂಭವಾಗಿತ್ತು. ಅದು ಶನಿವಾರ ದಿನವಿಡೀ ಮುಂದುವರಿದಿತ್ತು. ವಾರಾಂತ್ಯವಾದ ಶನಿವಾರವೂ ನಗರದ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ಜನರ ಓಡಾಟ ಕಡಿಮೆಯಿತ್ತು. ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾದ ಪರಿಣಾಮ ತಮಿಳುನಾಡು ಮತ್ತು ಪುದುಚೇರಿಯಲ್ಲಿ ಮಳೆಯಾಗುತ್ತಿದೆ. ಅದರ ಪರಿಣಾಮ ನಗರಕ್ಕೂ ತಟ್ಟಿದೆ. ನಗರದಲ್ಲಿ ಇನ್ನೂ ಮೂರು ದಿನ ಇದೇ ರೀತಿಯ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ರಾಜಧಾನಿಯಲ್ಲಿ ಶನಿವಾರ ಗರಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಭಾನುವಾರ ಗರಿಷ್ಠ ಉಷ್ಣಾಂಶ 24 ಡಿಗ್ರಿ ಹಾಗೂ ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮಲ್ಲೇಶ್ವರ, ಬ್ಯಾಟರಾಯನಪುರ, ಪೀಣ್ಯ ಕೈಗಾರಿಕಾ ವಲಯ, ಜಾಲಹಳ್ಳಿ, ಯಲಹಂಕ, ಕೆಂಗೇರಿ, ಕೆಂಗೇರಿ ಉಪನಗರ, ರಾಜಾಜಿನಗರ, ಹೆಬ್ಬಾಳ, ಸದಾಶಿವನಗರ, ವಿಜಯನಗರ, ರಾಜರಾಜೇಶ್ವರಿ ನಗರ, ಟಿ.ದಾಸರಹಳ್ಳಿ, ಸುಂಕದಕಟ್ಟೆ, ಯಶವಂತಪುರ, ಹೆಗ್ಗನಹಳ್ಳಿ, ಹೆಬ್ಬಾಳ, ರಾಜಗೋಪಾಲನಗರ, ಶ್ರೀರಾಮಪುರ, ಸುಬ್ರಹ್ಮಣ್ಯನಗರ, ಚಂದ್ರಲೇಔಟ್, ಕಲಾಸಿಪಾಳ್ಯ, ಚಾಮರಾಜಪೇಟೆ, ಉಪ್ಪಾರಪೇಟೆ, ಜೆ.ಜೆ.ನಗರ, ಮಾಗಡಿ ರಸ್ತೆ, ವಿಜಯನಗರ... ಹೀಗೆ ನಗರದ ಎಲ್ಲೆಡೆ ಜಿಟಿಜಿಟಿ ಮಳೆ ಸುರಿಯಿತು. ಎಲ್ಲೆಡೆಯೂ ಗಾಳಿ ಬೀಸುತ್ತಿದ್ದುದರಿಂದ ಚಳಿಯ ವಾತಾವರಣ ಇತ್ತು. ಜನರು ಸ್ವೆಟರ್ ಹಾಗೂ ಟೋಪಿ ಧರಿಸಿ ಸಂಚರಿಸಿದರು. ಮಳೆಯಿಂದ ರಕ್ಷಣೆ ಪಡೆಯಲು ಕೊಡೆ ಹಿಡಿದು ಸಾಗಿದರು.

ಎಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸಲು ಕಲಾಕೃತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಉತ್ತೇಜಿಸಲು ನಗರದ ಚರ್ಚ್‌ಸ್ಟ್ರೀಟ್‌ನಲ್ಲಿ ಚಿತ್ತಾಕರ್ಷಕ ಕಲಾಕೃತಿಯೊಂದನ್ನು ರೂಪಿಸಲಾಗಿದೆ.

ಗುಜರಿ ಸಾಮಗ್ರಿಗಳಿಗೆ ಹೊಳಪು ನೀಡಿ ಎಲೆಕ್ಟ್ರಿಕ್ ವಾಹನದ ಪ್ರತಿಕೃತಿ ನಿರ್ಮಿಸಲಾಗಿದೆ. ಇದು ಸೌರಶಕ್ತಿಯ ನೆರವಿನಿಂದ ಕಾರ್ಯ ನಿರ್ವಹಿಸುತ್ತದೆ. ಇದು ಎಲೆಕ್ಟ್ರಿಕ್ ವಾಹನಗಳ ಬಳಕೆಯತ್ತ ದೇಶ ದಾಪುಗಾಲಿಡುತ್ತಿರುವ ಕುರುಹು ಆಗಿದೆ.

ಬೆಂಗಳೂರು ಮೂವಿಂಗ್ ಹೆಸರಿನ ಸಂಸ್ಥೆಯೊಂದರ 'ಇ.ವಿ ಮೈ ಡೆಲಿವರಿ' ಅಭಿಯಾನದ ಭಾಗವಾಗಿ ಈ ಎಲೆಕ್ಟ್ರಿಕಲ್ ತ್ರಿಚಕ್ರ ವಾಹನದ ಮಾದರಿ ಕಲೆ ಮತ್ತು ವಿಜ್ಞಾನದ ಸಂಗಮದಂತಿದೆ. ಸರಕು ಸಾಗಾಣಿಕೆಯಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆಯ ಅಗತ್ಯತೆಯನ್ನು ಇದು ಪ್ರತಿಬಿಂಬಿಸುತ್ತದೆ.

ಚರ್ಚ್‌ಸ್ಟ್ರೀಟ್ ಮೆಟ್ರೊ ರೈಲು ನಿಲ್ದಾಣದ ಪ್ರವೇಶದ್ವಾರದಲ್ಲಿರುವ ಈ ಪ್ರತಿಕೃತಿ ಇದೇ ಭಾನುವಾರದವರೆಗೆ ವೀಕ್ಷಣೆಗೆ ಲಭ್ಯವಿರಲಿದೆ. ನಗರ ಭೂಸಾರಿಗೆ ನಿರ್ದೇಶನಾಲಯ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮದ ಸಹಯೋಗದಲ್ಲಿ ಇದನ್ನು ಸ್ಥಾಪಿಸಲಾಗಿದೆ.

ಪ್ರತಿಕೃತಿಯನ್ನು ಅನಾವರಣ ಮಾಡಿ ಮಾತನಾಡಿದ ಕರ್ನಾಟಕ ನಗರ ಭೂಸಾರಿಗೆ ನಿರ್ದೇಶನಾಲಯದ ಆಯುಕ್ತರಾದ ವಿ. ಮಂಜುಳಾ ಅವರು 'ಎಲೆಕ್ಟ್ರಿಕಲ್ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳನ್ನು ಸರಕು ಪೂರೈಕೆಯಲ್ಲಿ ಬಳಸಿದರೆ ಬಹುದೊಡ್ಡ ಪ್ರಮಾಣದಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಬಹುದು. ಕರ್ನಾಟಕದಲ್ಲಿ ಸುಸ್ಥಿರ ಸಾರಿಗೆಗೆ ನಗರ ಭೂಸಾರಿಗೆ ನಿರ್ದೇಶನಾಲಯ ಒತ್ತು ನೀಡುತ್ತಿದೆ' ಎಂದರು.

ಮುಂಬೈ ಮೂಲದ ವರ್ಕ್‌ಶಾಪ್ ಕ್ಯೂ ಕಲಾವಿದರಾದ ರಾಧಿಕಾ, ಮಾಧವಿ, ಬೆಂಗಳೂರಿನ ರಾಹುಲ್ ಕೆಪಿ ಒಗ್ಗೂಡಿ ಇದನ್ನು ನಿರ್ಮಿಸಿದ್ದಾರೆ.

ನಗರದ ಚರ್ಚ್‌ಸ್ಟ್ರೀಟ್‌ನಲ್ಲಿ ಪ್ರದರ್ಶಿಸಲಾದ ಎಲೆಕ್ಟ್ರಿಕಲ್ ತ್ರಿಚಕ್ರ ವಾಹನವನ್ನು ಯುವತಿಯರು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

'ಮೋಪ್ಲಾ ದಂಗೆ ಹಿಂದೂಗಳ ಭೀಕರ ಹತ್ಯಾಕಾಂಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದೆಡೆ ಸ್ವಾತಂತ್ರ್ಯ ಹೋರಾಟ, ಮತ್ತೊಂದೆಡೆ ಜಾತೀಯ ದಂಗೆ ಎಂದು ಬಿಂಬಿತವಾಗಿರುವ ಮಲಬಾರಿನ 'ಮೋಪ್ಲಾ (ಮಾಪಿಳ್ಳೆ) ದಂಗೆ' ಹಿಂದೂಗಳ ಭೀಕರ ಹತ್ಯಾಕಾಂಡ' ಎಂದು ಲೇಖಕ, ಅಂಕಣಕಾರ ಸಂದೀಪ್ ಬಾಲಕೃಷ್ಣ ಅಭಿಪ್ರಾಯಪಟ್ಟರು.

ರಾಷ್ಟ್ರೋತ್ಥಾನ ಸಾಹಿತ್ಯದ 'ಕನ್ನಡ ಪುಸ್ತಕ ಹಬ್ಬ'ದ ಅಂಗವಾಗಿ ಕೇಶವಶಿಲ್ಪ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ವಾರಾಂತ್ಯದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಮೋಪ್ಲಾ' ನೂರು, ಸಮಸ್ಯೆಗಳು ಸಾವಿರ' ವಿಷಯವಾಗಿ ಅವರು ಮಾತನಾಡಿದರು.

'ದೇಶದ ಸ್ವಾತಂತ್ರ್ಯ ಸಂಗ್ರಾಮದ ನಿಜವಾದ ಇತಿಹಾಸವನ್ನು ತಿರುವು-ಮುರುವುಗೊಳಿಸಿದ ಕಾಂಗ್ರೆಸ್ ಮತ್ತು ಎಡಪಂಥೀಯ ನಾಯಕರ ಕಾರ್ಯಸೂಚಿಯಿಂದಾಗಿ ಈ ಪ್ರಮುಖ ದಂಗೆ ತೆರೆಮರೆಗೆ ಸರಿದಿದೆ' ಎಂದರು.

'ಮಾಲೆಗಾಂವ್ ಮತ್ತು ಬಾರಾಬಂಕಿಯಲ್ಲಿ ಹಿಂದೂ ಹತ್ಯಾಕಾಂಡದ ಮುಂದುವರಿಕೆಯಾಗಿ ಮಲಬಾರಿನಲ್ಲಿ ಯಾವ ಪ್ರಚೋದನೆಯೂ ಇಲ್ಲದೇ ದಂಗೆ ಎದ್ದ ಮುಸ್ಲಿಂ ಸಮುದಾಯ, ಮಲಬಾರಿನಾದ್ಯಂತ ಎಸಗಿದ ಕ್ರೌರ್ಯವನ್ನು ಸ್ವಾತಂತ್ರ್ಯಾನಂತರದ ಎಡರಂಗದ ಆಡಳಿತ ಇತಿಹಾಸದ ಪುಟಗಳಿಂದ ಸಂಪೂರ್ಣ ತೆಗೆದುಹಾಕಿದೆ. ಅಲ್ಲದೆ, ಸುಳ್ಳು ಇತಿಹಾಸ ಸೃಷ್ಟಿಸಿ, ಅಪಚಾರ ಎಸಗಿತು' ಎಂದು ವಿಶ್ಲೇಷಿಸಿದರು.

'ವ್ಯಭಿಚಾರ, ಮತಾಂತರ, ಕೊಲೆಗಡುಕ ಇತಿಹಾಸವನ್ನು ಎಷ್ಟು ಮರೆಮಾಚಿದರೂ ಒಂದಿಲ್ಲೊಂದು ದಿನ ವಾಸ್ತವ ಬಹಿರಂಗವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಜ್ಞಾವಂತ ನಾಗರಿಕ ಸಮಾಜ ಈಗ ಕಣ್ಣು ತೆರೆದಿದೆ' ಎಂದೂ ಅವರು ಹೇಳಿದರು.

ರಾಷ್ಟ್ರೋತ್ಥಾನ ಪ್ರಸರಣ ವಿಭಾಗದ ಮುಖ್ಯಸ್ಥ ಪಾಂಡುರಂಗ ಪ್ರಭು, ಲೇಖಕ ಚೈತನ್ಯ ಮಜಲಕೋಡಿ, ರಾಷ್ಟ್ರೋತ್ಥಾನ ಸಾಹಿತ್ಯದ ವಿಶ್ವೇಶ್ವರ ಭಟ್ ಇದ್ದರು.

ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ರಾಷ್ಟ್ರೋತ್ಥಾನ ಸಾಹಿತ್ಯ ಹಮ್ಮಿಕೊಂಡಿರುವ ಈ ಕನ್ನಡ ಪುಸ್ತಕ ಹಬ್ಬ ನ. 27ರವರೆಗೆ ನಡೆಯಲಿದೆ. ಹಬ್ಬದಲ್ಲಿ ಪುಸ್ತಕ ಪುದರ್ಶನ ಮತ್ತು ಮಾರಾಟ, ಪುಸ್ತಕ ಬಿಡುಗಡೆ, ವಿಶೇಷ ಉಪನ್ಯಾಸ ಸಂವಾದ ನಡೆಯಲಿದೆ. ರಾಷ್ಟ್ರೋತ್ಥಾನ ಸಾಹಿತ್ಯದ ಮಾತ್ರವಲ್ಲದೆ ಇತರ ಸಾಹಿತ್ಯಗಳೂ ಇಲ್ಲಿ ಲಭ್ಯವಿದ್ದು, ಶೇ 50ರವರೆಗೂ ರಿಯಾಯಿತಿ ನೀಡಲಾಗಿದೆ.

ಶೇ 10ರ ಮೀಸಲು ಜಾರಿಗೆ ವಿಪ್ರತ್ರಯೀ ಪರಿಷತ್ ಆಗ್ರಹ

ಬೆಂಗಳೂರು: 'ಆರ್ಥಿಕವಾಗಿ ಹಿಂದುಳಿದವರಿಗೆ ನೀಡುತ್ತಿರುವ ಶೇ 10 ಮೀಸಲಾತಿಯನ್ನು ಕರ್ನಾಟಕದಲ್ಲೂ ತ್ವರಿತವಾಗಿ ಜಾರಿಗೊಳಿಸಬೇಕು. ಆದಾಯದ ಜತೆಗೆ, ಜಾತಿ ಪ್ರಮಾಣ ಪತ್ರವನ್ನೂ ನೀಡಬೇಕು' ಎಂದು ವಿಶ್ವ ವಿಪ್ರತ್ರಯೀ ಪರಿಷತ್ ಮುಖಂಡರು ಆಗ್ರಹಿಸಿದರು.

ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ನೀಡಿದ್ದ ಮೀಸಲಾತಿಯನ್ನು ಕೆಲವರು ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಸರ್ಕಾರದ ನಿರ್ಧಾರವನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಹಾಗಾಗಿ, ಇದನ್ನು ತಕ್ಷಣ ಅನುಷ್ಠಾನಗೊಳಿಸಬೇಕು. ಕಂದಾಯ ಇಲಾಖೆ ಆದಾಯ ಪ್ರಮಾಣಪತ್ರ ನೀಡುತ್ತಿದೆ. ಆದರೆ, ಬ್ರಾಹ್ಮಣ ಸಮುದಾಯಕ್ಕೆ ಅಧಿಕೃತವಾಗಿ ಜಾತಿ ಪ್ರಮಾಣಪತ್ರ ನೀಡುತ್ತಿಲ್ಲ. ಸರ್ಕಾರ ಈ ಬಗ್ಗೆ ಸೂಚನೆ ನೀಡಬೇಕು ಎಂದು ವಿಶ್ವ ವಿಪ್ರತ್ರಯೀ ಪರಿಷತ್ ಅಧ್ಯಕ್ಷ ಎಸ್.ರಘುನಾಥ್, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದ ಮೂರ್ತಿ, ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು. ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಸಾಕಷ್ಟು ಕ್ರಿಯಾಶೀಲ ಕೆಲಸ ಮಾಡುತ್ತಿದೆ. ಆದರೆ, ಅನುದಾನದ ಕೊರತೆ ಕಾರಣದಿಂದ ಎಲ್ಲ ಯೋಜನೆಗಳನ್ನು ಜಾರಿ ಮಾಡಲು ತೊಂದರೆಯಾಗಿದೆ. ಮಂಡಳಿಗೆ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು ಎಂದು ಸರ್ಕಾರವನ್ನು ಕೋರಿದರು.

ಬ್ರಾಹ್ಮಣ ಸಮುದಾಯದ 42 ಉಪ ಪಂಗಡಗಳನ್ನು ಒಗ್ಗೂಡಿಸಲು ವಿಶ್ವ ವಿಪ್ರತ್ರಯೀ ಪರಿಷತ್ ಅಸ್ತಿತ್ವಕ್ಕೆ ತರಲಾಗಿದೆ. ಸಿರಿನಾಡು ಮಹಾಸಭಾ, ಉಲುಚಿ ಕಮ್ಮೆ ಮಹಾಸಭಾ, ಬಬ್ಬೂರು ಕಮ್ಮೆ ಸೇವಾ ಸಮಿತಿ, ಬಡಗನಾಡು ಮಹಾಸಭಾ, ಮುಲಕನಾಡು ಮಹಾಸಭಾ, ಕೂಟ ಮಹಾ ಪರಿಷತ್ತು, ಮಾಧ್ವ ಸಂಘ, ಶ್ರೀವೈಷ್ಣವ ಸಂಘ ಸೇರಿದಂತೆ ಎಲ್ಲ ಸಂಘಟನೆಗಳ ಒಕ್ಕೂಟವಾಗಿ ಪರಿಷತ್ ಕೆಲಸ ಮಾಡುತ್ತಿದೆ. ಶೃಂಗೇರಿ ಜಗದ್ಗುರುಗಳ ನೇತೃತ್ವದಲ್ಲಿ 53 ದಿನಗಳು ವಿವಿಧ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದೆ ಎಂದು ವಿವರಿಸಿದರು. ಪರಿಷತ್ ಪ್ರಮುಖರಾದ ಎಸ್.ಸುದರ್ಶನ್, ಎ.ವಿ.ಪ್ರಸನ್ನ, ನಾಗೇಶ್, ಬಿ.ವಿ.ಕುಮಾರ್, ಬಿ.ವಿ.ರವಿಶಂಕರ್, ನಾಗೇಂದ್ರ, ಪ್ರಕಾಶ್ ಅಯ್ಯಂಗಾರ್, ದಿಲೀಪ್ ಸತ್ಯ, ವಿ.ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಪ್ರೆಸ್ಟೀಜ್ ಇಂಟರ್‌ನ್ಯಾಷನಲ್ ಶಾಲೆ: ಮಕ್ಕಳಿಗೆ ಪ್ರಶಸ್ತಿ ವಿತರಣೆ

'ಕ್ರೀಡಾ ಚಟುವಟಿಕೆಗಳ ಆಸಕ್ತಿ ಮೂಡಿಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಪೋಷಕರು ಮಕ್ಕಳಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ಕ್ರೀಡಾ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಿಸಬೇಕು' ಎಂದು ಕ್ರಿಕೆಟಿಗ ರಿತೇಶ್ ಭಟ್ಕಳ್ ಹೇಳಿದರು.

ಕೆ.ಆರ್.ಪುರ ಸಮೀಪದ ರಾಂಪುರ ಗ್ರಾಮದ ಪ್ರೆಸ್ಟೀಜ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ 'ಸ್ಪೋರ್ಟ್ಸ್ ಒ ಮೇನಿಯ' ಎಂಟನೇ ವರ್ಷದ ಅಂಗವಾಗಿ ಹಮ್ಮಿಕೊಂಡಿದ್ದ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡ ಮಕ್ಕಳಿಗೆ ಪ್ರಶಸ್ತಿ ವಿತರಿಸಿ ಮಾತನಾಡಿದರು.

'ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಕ್ರೀಡೆ ಹೆಚ್ಚು ಪೂರಕವಾಗಿದ್ದು, ಸದೃಢ ಆರೋಗ್ಯಕ್ಕೆ ಹೆಚ್ಚು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಹೆಚ್ಚಾಗಿ ತೊಡಗಿಕೊಂಡಾಗ ಆರೋಗ್ಯದ ಜೊತೆಗೆ ಮಾನಸಿಕವಾಗಿ ನೆಮ್ಮದಿ ಸಾಧಿಸಬಹುದು' ಎಂದು ಹೇಳಿದರು.

ಪ್ರೆಸ್ಟೀಜ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ.ಅಂಜಿನಪ್ಪ, 'ಶಿಕ್ಷಕರು ಮತ್ತು ಪೋಷಕರ ಸಹಕಾರದಿಂದ ಮಕ್ಕಳಲ್ಲಿ ಕ್ರೀಡೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಲಾಗಿದೆ. ಕ್ರಿಕೆಟ್ ಸ್ವಿಮಿಂಗ್ ಮತ್ತು ಸ್ಕೇಟಿಂಗ್ ನಂತಹ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು' ಎಂದರು.

ಶಾಲೆಯ ನಿರ್ದೇಶಕಿ ರಮಾದೇವಿ, ನಿರ್ದೇಶಕ ಪ್ರಶಾಂತ್ ಆನಂದ್, ಲಾಸ್ಯ ಸೌಜನ್ಯ, ಪ್ರಾಂಶುಪಾಲ ಪಿ.ಮಂಗಲ್ ರಾಜ್ ಇದ್ದರು.

ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡ ಮಕ್ಕಳಿಗೆ ಕ್ರಿಕೆಟಿಗ ರಿತೇಶ್ ಭಟ್ಕಳ ಪ್ರಶಸ್ತಿ ವಿತರಿಸಿದರು. ಪ್ರೆಸ್ಟೀಜ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ. ಆಂಜಿನಪ್ಪ, ಶಾಲೆಯ ನಿರ್ದೇಶಕಿ ರಮಾದೇವಿ, ನಿರ್ದೇಶಕ ಪ್ರಶಾಂತ್ ಆನಂದ್, ಲಾಸ್ಯ ಸೌಜನ್ಯ, ಪ್ರಾಂಶುಪಾಲ ಪಿ.ಮಂಗಲ್ ರಾಜ್ ಇದ್ದರು

ಮೆರವಣಿಗೆ

ಕೊಪ್ಪಳದಲ್ಲಿ ಶನಿವಾರ ಮುಸ್ಲಿಂ ಯುವ ಸಮಿತಿ ಹಮ್ಮಿಕೊಂಡಿದ್ದ ಭಾರತದ ಸ್ವಾತಂತ್ರ್ಯ ಹೋರಾಟಗಾರರ ಜಯಂತಿ ಕಾರ್ಯಕ್ರಮದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಸಹಸ್ರಾರು ಜನ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ವೀರಶೈವ ಲಿಂಗಾಯತ ಮಹಾಸಭಾದ ಬೆಂಗಳೂರು ವಿಭಾಗ ಮಟ್ಟದ ಸಮಾವೇಶ

‘ಒಳಪಂಗಡ ಹೆಸರಲ್ಲಿ ಭೇದ ಬೇಡ’

ಪ್ರಜಾವಾಣಿ ವಾರ್ತೆ

ತುಮಕೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಮ್ಮಿಕೊಂಡಿರುವ ಬೆಂಗಳೂರು ವಿಭಾಗ ಮಟ್ಟದ ಸಮಾವೇಶಕ್ಕೆ ನಗರದ ಸಿದ್ಧಗಂಗಾ ಮಠದ ಆವರಣದಲ್ಲಿ ಶನಿವಾರ ಚಾಲನೆ ನೀಡಲಾಯಿತು.

ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಮೀಸಲಾತಿಗೆ ಬೇಡಿಕೆ ಸಲ್ಲಿಸುವ ಮತ್ತು ಸಮುದಾಯ ಒಗ್ಗೂಡುವಿಕೆ ಬಗ್ಗೆ ಪ್ರಮುಖವಾಗಿ ಚರ್ಚಿಸಲಾಯಿತು. ಎರಡು ದಿನದ ಸಮಾವೇಶಕ್ಕೆ ಭಾನುವಾರ ತೆರೆ ಬೀಳಲಿದೆ.

ಬೆಂಗಳೂರು ವಿಭಾಗದ ಒಂಬತ್ತು ಜಿಲ್ಲೆಗಳ ಸಮುದಾಯದ ಮುಖಂಡರು, ಜನಪ್ರತಿನಿಧಿಗಳು, ಪ್ರಮುಖರು ಭಾಗವಹಿಸಿದ್ದ ಸಮಾವೇಶದಲ್ಲಿ ವೀರಶೈವ ಹಾಗೂ ಲಿಂಗಾಯತರು ಪ್ರತ್ಯೇಕವಲ್ಲ. ಪ್ರತ್ಯೇಕ ಹೆಸರಿನಿಂದ ಕರೆದರೂ ಇವೆರಡೂ ಒಂದೇ ಸಮುದಾಯ ಎಂದು ಬಹುತೇಕರು ಪ್ರತಿಪಾದಿಸಿದರು.

ವೀರಶೈವ– ಲಿಂಗಾಯತರ ಇತರ ಉಪಪಂಗಡಗಳು ಭೇದ ಎಣಿಸದೆ ಮಹಾಸಭಾದ ಅಡಿಯಲ್ಲೇ ಒಗ್ಗೂಡಬೇಕು. ಒಳಪಂಗಡಗಳ ಹೆಸರಿನಲ್ಲಿ ಸಮುದಾಯದ ನಡುವೆ ತಾರತಮ್ಯ, ಭಿನ್ನಾಭಿಪ್ರಾಯ ತರಬಾರದು. ‘ನಾವೆಲ್ಲರೂ ಒಂದೇ’ ಎಂಬ ಭಾವನೆಯಿಂದ ಸಂಘಟಿತರಾಗುವಂತೆ ಕರೆ ನೀಡಲಾಯಿತು.

ಬೆಂಗಳೂರು ವಿಭಾಗ ಮಟ್ಟದ ಸಮಾವೇಶವನ್ನು ಶನಿವಾರ ಶಾಸಕ ಈಶ್ವರ ಖಂಡ್ರೆ ಉದ್ಘಾಟಿಸಿದರು. ಸಿದ್ಧಲಿಂಗ ಸ್ವಾಮೀಜಿ, ಮಹಾಸಭಾ ಹಿರಿಯ ಉಪಾಧ್ಯಕ್ಷ ಎನ್.ತಿಪ್ಪಣ್ಣ, ರಾಜ್ಯ ಘಟಕದ ಅಧ್ಯಕ್ಷ ನಟರಾಜ್ ಸಾಗರನಹಳ್ಳಿ, ಮಹಿಳಾ ಘಟಕದ ಅಧ್ಯಕ್ಷೆ ಅರುಣಾದೇವಿ, ಮುಖಂಡರಾದ ಟಿ.ಬಿ.ಶೇಖರ್, ರಾಜಶೇಖರ್, ಎಂ.ಎನ್.ಶಶಿಧರ್ ಇತರರು ಉಪಸ್ಥಿತರಿದ್ದರು

ಲಿಂಗಾಯತ ಹಾಗೂ ವೀರಶೈವರು ಬೇರೆ ಎಂದು ಕೆಲವರು ಪ್ರತ್ಯೇಕಿಸಲು ನೋಡುತ್ತಿದ್ದಾರೆ. ಕೆಲವರು ಲಿಂಗ ಪೂಜಿಸಿದರೆ, ಮತ್ತೆ ಕೆಲವರು ಶಿವನನ್ನು ಆರಾಧಿಸುತ್ತಾರೆ. ಪೂಜೆಯಲ್ಲಿ ವ್ಯತ್ಯಾಸ ಕಾಣಬಹುದೇ ಹೊರತು ಸಮುದಾಯದ ನಡುವೆ ಭಿನ್ನತೆ ಇಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ಒಗ್ಗೂಡುವ ಅಗತ್ಯವಿದೆ ಎಂದು ಪ್ರಮುಖವಾಗಿ ಪ್ರಸ್ತಾಪಿಸಲಾಯಿತು.

ವೀರಶೈವ ಲಿಂಗಾಯತರ ಹಲವು ಉಪಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಿಲ್ಲ. ಇದರಿಂದಾಗಿ ಉದ್ಯೋಗ ಹಾಗೂ ಶಿಕ್ಷಣದಿಂದ ಸಮುದಾಯದ ಮಕ್ಕಳು ವಂಚಿತರಾಗುತ್ತಿದ್ದಾರೆ. ಕೇಂದ್ರ ಸರ್ಕಾರ ಸಮುದಾಯದ ಎಲ್ಲಾ ಉಪಪಂಗಡಗಳನ್ನು ಒಬಿಸಿ ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಲಾಯಿತು.

ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ, ಮಹಾಸಭಾ ಮುಖಂಡರಾದ ಎನ್.ತಿಪ್ಪಣ್ಣ, ಈಶ್ವರ ಖಂಡ್ರೆ, ನಟರಾಜ್ ಸಾಗರನಹಳ್ಳಿ, ಮಹಾಸಭಾ ಮಹಿಳಾ ಘಟಕದ ಅಧ್ಯಕ್ಷೆ ಅರುಣಾದೇವಿ ಮೊದಲಾದವರು ಭಾಗವಹಿಸಿದ್ದರು.

ವಾಣಿಜ್ಯ– ಕೈಗಾರಿಕೆ, ಕೃಷಿ ಕ್ಷೇತ್ರದ ಸವಾಲುಗಳು– ಪರಿಹಾರೋಪಾಯಗಳು, ಶಿಕ್ಷಣ ಮತ್ತು ಉದ್ಯಮದಲ್ಲಿ ಯುವಕರ ಪಾತ್ರ, ವೀರಶೈವ–ಲಿಂಗಾಯತ ಧರ್ಮ ಮತ್ತು ತತ್ವಾಚರಣೆಗಳು ಕುರಿತು ಗೋಷ್ಠಿಗಳು ನಡೆದವು. ಎರಡು ದಿನ ಸಾಕಷ್ಟು ಚರ್ಚೆಗಳು ನಡೆಯಲಿವೆ.

ಸಂತ್ರಸ್ತ ವಿದ್ಯಾರ್ಥಿನಿಯರಿಂದ ರಾಷ್ಟ್ರಪತಿಗೆ ಪತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ಚಿತ್ರದುರ್ಗದ ಮುರುಘಾಮಠದ ಶಿವಮೂರ್ತಿ ಶರಣರ ವಿರುದ್ಧ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಪೋಕ್ಸೊ ಪ್ರಕರಣ ದಾಖಲಿಸಿರುವ ಇಬ್ಬರು ಸಂತ್ರಸ್ತ ವಿದ್ಯಾರ್ಥಿನಿಯರು ನ್ಯಾಯ ಒದಗಿಸಿಕೊಡುವಂತೆ ರಾಷ್ಟ್ರಪತಿ ಅವರಿಗೆ ಪತ್ರ ಬರೆದಿದ್ದಾರೆ.

ಶರಣರ ವಿರುದ್ಧ ಹೇಳಿಕೆ ನೀಡುವಂತೆ ಮಠದ ಹಾಸ್ಟೆಲ್‌ನಲ್ಲಿ ವ್ಯಾಸಂಗ ಮಾಡಿದ್ದ ತನ್ನ ಪುತ್ರಿಯರಿಗೆ ಕುಮ್ಮಕ್ಕು ನೀಡಿದ ಆರೋಪದ ಮೇಲೆ ದಾಖಲಾಗಿರುವ ಪ್ರಕರಣದಲ್ಲಿ ವಿದ್ಯಾರ್ಥಿನಿಯರ ತಾಯಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ಪತ್ರ ಬರೆದಿರುವ ಸಂತ್ರಸ್ತ ವಿದ್ಯಾರ್ಥಿನಿಯರು, ತಮಗೆ ಸಹಾಯ ಮಾಡಲು ಮುಖ್ಯಮಂತ್ರಿ, ನ್ಯಾಯಾಧೀಶರು ಹಾಗೂ ಪ್ರಧಾನಿ ಅವರಿಗೆ ತಿಳಿಸಬೇಕು ಎಂದು ರಾಷ್ಟ್ರಪತಿ ಅವರಲ್ಲಿ ಮನವಿ ಮಾಡಿದ್ದಾರೆ.

‘ತನ್ನ ಮಕ್ಕಳಿಗಾದ ಅನ್ಯಾಯಕ್ಕಾಗಿ ಕಾನೂನು ಹೋರಾಟ ನಡೆಸಲು ಧೈರ್ಯ ಪ್ರದರ್ಶಿಸಿದ ತಾಯಿಯ ವಿರುದ್ಧವೇ ಪ್ರಕರಣ ದಾಖಲಿಸಿರುವುದು ತನಿಖೆಯ ದಿಕ್ಕು ತಪ್ಪಿಸುವ ಪ್ರಯತ್ನವಾಗಿದೆ. ದೂರುದಾರರಾದ ತಾಯಿಯನ್ನೇ ವಶಕ್ಕೆ ಪಡೆದಿರುವುದು ಸರಿಯಲ್ಲ. ಮಕ್ಕಳಿಗೂ ಅದರಿಂದ ನೋವಾಗಿದೆ. ಹೀಗಾಗಿಯೇ ನ್ಯಾಯ ಒದಗಿಸಬೇಕು ಹಾಗೂ ಮೇಲ್ಮಟ್ಟದ ತನಿಖೆ ನಡೆಯಬೇಕೆಂದು ಪತ್ರ ಬರೆದಿದ್ದಾರೆ. ಅದರ ಪ್ರತಿಯನ್ನು ಮುಖ್ಯಮಂತ್ರಿ, ಪ್ರಧಾನಿ, ಸುಪ್ರೀಂಕೋರ್ಟ್ ನ್ಯಾಯಾಧೀಶರಿಗೆ ಪೋಸ್ಟ್ ಮಾಡಿದ್ದೇವೆ’ ಎಂದು ಒಡನಾಡಿ ಸಂಸ್ಥಾಪಕ ಸ್ಟ್ಯಾನ್ಲಿ ತಿಳಿಸಿದರು.

‘ದೂರುದಾರ ಸಂತ್ರಸ್ತರು, ಸಾಕ್ಷಿದಾರರಿಗೆ ಕಾನೂನು ರಕ್ಷಣೆಯನ್ನು ನೀಡಬೇಕಿತ್ತು. ಆದರೆ, ಅನ್ಯಾಯದ ವಿರುದ್ಧ ದೂರು ನೀಡಲು, ಸಾಕ್ಷಿ ನುಡಿಯಲು ಅಸಾಧ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಸಂತ್ರಸ್ತ ಮಕ್ಕಳ ಪರ ಒಡನಾಡಿ ಹೋರಾಟ ನಡೆಸಲಿದೆ. ಅದಕ್ಕೆ ರೈತ ಸಂಘ ಸೇರಿದಂತೆ ಎಲ್ಲ ಸಂಘಟನೆಗಳೂ ಒಗ್ಗೂಡಲಿವೆ. ಎಲ್ಲ ಯುವಕ– ಯುವತಿಯರೂ ಬಂದಿದ್ದಾರೆ. ದುರ್ಗದ ಮಕ್ಕಳು ದುರ್ಗೆಯರಾಗಬೇಕು ಎಂಬ ಅಭಿಯಾನ ಆರಂಭಿಸುತ್ತಿದ್ದೇವೆ’ എಂದರು.

‘ಕೈ’ ಟಿಕೆಟ್: 200 ಆಕಾಂಕ್ಷಿಗಳ ಅರ್ಜಿ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಬಯಸಿ ₹ 5 ಸಾವಿರ ಶುಲ್ಕ ಪಾವತಿಸಿ ಕೆಪಿಸಿಸಿಯಿಂದ ಅರ್ಜಿ ಪಡೆದುಕೊಂಡಿದ್ದ 800 ಆಕಾಂಕ್ಷಿಗಳ ಪೈಕಿ 200 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಸಲು ಇದೇ 15ರವರೆಗೆ ಕೊನೆಯ ದಿನ.

‘ಈವರೆಗೆ ಅರ್ಜಿ ಸಲ್ಲಿಸಿದವರಲ್ಲಿ ಕೆ.ಆರ್. ನಗರದಿಂದ ಕಣಕ್ಕಿಳಿಯಲು ಬಯಸಿರುವ ಐಶ್ವರ್ಯಾ ಮಹದೇವ್ (27) ಅತಿ ಕಿರಿಯ, ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸಲು ಇಚ್ಛಿಸಿರುವ ಶಾಮನೂರು ಶಿವಶಂಕರಪ್ಪ (92) ಅತಿ ಹಿರಿಯ ಆಕಾಂಕ್ಷಿ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

‘ಉಳಿದಂತೆ, ಬಸವನಬಾಗೇವಾಡಿ ಕ್ಷೇತ್ರದ ಹಾಲಿ ಶಾಸಕ ಶಿವಾನಂದ ಪಾಟೀಲ ಮತ್ತೊಮ್ಮೆ ಟಿಕೆಟ್ ಬಯಸಿದ್ದರೆ ಮತ್ತು ಅವರ ಮಗಳು ಸಂಯುಕ್ತಾ ಪಾಟೀಲ ಅವರು ವಿಜಯಪುರ ನಗರ ಕ್ಷೇತ್ರದಿಂದ ಸ್ಪರ್ಧಿಸಲು ಅರ್ಜಿ ಸಲ್ಲಿಸಿದ್ದಾರೆ. ಮಾಜಿ ಸಚಿವ ಎಚ್.ಸಿ. ಮಹದೇವಪ್ಪ ಅವರು ನಂಜನಗೂಡು, ಅವರ ಮಗ ಸುನೀಲ್ ಬೋಸ್ ಟಿ. ನರಸೀಪುರ ಕ್ಷೇತ್ರದಿಂದ ಸ್ಪರ್ಧಿಸಲು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಅವರೂ ನಂಜನಗೂಡು ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಅರ್ಜಿ ಹಾಕಿದ್ದಾರೆ. ಚಿತ್ರನಟ ರಾಜಶೇಖರ ಕೋಟ್ಯಾನ್ ಅವರು ಮೂಡಬಿದಿರೆ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿ ಅರ್ಜಿ ಸಲ್ಲಿಸಿದ್ದಾರೆ’ ಎಂದೂ ಮೂಲಗಳು ಹೇಳಿವೆ.

ಶಿಷ್ಟಾಚಾರ: ನಿಲ್ಲದ ವಾಕ್ಸಮರ

ಒಂದನೇ ಪುಟದಿಂದ

ಜೆಡಿಎಸ್ ವಕ್ತಾರ ಗಂಗಾಧರ ಮೂರ್ತಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಈ ಸಮಾರಂಭದ ಆಹ್ವಾನ ಪತ್ರಿಕೆಯ ಪ್ರತಿಯೊಂದನ್ನು ಹಂಚಿಕೊಂಡಿದ್ದು, ಅದರಲ್ಲಿ ದೇವೇಗೌಡರ ಹೆಸರು ಇಲ್ಲ. ಕಾಂಗ್ರೆಸ್ ಮತ್ತು ಜೆಡಿಎಸ್‌ನ ಇತರ ಎಲ್ಲ ರಾಜ್ಯಸಭಾ ಸದಸ್ಯರು, ಬೆಂಗಳೂರಿನ ಎಲ್ಲ ಶಾಸಕರು, ದೇವನಹಳ್ಳಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ಮಾಗಡಿ ಶಾಸಕ ಮಂಜುನಾಥ್ ಸೇರಿದಂತೆ ಹಲವರ ಹೆಸರು ಇವೆ.

ಕಾಂಗ್ರೆಸ್ ಕೂಡ ಆರೋಪಕ್ಕೆ ದನಿಗೂಡಿಸಿದೆ. ತಮಗೆ ಅಧಿಕೃತ ಆಹ್ವಾನ ನೀಡಿರಲಿಲ್ಲ ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಬಿಜೆಪಿಯು ಪ್ರತಿಮೆ ಅನಾವರಣ ಸಮಾರಂಭವನ್ನು ರಾಜಕೀಯಕ್ಕೆ ಬಳಸಿಕೊಂಡಿದೆ ಎಂದು ಡಿ.ಕೆ. ಶಿವಕುಮಾರ್ ಟೀಕಿಸಿದ್ದಾರೆ.

ಸ್ವಾಮೀಜಿ ಹೆಗಲ ಮೇಲೆ ಕೈ: ಸಚಿವ ಅಶೋಕ ವಿರುದ್ಧ ಆಕ್ರೋಶ

ಬೆಂಗಳೂರು: ಕೆಂಪೇಗೌಡರ ಪ್ರತಿಮೆ ಅನಾವರಣ ಸಮಾರಂಭದ ಬಳಿಕ ಗುಂಪು ಫೋಟೊ ತೆಗೆಸಿಕೊಳ್ಳುವಾಗ ಕಂದಾಯ ಸಚಿವ ಆರ್. ಅಶೋಕ ಅವರು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯವರ ಹೆಗಲ ಮೇಲೆ ಕೈ ಇರಿಸಿರುವುದನ್ನು ಜೆಡಿಎಸ್, ಕಾಂಗ್ರೆಸ್ ಟೀಕಿಸಿವೆ.



ಸಚಿವ ಆರ್.ಅಶೋಕ ಅವರು ನಿರ್ಮಲಾನಂದನಾಥ ಸ್ವಾಮೀಜಿ ಅವರ ಹೆಗಲ ಮೇಲೆ ಕೈ ಇಟ್ಟಿರುವುದು

ಜೆಡಿಎಸ್ ವರಿಷ್ಠ ದೇವೇಗೌಡರು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ ಕಾಲಿಗೆರಗಿರುವ ಹಾಗೂ ಅಶೋಕ ಅವರು ನಿರ್ಮಲಾನಂದನಾಥ ಸ್ವಾಮೀಜಿ ಹೆಗಲ ಮೇಲೆ ಕೈ ಇರಿಸಿರುವ ಫೋಟೊಗಳನ್ನು ಹಂಚಿಕೊಂಡಿರುವ ಜೆಡಿಎಸ್ ವಕ್ತಾರ ಗಂಗಾಧರಮೂರ್ತಿ, ಕಂದಾಯ ಸಚಿವರ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

ಈ ಘಟನೆ ಕುರಿತು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ನಾನು ಸ್ವಾಮೀಜಿಯ ಹೆಸರನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದಿಲ್ಲ. ನಮ್ಮ ಸ್ವಾಮೀಜಿಯನ್ನು ನಾವು ದೇವರಂತೆ ಕಾಣುತ್ತೇವೆ. ಅವರು ವಯಸ್ಸಿನಲ್ಲಿ ನನಗಿಂತ ಸ್ವಲ್ಪ ಚಿಕ್ಕವರಾದರೂ ಆ ಪವಿತ್ರ ಪೀಠಕ್ಕೆ ಯಾವ ರೀತಿ ಗೌರವ ನೀಡಬೇಕೋ ಆ ರೀತಿ ನೀಡುತ್ತೇವೆ’ ಎಂದರು.

ಸಾಮಾಜಿಕ ಮಾಧ್ಯಮಗಳಲ್ಲೂ ಫೋಟೊ ಹಂಚಿಕೊಂಡಿರುವ ಹಲವಾರು ಮಂದಿ, ಅಶೋಕ ವಿರುದ್ಧ ಹರಿಹಾಯ್ದಿದ್ದಾರೆ. ಆದರೆ, ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ಅವರು ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿಯವರ ಹೆಗಲ ಮೇಲೆ ಕೈಹಾಕಿದ್ದ ಚಿತ್ರವೊಂದನ್ನು ಅಶೋಕ ಆಪ್ತರು ಹಂಚಿಕೊಂಡಿದ್ದಾರೆ.

ಸಮಾರಂಭಕ್ಕೆ ಅಧಿಕೃತವಾಗಿ ಆಹ್ವಾನ ಪತ್ರಿಕೆ ಮುದ್ರಿಸಿರಲಿಲ್ಲ. ಮುಖ್ಯಮಂತ್ರಿಯವರೇ ದೇವೇಗೌಡರಿಗೆ ದೂರವಾಣಿ ಕರೆಮಾಡಿ ಆಹ್ವಾನಿಸಿದ್ದರು. ಪತ್ರವನ್ನೂ ಬರೆದಿದ್ದರು. ಇದರಲ್ಲಿ ತಪ್ಪು ಹುಡುಕುವಂಥದ್ದೇನೂ ಇಲ್ಲ.

ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಉನ್ನತ ಶಿಕ್ಷಣ ಸಚಿವ, ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಸಂಜೆ 7 ಗಂಟೆಗೆ ನನಗೆ ಕರೆಮಾಡಿ ಸಮಾರಂಭಕ್ಕೆ ಬರುವಂತೆ ಆಹ್ವಾನಿಸಿದರು. ಶಿಷ್ಟಾಚಾರದ ಪ್ರಕಾರ ಆಹ್ವಾನ ಪತ್ರಿಕೆಯಲ್ಲಿ ಹೆಸರು ಪ್ರಕಟಿಸಿಲ್ಲ ಎಂದು ನಾನು ಅವರಿಗೆ ಹೇಳಿದೆ. ಬೇರೆ ಸಭೆಯ ಕಾರಣಕ್ಕೆ ಸಮಾರಂಭಕ್ಕೆ ಬರುವುದಿಲ್ಲ ಎಂದೂ ಹೇಳಿದ್ದೆ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ.

ಈ ಸರ್ಕಾರಕ್ಕೆ ಎಚ್.ಡಿ. ಕುಮಾರಸ್ವಾಮಿ, ಎಚ್.ಡಿ. ದೇವೇಗೌಡ, ಡಿ.ಕೆ. ಶಿವಕುಮಾರ್, ಎಸ್.ಎಂ. ಕೃಷ್ಣ ಬೇಡ. ಅವರಿಗೆ ಕೇವಲ ಚುನಾವಣೆ ಮತ್ತು ಮತಬ್ಯಾಂಕ್ ಮಾತ್ರ. ಅವರಿಂದ ಏನನ್ನೂ ನಿರೀಕ್ಷೆ ಮಾಡಬಾರದು.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಎಚ್.ಡಿ. ಕುಮಾರಸ್ವಾಮಿ ಮತ್ತು ಅವರ ಕುಟುಂಬದವರು ಮುಖ್ಯಮಂತ್ರಿ ಸೇರಿದಂತೆ ಇತರ ಹುದ್ದೆಗಳನ್ನು ಅನುಭವಿಸಿದ್ದಾರೆ. ಎಲ್ಲಿಯೂ ಕೆಂಪೇಗೌಡರ ಹೆಸರಿಟ್ಟಿಲ್ಲ ಮತ್ತು ಪ್ರತಿಮೆ ಸ್ಥಾಪಿಸಿಲ್ಲ. ತಾವು ಮಾಡದ್ದನ್ನು ಬಿಜೆಪಿಯವರು ಮಾಡುತ್ತಿದ್ದಾರೆ ಎಂಬ ಹೊಟ್ಟೆ ಕಿಚ್ಚು ಅವರಿಗೆ.

ಪ್ರಲ್ಹಾದ ಜೋಶಿ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ರಾಜಕಾರಣಕ್ಕೋಸ್ಕರ ಕೆಂಪೇಗೌಡರ ಪ್ರತಿಮೆ ಅನಾವರಣ ಮಾಡಲಾಗಿದೆ. ದೇವೇಗೌಡರಿಗೆ ಕಾಟಾಚಾರದ ಆಹ್ವಾನ ನೀಡಲಾಗಿತ್ತು. ರಾತ್ರಿ 12.45ಕ್ಕೆ ಯಾರದ್ದೋ ಕೈಯ್ಯಲ್ಲಿ ಪತ್ರ ಕಳುಹಿಸಿದ್ದರು. ಅವರಿಗೆ ನಾಗರಿಕತೆಯೇ ಇಲ್ಲ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ.

ಸಿಎಂ ಸತ್ಯ ಹೇಳುವ ದಮ್ ತೋರಿಸಲಿ: ಜೆಡಿಎಸ್

ಬೆಂಗಳೂರು: ಕೆಂಪೇಗೌಡರ ಪ್ರತಿಮೆ ಅನಾವರಣ ಸಮಾರಂಭಕ್ಕೆ ಮಾಜಿ ಪ್ರಧಾನಿಯೂ ಆಗಿರುವ ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡರಿಗೆ ಆಹ್ವಾನ ನೀಡಿರುವ ವಿಷಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸತ್ಯ ಹೇಳುವ ದಮ್ ತೋರಿಸಲಿ ಎಂದು ಜೆಡಿಎಸ್ ಸವಾಲು ಹಾಕಿದೆ.

ಪಕ್ಷದ ಅಧಿಕೃತ ಟ್ವಿಟರ್ ಖಾತೆಯಿಂದ ಶನಿವಾರ ಸರಣಿ ಟ್ವೀಟ್ ಮಾಡಿದ್ದು, ‘ಮಾಡಿದ ತಪ್ಪನ್ನು ಲಜ್ಜೆಗೆಟ್ಟು ಸಮರ್ಥಿಸಿಕೊಳ್ಳುವುದು ಕಮಲ ಪಕ್ಷಕ್ಕೆ ಸಿದ್ಧಿಸಿರುವ ಕಲೆ. ಅಧಿಕೃತ ಆಹ್ವಾನ ಪತ್ರಿಕೆಯಲ್ಲಿ ಹೆಸರಿಲ್ಲ. ಆದರೆ, ಮುಖ್ಯಮಂತ್ರಿಯವರೇ ಪತ್ರ ಬರೆದು ದೇವೇಗೌಡರಿಗೆ ಆಹ್ವಾನ ನೀಡಿದ್ದಾರೆ ಎಂದು ರಾಜ್ಯ ಸರ್ಕಾರ ದಿಕ್ಕು ತಪ್ಪಿಸುತ್ತಿದೆ. ಅಸಲಿ ಕತೆಯನ್ನು ಮುಚ್ಚಿಡುತ್ತಿದೆ’ ಎಂದು ದೂರಿದೆ.

ನವೆಂಬರ್ 11ರ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಯವರು ಪತ್ರ ಬರೆದಿದ್ದು ಯಾವಾಗ? ಪತ್ರವನ್ನು ದೇವೇಗೌಡರ ಮನೆಗೆ ತಲುಪಿಸಿದ್ದು ಯಾವಾಗ? ಪತ್ರದಲ್ಲಿ ಮಾಜಿ ಪ್ರಧಾನಿಯವರ ಹೆಸರನ್ನು ಎಲ್ಲಿ ಬರೆಯಲಾಗಿತ್ತು? ಶುಕ್ರವಾರ ಮಧ್ಯಾಹ್ನ 12.50ಕ್ಕೆ ನಡೆಯುವ ಕಾರ್ಯಕ್ರಮಕ್ಕೆ ಆಹ್ವಾನಿಸಲು ಮುಖ್ಯಮಂತ್ರಿಯವರು ಗುರುವಾರ ರಾತ್ರಿ 9 ಗಂಟೆಗೆ ಕಾಟಾಚಾರದ ಕರೆ ಮಾಡಿದ್ದರು. ರಾತ್ರಿ 12.30ರ ನಂತರ ತಲುಪಿಸಿದ್ದರು. ಇದರಲ್ಲಿ ಸುಳ್ಳಾಡುವುದೇನಿದೆ ಎಂದು ಕೇಳಿದೆ.

ಪ್ರಜಾವಾಣಿ @75

ಫೋನ್–ಇನ್ ಕಾರ್ಯಕ್ರಮ

ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ಸರಿಯಾದ ಸಮಯಕ್ಕೆ ಕೆಎಸ್‌ಆರ್‌ಟಿಸಿ ಬಸ್‌ಗಳು ಬರುತ್ತಿಲ್ಲವೇ?
- ನಿಮ್ಮ ಮಾರ್ಗದ ಬಸ್ ಸೇವೆ ಸ್ಥಗಿತ ಆಗಿದೆಯೇ?
- ರಾತ್ರಿ ವೇಳೆ ಬಸ್ ಸಿಗದೆ ತೊಂದರೆ ಅನುಭವಿಸುತ್ತಿದ್ದೀರಾ?
- ಬಸ್‌ಗಳಲ್ಲಿ ಸಿಬ್ಬಂದಿ ವರ್ತನೆ ಬಗ್ಗೆ ತಕರಾರು ಇದೆಯಾ?
- ಬಸ್‌ಗಳಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲವೇ?

ನಿಮ್ಮ ಅಹವಾಲುಗಳಿಗೆ ಸ್ಪಂದಿಸಲಿದ್ದಾರೆ

ವಿ.ಅನ್ಬುಕುಮಾರ್, ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ(ಕೆಎಸ್‌ಆರ್‌ಟಿಸಿ)

ದಿನಾಂಕ: 14.11.2022 ಸೋಮವಾರ

ಸಮಯ: ಮಧ್ಯಾಹ್ನ 12.30 ರಿಂದ ಮಧ್ಯಾಹ್ನ 1.30ರವರೆಗೆ

ದೂರವಾಣಿ: 080 45557261

LIVE /prajavani.net /prajavani

ಪ್ರಿಯಾಂಕ್ ಕೊಲೆಗೆ ಬಿಜೆಪಿ ಸರ್ಕಾರ ಸಂಚು: ಕಾಂಗ್ರೆಸ್ ಆರೋಪ

ಕಲಬುರಗಿ: ‘ಸರ್ಕಾರದ ಭ್ರಷ್ಟಾಚಾರ, ಹಗರಣ ಬಯಲಿಗೆಳೆಯುತ್ತಿರುವ ಶಾಸಕ ಪ್ರಿಯಾಂಕ್ ಖರ್ಗೆ ಅವರನ್ನು ಕೊಲ್ಲಲು ಬಿಜೆಪಿ ಸರ್ಕಾರ ವ್ಯವಸ್ಥಿತ ಸಂಚು ರೂಪಿಸಿದೆ. ಬಿಜೆಪಿಯು ತನ್ನ ಮುಖಂಡರಿಂದ ಪ್ರಿಯಾಂಕ್ ಅವರನ್ನು ಶೂಟ್ ಮಾಡುವ ಬೆದರಿಕೆ ಒಡ್ಡುತ್ತಿದ್ದು, ಇದು ಖಂಡನೀಯ’ ಎಂದು ಕಾಂಗ್ರೆಸ್ ಮುಖಂಡ ಡಾ.ಶರಣ ಪ್ರಕಾಶ ಪಾಟೀಲ ಆರೋಪಿಸಿದರು.

‘ಅಪರಾಧ ಹಿನ್ನೆಲೆಯುಳ್ಳ ಮಣಿಕಂಠ ರಾಠೋಡ ಎಂಬುವರು ಪ್ರಿಯಾಂಕ್ ಅವರನ್ನು ಶೂಟ್ ಮಾಡುವುದಾಗಿ ಹೇಳಿ, ಬಹಿರಂಗವಾಗಿ ಬೆದರಿಕೆ ಒಡ್ಡುತ್ತಾರೆ. ಪ್ರಿಯಾಂಕ್ ಅವರಿಗೆ ಭದ್ರತೆ ನೀಡುವಂತೆ ಕೋರಿದರೂ ಸರ್ಕಾರ ಸ್ಪಂದಿಸುತ್ತಿಲ್ಲ’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ನಂತರ, ಎಸ್ಪಿ ಕಚೇರಿ ಎದುರು ಕಾಂಗ್ರೆಸ್ ಮುಖಂಡರು ಪ್ರತಿಭಟಿಸಿದರು.

ಹೇಳಿಕೆ ತಿರುಚುವ ಪ್ರಯತ್ನ: ‘ಕಾಂಗ್ರೆಸ್ ನಾಯಕರು ನನ್ನ ಹೇಳಿಕೆ ತಿರುಚಿ, ನನಗೆ ಮತ್ತು ಬಿಜೆಪಿಗೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ’ ಎಂದು ಬಿಜೆಪಿ ಮುಖಂಡ ಮಣಿಕಂಠ ಎನ್ ರಾಠೋಡ ಹೇಳಿದ್ದಾರೆ.

ಪ್ರಜಾವಾಣಿ @75 ಅಮೃತ ಮಹೋತ್ಸವ — ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ಪತ್ರಿಕಾಧರ್ಮಕ್ಕೆ ಬದ್ಧ...



ನನ್ನ ಮತ್ತು ‘ಪ್ರಜಾವಾಣಿ’ಯ ನಂಟಿಗೂ ಈಗ ಅಮೃತ ಮಹೋತ್ಸವದ ಸಂಭ್ರಮ! ನಾನು ಮಿಡ್ಲ್ ಸ್ಕೂಲ್‌ನಲ್ಲಿದ್ದಾಗಲೇ ‘ಪ್ರಜಾವಾಣಿ’ ಓದಲು ಆರಂಭಿಸಿದೆ. ಚಾಮರಾಜನಗರಕ್ಕೆ ಒಂದು ದಿನ ತಡವಾಗಿ ಪತ್ರಿಕೆ ಬರುತ್ತಿತ್ತು. ಆತ್ಮೀಯರಾಗಿದ್ದ ದಾಸೇಗೌಡರು ಪತ್ರಿಕೆ ವಿತರಿಸುತ್ತಿದ್ದರು. ಒಂದು ದಿನ ತಡವಾಗಿ ಸುದ್ದಿ ಓದುವುದರಲ್ಲೂ ಆ ಕಾಲದಲ್ಲಿ ಖುಷಿ ಇತ್ತು. ಅಂದಿನಿಂದ ಇಂದಿನವರೆಗೆ ಪತ್ರಿಕೆಯನ್ನು ಓದುತ್ತಾ ಬೆಳೆದಿದ್ದೇನೆ. ಒಂದು ದಿನ ಓದದಿದ್ದರೂ ಮನಸ್ಸಿಗೆ ಹಿತವಾಗುವುದಿಲ್ಲ.

‘ಪ್ರಜಾವಾಣಿ’ಯ ನಿಷ್ಪಕ್ಷಪಾತವಾದ, ನೈಜ ವರದಿ ನನಗಿಷ್ಟ. ಪತ್ರಿಕೆಯು ಆರಂಭದಿಂದಲೂ ಪತ್ರಿಕಾ ಧರ್ಮಕ್ಕೆ ಬದ್ಧವಾಗಿ ಕೆಲಸ ಮಾಡುತ್ತಿದೆ. ಪತ್ರಿಕೆಯು ನಿಖರ, ನಿಷ್ಪಕ್ಷಪಾತ ಸುದ್ದಿಗಳ ಮೂಲಕ ದುರ್ಬಲರು, ತಳಸಮುದಾಯದವರು ಹಾಗೂ ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುತ್ತಾ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸುವೆ.

ಸಿ.ಪಿ.ಹುಚ್ಚೇಗೌಡ, ಚಾಮರಾಜನಗರ

ಹೃದಯಕ್ಕೆ ಹತ್ತಿರ...



ನಾನು ಪ್ರಜಾವಾಣಿಯ ಅಸಂಖ್ಯ ಓದುಗರಲ್ಲಿ ಒಬ್ಬನಾಗಿದ್ದು ತುರ್ತುಪರಿಸ್ಥಿತಿಗೆ 2–3 ವರ್ಷ ಮೊದಲು. ಅಂದಿನಿಂದ ಈ ಪತ್ರಿಕೆ ನನ್ನ ಬುದ್ಧಿ ಮತ್ತು ಹೃದಯಕ್ಕೆ ಹತ್ತಿರವಾಗಿದೆ. ಸುದ್ದಿಗಳಿಗಿಂತ ಸಂಪಾದಕೀಯದೊಡನೆ ನನ್ನ ಓದು ಆರಂಭವಾಗುತ್ತದೆ. ಅದಕ್ಕೇ ಪತ್ರಿಕೆಯನ್ನು ಕೈಗೆತ್ತಿಕೊಂಡ ಕೂಡಲೇ 5 ಪುಟಗಳನ್ನು ತಿರುವಿ ಆರನೇ ಪುಟಕ್ಕೆ ಹೋಗುತ್ತೇನೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಪ್ಪು ನೀತಿ, ನಿರ್ಧಾರಗಳ ವಿಚಾರದಲ್ಲಿ ಬರಹಗಳು ನ್ಯಾಯಾಂಗದ ಕೊಡಲಿಯೇಟಿನಂತೆ ಇರುತ್ತವೆ. ಸಂಗತ ಮತ್ತು ವಾಚಕರ ವಾಣಿ, ಜನಜೀವನಕ್ಕೆ ಸ್ಪಂದಿಸಲು ಪತ್ರಿಕೆಯ ಜೀವನಾಡಿಗಳಂತಿವೆ. ನಾನು ಪ್ರಜಾವಾಣಿ ಓದುತ್ತ ಪ್ರಜಾಪ್ರಭುತ್ವವಾದಿಯಾಗಿದ್ದೇನೆ.

ಮಾಣಿಕರಾವ್ ಪಸಾರ, ಕಲಬುರಗಿ

ಒಡನಾಡಿ...

ಸುಮಾರು ಆರು ದಶಕಗಳಿಂದ ಪ್ರಜಾವಾಣಿಯ ಒಡನಾಡಿಯಾಗಿ ಬೆಳೆದುಬಂದಿದ್ದೇನೆ. ಬೆಳಿಗ್ಗೆ ಪ್ರಜಾವಾಣಿ ಕೈಲಿರಬೇಕು. ತುಮಕೂರು ಸರ್ಕಾರಿ ಕಾಲೇಜಿನಲ್ಲಿದ್ದಾಗ ನನ್ನ ಲೇಖನ ‘ದಾದಾಭಾಯಿ ನವರೋಜಿ’ ಪ್ರಕಟವಾದಾಗ ಸಹೋದ್ಯೋಗಿಗಳೊಡನೆ ಸಂಭ್ರಮಿಸಿದ್ದೆ. ಹವ್ಯಾಸಿ ಬರಹಗಾರನಾಗಿ ಬೆಳೆಯಲು ಈ ಪತ್ರಿಕೆ ನೆರವಾಯಿತು. ಅಮೃತ ಮಹೋತ್ಸವದ ಆಚರಣೆ ಸಂದರ್ಭದಲ್ಲಿ ಹಾರ್ದಿಕ ಶುಭಾಶಯಗಳು.

ರಾಜಶೇಖರ ಹಾದಿಮನಿ, ನಿವೃತ್ತ ಗ್ರಂಥಾಲಯಾಧಿಕಾರಿ, ನವಲೂರು ಧಾರವಾಡ

ನೆರವಾಯಿತು..

ನಾನು 1963ರಿಂದ (ಉಪಾಧ್ಯಾಯನಾದಾಗಿನಿಂದ) ಪ್ರಜಾವಾಣಿ ಓದುತ್ತಾ ಬಂದಿದ್ದೇನೆ. ಇದು ನನ್ನ ಬೋಧನಾ ಸಾಮರ್ಥ್ಯ ಹೆಚ್ಚಿಸಿ ನನ್ನನ್ನು ಅನುಭವಿ ಶಿಕ್ಷಕನಾಗಿಸಿದ್ದನ್ನು ಮರೆಯುವಂತಿಲ್ಲ.

ಎಲೆಮರೆಯ ಕಾಯಿಯಂತಿದ್ದ ರಂಗಭೂಮಿ ಕಲಾವಿದರನ್ನು ನಾಡಿಗೆ ಪರಿಚಯಿಸಿದ ಕೀರ್ತಿ ಈ ಪತ್ರಿಕೆಗೆ ಸಲ್ಲುತ್ತದೆ. ಸಾಪ್ತಾಹಿಕ ಪುರವಣಿ, ಕರ್ನಾಟಕ ದರ್ಶನ, ಭೂಮಿಕಾ ಮೂಲಕ ಗ್ರಾಮೀಣ ಬದುಕನ್ನು, ಮಹಿಳೆಯರ ದುಗುಡ ದುಮ್ಮಾನ, ಸ್ತ್ರೀ ಸಬಲೀಕರಣ ಲೇಖನಗಳನ್ನು ಪ್ರಕಟಿಸುತ್ತ ಬಂದಿದೆ. ನಾಡು ನುಡಿ ಹೋರಾಟಗಳಿಗೆ ಪ್ರೋತ್ಸಾಹಿಸಿ ಸದಾ ಕನ್ನಡಿಗರನ್ನು ಎಚ್ಚರಿಸುತ್ತ ಬದಿದೆ.

ದೀಪಾವಳಿ, ಯುಗಾದಿ ವಿಶೇಷಾಂಕಗಳ ಮೂಲಕ ಯುವ ಕತೆಗಾರರನ್ನು, ಕವಿಗಳನ್ನು ಬೆಳಕಿಗೆ ತಂದಿದೆ. ಪತ್ರಿಕೆ ಅಮೃತ ಮಹೋತ್ಸವದಿಂದ ಶತಮಾನೋತ್ಸವದತ್ತ ಮುನ್ನಡೆಯಲಿ.

ಕೊಹಿಮ, ಬಸರಕೋಡು

ಸ್ಫೂರ್ತಿಯ ಸೆಲೆ

ಪ್ರಾಥಮಿಕ ಶಾಲಾ ವಿದ್ಯಾರ್ಥಿ ದೆಸೆಯಿಂದಲೂ ಪ್ರಜಾವಾಣಿ ನನಗೆ ಸ್ಫೂರ್ತಿಯ ಸೆಲೆ. ಅಂದಿನಿಂದ ಇಂದಿನವರೆಗೂ ನಾನು ಈ ಪತ್ರಿಕೆಯ ಓದುಗ ಎಂದು ಹೇಳಿಕೊಳ್ಳಲು ಕನ್ನಡಿಗನಾಗಿ ಹೆಮ್ಮೆ ಎನಿಸುತ್ತದೆ. ಒಂದು ನೈತಿಕ ಪತ್ರಿಕೋದ್ಯಮ ಹೇಗಿರಬೇಕೆಂದು ಕರ್ನಾಟಕದಲ್ಲಿ ತೋರಿಸಿಕೊಟ್ಟಿದ್ದೇ ಪ್ರಜಾವಾಣಿ ಎಂದರೂ ಅತಿಶಯೋಕ್ತಿಯಾಗಲಾರದು.

ಯಾರ ಪರ ಅಥವಾ ಯಾರ ವಿರೋಧ ಅನ್ನದೇ ಕೇವಲ ನ್ಯಾಯ, ಪ್ರಾಮಾಣಿಕತೆ, ನೈತಿಕತೆಯ ಪರ ನಿಲ್ಲುವ ಹಾಗೂ ವಸ್ತುನಿಷ್ಠ ವರದಿಗೆ ಇನ್ನೊಂದು ಹೆಸರೇ ಪ್ರಜಾವಾಣಿ. ಕಲೆ, ಸಾಹಿತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನ, ರಾಜಕೀಯ ಸೇರಿದಂತೆ ಇನ್ನೂ ಅನೇಕ ಕ್ಷೇತ್ರಗಳಲ್ಲಿನ ಸುದ್ದಿಗಳನ್ನು ರಾಜ್ಯದ ಜನತೆಗೆ ಮನಮುಟ್ಟುವ ರೀತಿಯಲ್ಲಿ ತಲುಪಿಸುವ ಕಾರ್ಯ ಪತ್ರಿಕೆ ಮಾಡುತ್ತಿರುವುದು ನಿಜಕ್ಕೂ ಖುಷಿಯ ಸಂಗತಿ. ಅದರಲ್ಲೂ ನನ್ನ ಅರಣ್ಯ, ಪರಿಸರ ಹಾಗೂ ವನ್ಯಜೀವಿ ಸಂರಕ್ಷಣೆಯ ಹೋರಾಟಗಳಿಗೆ ಸದಾ ಬೆಂಬಲ ನೀಡುವ ಪ್ರಜಾವಾಣಿ ಪತ್ರಿಕೆಯು ನನಗೆ ಬಹುದೊಡ್ಡ ಶಕ್ತಿ.

75ನೇ ವರ್ಷಕ್ಕೆ ಕಾಲಿಟ್ಟಿರುವ ಪ್ರಜಾವಾಣಿಗೆ ಅಭಿನಂದನೆ ಸಲ್ಲಿಸುತ್ತಾ, ಸಮಾಜವನ್ನು ಎಚ್ಚರಿಸುವ ಕೆಲಸವನ್ನು ಪತ್ರಿಕೆಯು ಸದಾ ಮಾಡಲಿ ಎಂದು ಆಶಿಸುತ್ತೇನೆ.

ಗಿರಿಧರ ಕುಲಕರ್ಣಿ, ವನ್ಯಜೀವಿ ಸಂರಕ್ಷಣಾವಾದಿ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30

ನಾಳೆ

ಸಂವಾದ

ಇಡಬ್ಲ್ಯುಎಸ್ ಮೀಸಲಾತಿ: ಯಾರಿಗೆ ಲಾಭ, ಯಾರಿಗೆ ನಷ್ಟ?

ಭಾಗವಹಿಸುವವರು

- ನ್ಯಾ.ಎಚ್.ಎನ್. ನಾಗಮೋಹನ ದಾಸ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ.
- ಎಚ್.ಎಸ್. ಸಚ್ಚಿದಾನಂದಮೂರ್ತಿ, ಅಧ್ಯಕ್ಷ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ.
- ಶ್ರೀಪಾದ ಭಟ್, ಶಿಕ್ಷಣ ತಜ್ಞ ಹಾಗೂ ಸಾಮಾಜಿಕ ಕಾರ್ಯಕರ್ತ.
- ಡಿ.ಎಸ್. ಅರುಣ, ಶಾಸಕ ಹಾಗೂ ಅಧ್ಯಕ್ಷ, ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ಮಂಡಳಿ.
- ಅಖಿಲಾ ವಿದ್ಯಾಸಂದ್ರ, ವಕೀಲೆ, ಸಾಮಾಜಿಕ ಕಾರ್ಯಕರ್ತೆ

ಸಂಜೆ 4ರಿಂದ 5ರವರೆಗೆ

ಎಸ್ಸಿ ಯುವಕನ ಮೇಲೆ ಹಲ್ಲೆ

ವಿಜಯಪುರ: ತಾಲ್ಲೂಕಿನ ಡೊಮನಾಳ ಗ್ರಾಮದಲ್ಲಿ ಉರುಸು ವೇಳೆ ಧ್ವನಿವರ್ಧಕ ಅಳವಡಿಸುವ ಕುರಿತಂತೆ ಉಂಟಾದ ಜಗಳದಲ್ಲಿ ಶುಕ್ರವಾರ ಪರಿಶಿಷ್ಟ ಜಾತಿಯ ಸಾಗರ ಅಪ್ಪಾಸಾಹೇಬ ನಡವಿನಕೇರಿ ಎಂಬುವವರನ್ನು ದೇವಸ್ಥಾನದ ಕಂಬಕ್ಕೆ ಕಟ್ಟಿಹಾಕಿ, ಥಳಿಸಲಾಗಿದೆ.

ಹಲ್ಲೆಗೆ ಸಂಬಂಧಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ‘ಯುವಕನ ಮೇಲೆ 26 ಜನರು ಹಲ್ಲೆ ಮಾಡಿದ್ದಾರೆ. ಈ ಸಂಬಂಧ ಗ್ರಾಮದ ಲಿಂಗಾಯತ ಸಮುದಾಯದ 13 ಜನರನ್ನು ಬಂಧಿಸಲಾಗಿದೆ. ಉಳಿದರ ಪತ್ತೆಗೆ ಕ್ರಮಕೈಗೊಳ್ಳಲಾಗಿದೆ’ ಎಂದು ಎಸ್ಪಿ ಎಚ್.ಡಿ. ಆನಂದಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

KARNATAKA GOVERNMENT SECRETARIAT
Additional Chief Secretary to Government
Finance Department
Vidhana Soudha, Bengaluru-560001.

No.: FD/05/BMB/2022 Date: 10-11-2022

KARNATAKA GOVT. STOCK (SECURITIES)

1. Aggregate Amount: Total Rs.4000 crore [Rs.2000 crore (9 Year Tenure) and Rs.2000 crore (10 Year Tenure)]
2. Method of Issue: By Auction, through PDO, RBI, Mumbai (Fort)
3. Date of Auction : November 15, 2022

Government of Karnataka invites subscription to the above securities. Copies of the Notification and Application forms may be obtained from PDO, RBI, Bangalore. Non-competitive bidding facility has been introduced by RBI to encourage participation of retail investors. The Government stock up to 10% of the notified amount of the sale will be allotted to eligible individuals and institutions. Sample Tender Forms and the revised scheme of Non-competitive bidding facility is available on the **website** **www.rbi.org.in.**

Sd/- (Dr. Ekroop Caur), Secretary to Government, (Budget & Resources) Finance Department

DIPR/CP/RO3052/AAPL/2022-23

केन्द्रीय विद्यालय
KENDRIYA VIDYALAYA
Rail Wheel Factory (WAP) Yelahanka, Bengaluru-64.
Ph No. 28460979, Webstie : https://wapyelahanka.kvs.ac.in

WANTED PART TIME TEACHERS
WALK IN INTERVIEW

There will be a walk-in interview for the following posts on Contractual basis for the Academic Year 2022-23 at K.V. RWF, Yelahanka.

Reporting Time : 09.00 a.m.

Interview Venue : KV RWF, West Colony, Yelahanka New Town, Bangalore - 560064

DATE	POST
19.11.2022	TGT -Social Studies TGT- Science

For details of eligibility, application form and educational qualifications, kindly log on to the website of Kendriya Vidyalaya, Rail Wheel Factory at **https://wapyelahanka.kvs.ac.in** Candidates should report to the venue at 9:00 am for the interview with original and a photocopy of documents, 2 Passport Size Photos.

Note : No TA/DA will be paid by the Vidyalaya for Walk-in-Interview

Sd/- Principal

ವಿಮಾನ ನಿಲ್ದಾಣದಲ್ಲಿ ನಿರ್ಮಾಣವಾಗಿರುವ ತೂಗು ಉದ್ಯಾನಗಳು —ಪ್ರಜಾವಾಣಿ ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್.

ನಿಲ್ದಾಣದೊಳಗಿನ ಗೋಡೆಗಳಿಗೆ ಹಸಿರ ಹೊದ್ದಿಕೆ

ಕಲೆ–ಸಂಸ್ಕೃತಿಯ ಬೆಸುಗೆ ● ತೂಗು ಉದ್ಯಾನಗಳ ಆಕರ್ಷಣೆ, 6 ಲಕ್ಷಕ್ಕೂ ಅಧಿಕ ಸಸ್ಯಗಳು

ಟರ್ಮಿನಲ್–2 ಎಂಬ 'ಕಿನ್ನರಲೋಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಣ್ಣನೆಯ ವಾತಾವರಣದಲ್ಲಿ ಜಗಮಗಿಸುವ ದೀಪಗಳು, ತಲೆ ಎತ್ತಿದರೆ ಬಿದಿರ ಹಂದರ, ಅದಕ್ಕೆ ಜೋತು ಬಿದ್ದಿರುವ ದೊಡ್ಡ ಗಂಟೆಯಾಕಾರದ ಕಲಾಕೃತಿಗಳು, ಅವುಗಳಿಗೆ ಹೊದಿಕೆಯಾಗಿರುವ ಗಿಡ–ಬಳ್ಳಿಗಳು, ಅಲ್ಲಲ್ಲಿ ಕಿರು ಜಲಪಾತಗಳು, ಕಾರಂಜಿಗಳು...

ಇದು ಯಾವುದೋ ಉದ್ಯಾನವಲ್ಲ, ಶುಕ್ರವಾರವಷ್ಟೇ ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟನೆ ಮಾಡಿರುವ, ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್. ಪರಿಸರ, ಸುಸ್ಥಿರ, ತಂತ್ರಜ್ಞಾನ, ಕಲೆ ಮತ್ತು ಸಂಸ್ಕೃತಿ ಎಂಬ ನಾಲ್ಕು ಆಶಯಗಳನ್ನು ಹೊಸೆದು ನಿರ್ಮಿಸಿರುವ ಟರ್ಮಿನಲ್ ಪ್ರವಾಸಿ ತಾಣದಂತೆ ಭಾಸವಾಗುತ್ತಿದೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸದ್ಯ ಇರುವ ಟರ್ಮಿನಲ್–1ರ ಎಡಭಾಗಕ್ಕೆ ಐಷಾರಾಮಿ ರೆಸ್ಟಾರಂಟ್‌ವೊಂದರಂತೆ ಕಾಣಿಸುವ ಟರ್ಮಿನಲ್–2 ಪ್ರವೇಶಿಸಿದ ಕೂಡಲೇ ಅಲ್ಲೊಂದು ಕಿನ್ನರಲೋಕ ತೆರೆದುಕೊಳ್ಳುತ್ತದೆ. ಎಲ್ಲವೂ ಸೆನ್ಸಾರ್ ಮಯವಾದ ಮಾಯಾಲೋಕವನ್ನೇ ಹೊಕ್ಕಿದ ಅನುಭವವಾಗುತ್ತದೆ. ಜಗಮಗಿಸುವ ದೀಪಗಳ ಮಧ್ಯೆ ತಾರಸಿಯಿಂದ ಇಳಿಬಿದ್ದಿರುವ ಕಿರು ಉದ್ಯಾನಗಳು ಪ್ರಯಾಣಿಕರನ್ನು ಕ್ಷಣಕಾಲ ಅಚ್ಚರಿಗೆ ತಳ್ಳುತ್ತವೆ.

ಕಟ್ಟಡಗಳ ಸುತ್ತ ಉದ್ಯಾನಗಳನ್ನು ನಿರ್ಮಿಸುವುದು ಹೊಸದಲ್ಲ. ಕಟ್ಟಡದೊಳಗೆ ತೂಗು ಉದ್ಯಾನಗಳನ್ನು ನಿರ್ಮಿಸಿರುವುದು ಇಲ್ಲಿನ ವಿಶೇಷ. ಅಳಿವಿನಂಚಿನಲ್ಲಿರುವ 180 ಜಾತಿಯ ಗಿಡಗಳು, 800 ವರ್ಷಗಳಷ್ಟು ಹಳೆಯದಾದ ಮರಗಳು ಸೇರಿ 6 ಲಕ್ಷಕ್ಕೂ ಹೆಚ್ಚು ಸಸ್ಯಗಳು ಈ ವಿಮಾನ ನಿಲ್ದಾಣದ ಆವರಣದಲ್ಲಿವೆ. ಪ್ರತಿ ಗೋಡೆಗಳಲ್ಲೂ ಗಿಡಗಳಿದ್ದು, ಹಸಿರು ಹೊದ್ದಿವೆ.

ಪ್ರವೇಶ ದ್ವಾರದ ಎದುರಿನಲ್ಲೇ ನಾಡಿನ ಸಂಸ್ಕೃತಿ ಬಿಂಬಿಸುವ ಕಲಾಕೃತಿಗಳನ್ನು ಜೋಡಿಸಲಾಗಿದೆ. ಮರ ಮತ್ತು ಚರ್ಮದ ತೊಗಲು ಗೊಂಬೆಗಳು ನಾಡಿನ ಪರಂಪರೆ ಸಾರುತ್ತಿವೆ. ಇನ್ನು ತಂತ್ರಜ್ಞಾನದ ಬಳಕೆ ಕೂಡ ಅಷ್ಟೇ ಆಧುನಿಕವಾಗಿದೆ. ಪ್ರವೇಶ ದ್ವಾರದಿಂದ ವಿಮಾನ ಹತ್ತುವ ತನಕ ಪ್ರತಿ ಹಂತದಲ್ಲೂ ಪ್ರಯಾಣಿಕರಿಗೆ ತಂತ್ರಜ್ಞಾನದ ಸ್ಪರ್ಶವಾಗುತ್ತದೆ.

ಫೇಸ್ ಬಯೊಮೆಟ್ರಿಕ್, ಬಾಡಿ ಸ್ಕ್ಯಾನಿಂಗ್, ಭದ್ರತಾ ತಪಾಸಣೆ, ಬ್ಯಾಗ್ ಟ್ರ್ಯಾಕಿಂಗ್, ತೂಗು ಉದ್ಯಾನಗಳಿಗೆ ನೀರುಣಿಸಲು ಸ್ವಯಂ ಚಾಲಿತ ಸೆನ್ಸಾರ್ ವ್ಯವಸ್ಥೆ ಸೇರಿ ಎಲ್ಲದಕ್ಕೂ ತಂತ್ರಜ್ಞಾನದ ಲೇಪನವಿದೆ. ಇಡೀ ಟರ್ಮಿನಲ್ ಪ್ರಯಾಣಿಕರಲ್ಲಿ ಹೊಸ ಚೈತನ್ಯವನ್ನು ತುಂಬುವುದರಲ್ಲಿ ಅನುಮಾನ ಇಲ್ಲ ಎನ್ನುತ್ತಾರೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ (ಬಿಐಎಎಲ್) ಅಧಿಕಾರಿಗಳು.



ಪ್ರವೇಶದ್ವಾರದಲ್ಲಿರುವ ಗರುಡ ಕಲಾಕೃತಿ

ಡಿಸೆಂಬರ್‌ನಲ್ಲಿ ಕಾರ್ಯಾರಂಭ

ಈ ಎಲ್ಲಾ ವಿಶೇಷಗಳನ್ನು ಒಳಗೊಂಡಿರುವ ಟರ್ಮಿನಲ್‌–2 ಸಾರ್ವಜನಿಕರ ಸೇವೆಗೆ ಡಿಸೆಂಬರ್‌ನಲ್ಲಿ ಮುಕ್ತವಾಗಲಿದೆ.

ಆರಂಭದಲ್ಲಿ ದೇಶಿಯ ವಿಮಾನಗಳ ಹಾರಾಟಕ್ಕಷ್ಟೇ ಅವಕಾಶ ದೊರಕಲಿದೆ. ಜನವರಿಯಲ್ಲಿ ಅಂತರರಾಷ್ಟ್ರೀಯ ವಿಮಾನಗಳ ಹಾರಾಟ ಆರಂಭಿಸಲು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ(ಬಿಐಎಎಲ್) ನಿರ್ಧರಿಸಿದೆ.

ದೇಶದಲ್ಲೇ 2ನೇ ಅತೀ ಹೆಚ್ಚು ಪ್ರಯಾಣಿಕ ದಟ್ಟಣೆ ಹೊಂದಿರುವ ವಿಮಾನ ನಿಲ್ದಾಣದಲ್ಲಿ ಕೋವಿಡ್ ಪೂರ್ವದಲ್ಲಿ ವಾರ್ಷಿಕ 3.3 ಕೋಟಿ ಪ್ರಯಾಣಿಕರ ಸಂಚಾರ ಇತ್ತು. ದೇಶದ 76 ನಗರ ಮತ್ತು ವಿದೇಶಗಳ 25 ನಗರಗಳಿಗೆ ವಿಮಾನ ಸೇವೆ ಲಭ್ಯವಿದೆ ಎಂದು ಬಿಐಎಎಲ್ ಅಧಿಕಾರಿಗಳು ಹೇಳುತ್ತಾರೆ.

ಏನೆಲ್ಲಾ ವಿಶೇಷ

- ₹13 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಾಣ
- 2.55 ಲಕ್ಷ ಚದರ ಮೀಟರ್ ವಿಸ್ತೀರ್ಣ
- ವರ್ಷಕ್ಕೆ 2.50 ಕೋಟಿ ಜನ ಪ್ರಯಾಣಿಸಲು ಸೌಕರ್ಯ
- ಹೊರಗಿನ ವಾತಾವರಣಕ್ಕಿಂತ 2ರಿಂದ 3 ಡಿಗ್ರಿ ಕಡಿಮೆ ತಾಪಮಾನ
- ನಿಲ್ದಾಣಕ್ಕೆ ಶೇ 24.9ರಷ್ಟು ಸೌರವಿದ್ಯುತ್ ಬಳಕೆ
- 41.30 ಕೋಟಿ ಲೀಟರ್ ಮಳೆ ನೀರು ಸಂಗ್ರಹ ಸಾಮರ್ಥ್ಯ
- ಬಿದಿರು ಬಳಸಿ 923 ಕಿ.ಮೀ ಉದ್ದದ ಹಂದರ ನಿರ್ಮಾಣ
- 3,600ಕ್ಕೂ ಹೆಚ್ಚಿನ ಪ್ರಭೇದಗಳ ಸಸ್ಯಗಳಿರುವ ಉದ್ಯಾನ
- 1,200 ಕಾರುಗಳ ನಿಲುಗಡೆಗೆ ಸೌಲಭ್ಯ
- ಪ್ರವೇಶ ಮತ್ತು ನಿರ್ಗಮನಕ್ಕೆ ಪ್ರತ್ಯೇಕ ಬಸ್ ಪಥ

ಕಮಿಷನ್‌ಗಾಗಿ ಸರ್ಕಾರಿ ಹಣ ಹಾಕಿದ್ದೀರಾ: ಡಿಕೆಶಿ ಪ್ರಶ್ನೆ

ಬೆಂಗಳೂರು: 'ಕಮಿಷನ್ ಪಡೆಯಲು ಕೆಂಪೇಗೌಡ ಪ್ರತಿಮೆ ನಿರ್ಮಾಣಕ್ಕೆ ನೀವು ಸರ್ಕಾರದ ಹಣ ಹಾಕಿದ್ದೀರಾ' ಎಂದು ಬಿಜೆಪಿ ನಾಯಕರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸರ್ಕಾರ ಸೂಚನೆ ನೀಡಿದ್ದರೆ ವಿಮಾನ ನಿಲ್ದಾಣದವರೇ ಪ್ರತಿಮೆ ನಿರ್ಮಿಸುತ್ತಿದ್ದರು. ಅವರಿಗೆ (ಬಿಜೆಪಿಯವರಿಗೆ) ಕಮಿಷನ್ ಬೇಕಿತ್ತೋ ಅಥವಾ ಬೇರೆ ಕಾರಣಕ್ಕೋ ಅವರೇ ನಿರ್ಮಾಣ ಮಾಡಿದ್ದಾರೆ' ಎಂದು ದೂರಿದರು.

'ನಾವು (ಕಾಂಗ್ರೆಸ್) ಐದು ಎಕರೆ ಜಾಗವನ್ನು ಕೆಂಪೇಗೌಡ ಪ್ರಾಧಿಕಾರಕ್ಕೆ ನೀಡಿದ್ದೇವೆ. ಅಲ್ಲಿ ಒಂದು ಕಟ್ಟಡ ನಿರ್ಮಿಸಬಹುದಿತ್ತು. ಆದರೆ, ಬಿಜೆಪಿಯವರು ಅದ್ದೂರಿ ಕಾರ್ಯಕ್ರಮ ಮಾಡಲು, ಪ್ರಚಾರ ಪಡೆಯಲು ಈ ರೀತಿ ಮಾಡಿದ್ದಾರೆ' ಎಂದು ಆರೋಪಿಸಿದರು.

'ಬಿಜೆಪಿಯವರಿಗೆ ಸಂಸ್ಕಾರವೇ ಇಲ್ಲ. ಮಾಜಿ ಪ್ರಧಾನಿ, ಮಾಜಿ ಮುಖ್ಯಮಂತ್ರಿಗಳು, ಯಾರು ಕಾರ್ಯಕ್ರಮದಲ್ಲಿ ಇರಬೇಕು ಎಂಬುದೇ ಗೊತ್ತಿಲ್ಲ. ನಾವು ಪ್ರಧಾನಿಗೆ ಪತ್ರ ಬರೆದು, ಕೋವಿಡ್ ಕಾಲದ ಪರಿಹಾರದಿಂದ ಹಿಡಿದು ಅವರು ನೀಡಿದ್ದ ಭರವಸೆಗಳವರೆಗೆ ಹಲವು ಪ್ರಶ್ನೆ ಕೇಳಿದ್ದೆವು. ಅವರು ಈ ಪ್ರಶ್ನೆಗಳಿಗೆ ಉತ್ತರಿಸದೆ ಕೇವಲ ಪ್ರಮುಖ ನಾಯಕರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಹೋಗಿದ್ದಾರೆ. ಇದು ಡಬಲ್ ಎಂಜಿನ್ ಸರ್ಕಾರವಲ್ಲ, ಟ್ರಬಲ್ ಎಂಜಿನ್ ಸರ್ಕಾರ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಓಲಾ–ಉಬರ್ ಆಟೊ ದರ ನಾಳೆ ಮತ್ತೊಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ, ಉಬರ್ ಹಾಗೂ ರ್‍ಯಾಪಿಡೊ ಆಟೊರಿಕ್ಷಾ ದರ ನಿಗದಿ ಸಂಬಂಧ ಆ್ಯಪ್ ಆಧಾರಿತ ಕಂಪನಿಗಳು ಮತ್ತು ಆಟೊರಿಕ್ಷಾ ಚಾಲಕರ ಸಂಘಗಳ ಜತೆ ಸಾರಿಗೆ ಇಲಾಖೆ ಸೋಮವಾರ ಸಭೆ ಕರೆದಿದೆ.

ಹೈಕೋರ್ಟ್ ನಿರ್ದೇಶನದಂತೆ ಅ.29ರಂದು ಕಂಪನಿಗಳ ಮುಖ್ಯಸ್ಥರ ಜತೆ ಸಾರಿಗೆ ಅಧಿಕಾರಿಗಳು ಸಭೆ ನಡೆಸಿದ್ದರು. ಆದರೆ, ದರ ನಿಗದಿ ವಿಷಯದಲ್ಲಿ ಒಮ್ಮತ ಮೂಡಿರಲಿಲ್ಲ.

ನ.7ರಂದು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆದಾಗ ಸಾರಿಗೆ ಇಲಾಖೆ ಇನ್ನಷ್ಟು ದಿನ ಕಾಲಾವಕಾಶ ಕೇಳಿತ್ತು. ಮುಂದಿನ ವಿಚಾರಣೆ ನ.16ಕ್ಕೆ ನಿಗದಿಯಾಗಿದೆ. ಅಷ್ಟರಲ್ಲಿ ಹೈಕೋರ್ಟ್‌ಗೆ ವರದಿ ಸಿದ್ಧಪಡಿಸಲು ಮತ್ತೊಂದು ಸುತ್ತಿನ ಸಭೆಯನ್ನು ಸಾರಿಗೆ ಇಲಾಖೆ ಅಧಿಕಾರಿಗಳು ಕರೆದಿದ್ದಾರೆ.

ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆ ಒದಗಿಸುತ್ತಿರುವ ಅಗ್ರಿಗೇಟರ್ ಕಂಪನಿಗಳ ಮುಖ್ಯಸ್ಥರು, ಸಾರಿಗೆ ಇಲಾಖೆ ಆಯುಕ್ತರು, ಜಂಟಿ ಆಯುಕ್ತರು, ಆಟೊ ರಿಕ್ಷಾ ಯೂನಿಯನ್‌ಗಳ ಪ್ರತಿನಿಧಿಗಳು, ಆಟೊರಿಕ್ಷಾ ಗ್ರಾಹಕರ ಹಿತರಕ್ಷಣಾ ವೇದಿಕೆ ಪದಾಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ. ಸಾರಿಗೆ ಇಲಾಖೆ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ನೇತೃತ್ವದಲ್ಲಿ ಸಭೆ ನಡೆಯಲಿದೆ.

ಬೇಡಿಕೆಗೆ ತಕ್ಕಂತೆ ದರ ನಿಗದಿ ಮಾಡಿಕೊಳ್ಳಲು ಅವಕಾಶ ನೀಡಬೇಕು ಎಂದು ಕಂಪನಿಗಳು ಹಿಂದಿನ ಸಭೆಯಲ್ಲಿ ಪಟ್ಟು ಹಿಡಿದಿದ್ದವು. ಇದಕ್ಕೆ ಒಮ್ಮತ ಮೂಡದೆ ಈ ಮೊದಲು ಸಭೆ ಅಂತ್ಯಗೊಂಡಿತ್ತು.

ಸಾಮಾನ್ಯ ಆಟೊಗಳಿಗೆ ವಿಧಿಸಿದಂತೆ ದರ ನಿಗದಿಪಡಿಸಿದರೆ ತೆರಿಗೆ, ಚಾಲಕರಿಗೆ ನೀಡುವ ಪ್ರೋತ್ಸಾಹಧನ ಇನ್ನಿತರ ಸೇವೆ ಒದಗಿಸುವುದು ಕಷ್ಟ. ಆದ್ದರಿಂದ ಬೇಡಿಕೆ ತಕ್ಕಂತೆ ದರ ಪರಿಷ್ಕರಣೆಗೆ ಅವಕಾಶ ನೀಡಬೇಕು ಎಂದು ಕಂಪನಿಗಳು ಬೇಡಿಕೆ ಇಟ್ಟಿದ್ದವು. ಬೇಡಿಕೆ ಆಧರಿಸಿ ದರ ಪರಿಷ್ಕರಣೆ ಮಾಡಿಕೊಳ್ಳಲು ಅವಕಾಶ ನೀಡಿದರೆ ಪ್ರಯಾಣಿಕರಿಗೆ ಹೊರೆಯಾಗಲಿದೆ ಎಂಬ ಕಾರಣಕ್ಕೆ ಅಧಿಕಾರಿಗಳು ಒಪ್ಪಿರಲಿಲ್ಲ.

'ಹಿಂದುತ್ವದ ಹೆಸರಿನಲ್ಲಿ ವಂಚನೆ'

ಪ್ರಜಾವಾಣಿ ವಾರ್ತೆ



ಮಧು ಬಂಗಾರಪ್ಪ

ಮಂಗಳೂರು: 'ಕೋಮುಭಾವನೆ ಕೆರಳಿಸಿ ಧರ್ಮದ ಆಧಾರದಲ್ಲಿ ಜನರ ಮನಸುಗಳನ್ನು ಒಡೆಯುವುದು ಹೆಚ್ಚು ದಿನ ನಡೆಯುವುದಿಲ್ಲ. ಬಿಜೆಪಿಯು ಹಿಂದುತ್ವದ ಹೆಸರಿನಲ್ಲಿ ಹಿಂದೂಗಳಿಗೇ ವಂಚನೆ ಮಾಡುತ್ತಿದೆ ಎಂಬುದು ಜನರಿಗೂ ಅರ್ಥವಾಗಿದೆ. ಹಾಗಾಗಿ ಅವರ ಹಿಂದುತ್ವದ ಆರ್ಭಟ ಕಡಿಮೆ ಆಗಿದೆ' ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಮಧು ಬಂಗಾರಪ್ಪ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಪ್ರವೀಣ್ ನೆಟ್ಟಾರು ಹತ್ಯೆ ನಡೆದ ಸಂದರ್ಭದಲ್ಲಿ ಬಿಜೆಪಿ ಮುಖಂಡರನ್ನು ತರಾಟೆಗೆ ತೆಗೆದುಕೊಂಡಿದ್ದು ಅವರದೇ ಪಕ್ಷದವರು. ಯುವಜನರು ಬಿಜೆಪಿ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ' ಎಂದರು.

ದ್ವಾರನಕುಂಟೆ ಪಾತಣ್ಣ ಅವರ ಕಾದಂಬರಿ ಬಿಡುಗಡೆ

'ಪ್ರಜಾಪ್ರಭುತ್ವದ ಉಳಿವಿಗೆ ಪ್ರಜ್ಞಾವಂತರೇ ಆಸರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವದ ಆಶಯಗಳ ಉಳಿವಿಗಾಗಿ ಸಮಾಜಮುಖಿ ಚಿಂತನೆಯ ಪ್ರಜ್ಞಾವಂತರ ಅಗತ್ಯವಿದೆ' ಎಂದು ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಅವರು ಪ್ರತಿಪಾದಿಸಿದರು.

ಕರ್ನಾಟಕ ವಿಕಾಸ ರಂಗ ಶನಿವಾರ ಹಮ್ಮಿಕೊಂಡಿದ್ದ ದ್ವಾರನಕುಂಟೆ ಪಾತಣ್ಣ ಅವರ 'ಕತ್ತಲ ದಾರಿ ದೂರ' ಕಾದಂಬರಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಪ್ರಸ್ತುತ ಸನ್ನಿವೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಕತ್ತಲಲ್ಲಿದೆ. ಪ್ರಭುತ್ವದ ವಿರುದ್ಧ ಧ್ವನಿ ಎತ್ತುವವರನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಸತ್ಯವನ್ನು ನೇರವಾಗಿ ಹೇಳುವ ಧೈರ್ಯವನ್ನು ಲೇಖಕರು ಪ್ರದರ್ಶಿಸಬೇಕಿದೆ. ಅಂತಹ ಕೆಲಸವನ್ನು ಪಾತಣ್ಣ ನಿಷ್ಠುರ ಬರಹದ ಮೂಲಕ ಮಾಡಿದ್ದಾರೆ. ಒತ್ತಡಗಳಿದ್ದರೂ ಅನ್ಯಾಯದ ವಿರುದ್ಧ ಪ್ರತಿಭಟನಾ ಧ್ವನಿ ಗಟ್ಟಿಗೊಳಿಸುವ ಪ್ರಯತ್ನ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಕೆಲ ಸಿದ್ಧಾಂತವಾದಿಗಳು ಶಾಂತಿಯ ಸಮಯದಲ್ಲೂ ಕ್ರಾಂತಿಯ ಜಪ ಮಾಡುತ್ತಿದ್ದಾರೆ. ಇಂತಹ ಸುದ್ದಿಶೂರರು ಪ್ರಶಸ್ತಿ, ಸನ್ಮಾನ, ಸ್ಥಾನಮಾನಗಳಿಗಾಗಿ ಬರಹ ಮೀಸಲಿಟ್ಟಿದ್ದಾರೆ. ಕಣ್ಣೆದುರಿಗೆ ಅನ್ಯಾಯವಾಗುತ್ತಿದ್ದರೂ ಕಣ್ಣು ತೆರೆಯುವುದಿಲ್ಲ. ತುಟಿಬಿಚ್ಚುವುದಿಲ್ಲ ಎಂದರು.

ಕಾರ್ಯಕ್ರಮದಲ್ಲಿ ದ್ವಾರನಕುಂಟೆ ಪಾತಣ್ಣ ಅವರ 'ಕತ್ತಲು ದಾರಿ ದೂರ' ಕಾದಂಬರಿಯನ್ನು ಸಾಹಿತಿ ಎಸ್‌.ಜಿ.ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಸಾಹಿತಿಗಳಾದ ವಿಜಯಾ, ಬಂಜಗೆರೆ ಜಯಪ್ರಕಾಶ, ಕರ್ನಾಟಕ ವಿಕಾಸ ರಂಗ ಅಧ್ಯಕ್ಷ ವ.ಚ.ಚನ್ನೇಗೌಡ ಇದ್ದರು — ಪ್ರಜಾವಾಣಿ ಚಿತ್ರ

ದೇಶದಲ್ಲಿ ಇಂದು ಅಘೋಷಿತ ತುರ್ತುಪರಿಸ್ಥಿತಿ ಇದೆ. ವ್ಯವಸ್ಥೆಯ ವಿರುದ್ಧದ ವೇದಿಕೆ ಮೇಲಿನ ಭಾಷಣ, ಬರೆಯುವ ಬರಹವನ್ನೂ ಪರೋಕ್ಷವಾಗಿ ನಿಯಂತ್ರಿಸುವ ಕೆಲಸಗಳು ನಿರಂತರ ನಡೆಯುತ್ತಿವೆ. ಮಾತುಕೇಳದವರ ಜೀವಕ್ಕೂ ಕುತ್ತು ತಂದಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಚಿಂತಕ ಬಂಜಗೆರೆ ಜಯಪ್ರಕಾಶ ಅವರು, ಮಾತೃಭಾಷೆಯ ಬರವಣಿಗೆ ಅತ್ಯಂತ ಪರಿಣಾಮಕಾರಿಯಾಗಿ ಜನರನ್ನು ತಲುಪುತ್ತದೆ. ಆಯ್ಕೆಯ ವಿಷಯ ವಸ್ತು ಗಟ್ಟಿಯಾಗಿರಬೇಕು. ವಿಚಾರಗಳನ್ನು ನೇರವಾಗಿ ಹೇಳಬೇಕು. ಓಲೈಕೆಯ ಮನೋಭಾವ ಇರಬಾರದು ಎಂದು ಹೇಳಿದರು.

ನಾರ್ಟಕ ವಿಕಾಸ ರಂಗ ಅಧ್ಯಕ್ಷ ವ.ಚ. ಚನ್ನೇಗೌಡ ಪ್ರಸ್ತಾವಿಕ ಮಾತನಾಡಿದರು. ಸಾಹಿತಿ ಡಾ.ವಿಜಯಾ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಪಾರ್ವತೀಶ ಬಿಳಿದಾಳೆ, ಲೇಖಕ ದ್ವಾರನಕುಂಟೆ ಪಾತಣ್ಣ ಉಪಸ್ಥಿತರಿದ್ದರು.

ಪೀಣ್ಯ ಕೈಗಾರಿಕಾ ಸಂಘದಿಂದ ಉದ್ಯೋಗ ಮೇಳ

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: 'ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿದೆ. ಅದಕ್ಕೆ ತಕ್ಕಂತೆ ಯುವ ಸಮೂಹಕ್ಕೆ ತರಬೇತಿ ನೀಡಿ ತಯಾರು ಮಾಡಬೇಕಾಗಿದೆ' ಎಂದು ಶಾಸಕ ಆರ್.ಮಂಜುನಾಥ್ ಅಭಿಪ್ರಾಯಪಟ್ಟರು.

ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ಸಹಯೋಗದಲ್ಲಿ ಪೀಣ್ಯ ಕೈಗಾರಿಕಾ ಸಂಘ ಆಯೋಜಿಸಿದ್ದ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಯಾವ ರೀತಿಯ ಉದ್ಯೋಗಗಳು ಸೃಷ್ಟಿಯಾಗುತ್ತಿವೆ ಎಂಬುದನ್ನು ತಿಳಿದುಕೊಂಡು ತರಬೇತಿ ನೀಡಬೇಕು. ತರಬೇತಿ ಪಡೆದವರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ಸಿಗುವಂತಾಗಬೇಕು ಎಂದು ಅವರು ಹೇಳಿದರು.

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಅಧ್ಯಕ್ಷ ನರಸಿಂಹಮೂರ್ತಿ ಅವರು, 'ಭಾರತದಲ್ಲಿ ಕೇವಲ 6 ಕೋಟಿ ಕೈಗಾರಿಕೆಗಳು ನೋಂದಣಿಯಾಗಿವೆ. 70 ಕೋಟಿ ಕಾರ್ಮಿಕರಿದ್ದು, ಹೆಚ್ಚಿನ ಕೈಗಾರಿಕೆಗಳು ಸ್ಥಾಪನೆಯಾದರೆ ಎಲ್ಲರಿಗೂ ಉದ್ಯೋಗ ನೀಡಬಹುದು' ಎಂದರು.

ಕೌಶಲಾಭಿವೃದ್ಧಿ ಇಲಾಖೆ ಆಯುಕ್ತ ಅಶ್ವಿನ್‌ಗೌಡ ಅವರು ಮಾತನಾಡಿದರು.

ಇಲ್ಲಿ ನಡೆದ ಉದ್ಯೋಗಮೇಳದಲ್ಲಿ ನೂರಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದವು.

ಉದ್ಯೋಗ ಮೇಳವನ್ನು ಶಾಸಕ ಆರ್‌.ಮಂಜುನಾಥ್ ಉದ್ಘಾಟಿಸಿದರು. ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಎಚ್‌.ಮಂಜುನಾಥ್, ಹಿರಿಯ ಉಪಾಧ್ಯಕ್ಷ ಆರೀಫ್, ಉಪಾಧ್ಯಕ್ಷ ಆರ್‌.ಶಿವಕುಮಾರ್, ಕಾರ್ಯದರ್ಶಿ ಎಂ. ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಎಚ್‌.ಕೆ. ಮಲ್ಲೇಶ್‌ಗೌಡ, ಖಜಾಂಚಿ ಬಿ.ಸಿ. ತಿಪ್ಪೇಸ್ವಾಮಿ, ಜಂಟಿ ಖಜಾಂಚಿ ರಮೇಶ್ ಇದ್ದರು

ಕಡಲೆಕಾಯಿ–ಬೆಲ್ಲ ಮಾರಾಟ ಜೋರು

ಕಡಲೆಕಾಯಿ ಪರಿಷೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಮಲ್ಲೇಶ್ವರ ಗೆಳೆಯರ ಬಳಗವು ಮಲ್ಲೇಶ್ವರದಲ್ಲಿ ಆಯೋಜಿಸಿರುವ 6ನೇ ವರ್ಷದ ಕಡಲೆಕಾಯಿ ಪರಿಷೆಗೆ ಶನಿವಾರ ಚಾಲನೆ ನೀಡಲಾಯಿತು. ಸೋಮವಾರದವರೆಗೆ ಪರಿಷೆ ನಡೆಯಲಿದೆ. ಮಲ್ಲೇಶ್ವರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ವಿವಿಧ ತಳಿಗಳ ಕಡಲೆಕಾಯಿಗಳ ರಾಶಿಗಳ ಸಾಲು, ಹಲವು ಬಗೆಯ ತಿಂಡಿ–ತಿನಿಸುಗಳು, ಮಾರಾಟ ಮಳಿಗೆಗಳು ಕೈಬೀಸಿ ಕರೆಯುತ್ತಿವೆ. ದೇಗುಲ ಸುತ್ತಲಿನ ರಸ್ತೆಗಳು ತಳಿರು ತೋರಣಗಳಿಂದ ಅಲಂಕೃತವಾಗಿವೆ. ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಗರ್ಭಗುಡಿ ಹಾಗೂ ಒಳಾಂಗಣವನ್ನು ಆರು ಮೂಟೆ ಕಡಲೆಕಾಯಿಗಳಿಂದ ಅಲಂಕರಿಸಿರುವುದು ವಿಶೇಷ.

'ಆಂಧ್ರಪ್ರದೇಶದ ಓಂಗಲ ಎಂಬ ದೇಶಿಯ ತಳಿ ಹಸುಗಳನ್ನು ದತ್ತು ಪಡೆದಿದ್ದು, ಕಾಡು ಮಲ್ಲೇಶ್ವರ ಬಳಗ ಪೋಷಿಸಲಿದೆ. ಮುಂದಿನ ದಿನಗಳಲ್ಲಿ ಅನಾಥ ಗೋವುಗಳನ್ನು ತಂದು ಸಾಕಲಾಗುವುದು' ಎಂದು ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂ ತಿಳಿಸಿದರು.

ಮಲ್ಲೇಶ್ವರದಲ್ಲಿ ನಡೆದ ಪರಿಷೆಯಲ್ಲಿ ಯುವತಿಯರು ಕಡಲೆಕಾಯಿ ಖರೀದಿಸಿದರು (ಎಡಚಿತ್ರ) ಗಂಗಮ್ಮ ದೇವಿಗೆ ಕಡಲೆಕಾಯಿಯಿಂದ ಅಲಂಕಾರ ಮಾಡಲಾಗಿತ್ತು.

'ದೇವರ ಮೇಲೆ ಹಾಕಿರುವ ಕಡಲೆಕಾಯಿಗಳನ್ನು ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಪ್ರಸಾದದ ರೂಪದಲ್ಲಿ ನೀಡುತ್ತಿದ್ದೇವೆ' ಎಂದು ಪ್ರಧಾನ ಅರ್ಚಕ ಗಂಗಾಧರ ದೀಕ್ಷಿತ ಮಾಹಿತಿ ನೀಡಿದರು.

ಹೊರ ರಾಜ್ಯದ ಶೇಂಗಾ: ತಮಿಳುನಾಡು, ಆಂಧ್ರಪ್ರದೇಶದ ವಿವಿಧೆಡೆಯಿಂದಲೂ ಹಾಲ್ಗಡಲೆ, ಕೆಂಪುಕಡಲೆ ಸೇರಿ ಎರಡು, ಮೂರು ಹಾಗೂ ನಾಲ್ಕು ಬೀಜದ ನಾಟಿ, ಹೈಬ್ರಿಡ್ ತಳಿಗಳ ಕಡಲೆಕಾಯಿಗಳು ಬಂದಿವೆ. ಸೇರಿಗೆ ₹30 ಹಾಗೂ ₹40 ರಂತೆ ಮಾರಾಟ ಮಾಡಲಾಗುತ್ತಿದೆ.

ಯಲಹಂಕದಲ್ಲೂ ಪರಿಷೆ

ಯಲಹಂಕ: ವೆಂಕಟಾಲದ ಅಭಯ ಮಹಾಗಣಪತಿ ದೇವಾಲಯದ 10ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿರುವ ಎರಡು ದಿನಗಳ ಕಡಲೆಕಾಯಿ ಪರಿಷೆಗೆ ಶನಿವಾರ ಚಾಲನೆ ಸಿಕ್ಕಿತು.

ಜಾವಗಲ್, ಚಿಂತಾಮಣಿ, ದೇವನಹಳ್ಳಿ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಹೊಸಕೋಟೆ, ಗೌರಿಬಿದನೂರು ಸೇರಿದಂತೆ ವಿವಿಧ ತಾಲ್ಲೂಕುಗಳ ರೈತರು ವಿವಿಧ ತಳಿಗಳ ಕಡಲೇಕಾಯಿಗಳನ್ನು ಪರಿಷೆಗೆ ಮಾರಾಟಕ್ಕೆ ತಂದಿದ್ದರು. ಆದರೆ ಮಳೆ ಅಡ್ಡಿ ಪಡಿಸಿತು. ಸಂಜೆ ತುಸು ಬಿಡುವು ನೀಡಿತು. ಬಸವನಗುಡಿ ಕಡಲೇಕಾಯಿ ಪರಿಷೆ ಮಾದರಿಯಾಗಿ 10 ವರ್ಷಗಳಿಂದ ಪರಿಷೆ ನಡೆಯುತ್ತಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Selling

Others

SKODA LAURA 2011 Silver Single Owner Showroom Condition No Accidents No Repairs Required Contact: 9820748717

Hyundai

DISPOSAL OF HYUNDAI I10 ASTA KA-01 MG-6748 31-03-2011. Quotation with & without R.C. in a week Inspection at Insured Premises. Contact-8169857435, SURVEYOR-9845079529

PERSONAL

Change of Name

JC671570X SUB KACHHATIA HARESH MANJI 2ATC DAUGHTER NAME RECORDS ANKITA to KACHHATIA ANKITA HARESH NOTARY BM CHANDRASHEKAR

CHANGE OF NAME

I, AZRAA D/o. Khader Shamim Sait, R/o. SIMS Legacy, Flat No. 201, No. 7, 4th 'A' Cross, HRBR Layout 2nd Block, Kalyan Nagar, Bengaluru - 560043 hereby solemnly affirm and state an oath as follows:In my Educational Certificates and other relevant documents is mentioned my name AZRAA. I hereby declare that I have changed my name from AZRAA to AZRAA SHAMIM. I know my future deal with my name as AZRAA SHAMIM vide affidavit dated. 12.11.2022 before Shri. Uday Kumar K, Advocate & Notary Public, Bengaluru.

JC671570X SUB KACHHATIA HARESH MANJI 2ATC FATHER NAME RECORDS MANJI to KACHHATIA MANJIBHAI KESHAVBHAI NOTARY BM CHANDRASHEKAR

JC671570X SUB KACHHATIA HARESH MANJI 2ATC MOTHER NAME RECORDS PAMI BEN to KACHHATIYA PAMIBEN MANJI NOTARY BM CHANDRASHEKAR

JC671570X SUB KACHHATIA HARESH MANJI 2ATC DAUGHTER NAME RECORDS MINAKSHI to MINAKSHI KACHHATIA NOTARY BM CHANDRASHEKAR

JC671570X SUB KACHHATIA HARESH MANJI 2ATC DAUGHTER NAME RECORDS NISHA to KACHHATIA NISHA NOTARY BM CHANDRASHEKAR

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

Lost

RAY CHEMICALS PVT. LTD.
KIADB Documents Lost
a) Allotment Letter dtd. 13.11.2009
b) Possession Certificate dtd.: 19.02.2011
c) Letter from RCPL dtd.: 10.12.2012
d) KIADB Letter dtd.: 17.05.2013
e) Letter from RCPL 3 nos. dtd.: 22.06.2017 / 10.07.2017 / 17.08.2017
h) Confirmatory Letter and PC related to above 3 nos. RCPL / AS / KIADB / 2011, Dtd.: 10.10. 2011 / 05.07.2011 / 05.07.2011
i) Payment receipts.
If found please contact:
98450 55636

MATRIMONIAL

Brides Wanted

Divorcee

LOOKING FOR a slim fare 35- 40 yrs divorcee lady 'cast no bar' For a love & caring 45 yrs healthy fun loving in Bangalore. 63644 55655, E-55655,'>mail: sistlam1952@gmail.com

Hindu

39 VEGETARIAN Engineer Manager MNC seeks vegetarian bride. CAST NO BAR 8431100739 srininag82@gmail.com

MORE Classifieds Ads on Subsequent Pages

WANTED BRIDE
Arya Vysya, 33 years, Boy, BCA, Works for MNC, belonging to Upper Middle Class Family at Bangalore seeks a suitable Arya Vysya girl with a Degree Qualification working / non-working.
Boy's Star: Aswini 1st Padha, Swagothra: Nabhilla.
Contact: 99862 06654

Kannada

ವಧು ಬೇಕಾಗಿದೆ
5'.9", 44 ವರ್ಷ, ಒಕ್ಕಲಿಗ – ಗಂಗಾಟ್ಕರ್, ಬಿಇ (ಇ&ಸಿ) ಪಿಜಿಡಿಎಂ, ಸ್ವಂತ ಉದ್ಯಮ ಹೊಂದಿರುವ ಫೈನಾನ್ಷಿಯಲಿ ಸೌಂಡ್, ಸುಂದರ ವರನಿಗೆ, ಸೂಕ್ತ 33–39 ವರ್ಷದ, ವಿದ್ಯಾವಂತೆ, ಒಳ್ಳೆಯ ಸಂಸ್ಕೃತಿ ಹೊಂದಿರುವ ಸುಂದರ ವಧು ಬೇಕಾಗಿದೆ.
9019538160
9482043271
080-22420562

Malayalam

ATHEIST 44/168CM/MSW Kerala invites proposals from educated, affable, virtuous girls. Email: marriageinearth@yahoo.com WhatsApp: +919526703704

Grooms Wanted

Hindu

LOOKING A Groom. Bride 31, fair, 5.4 ft. Hindu Bhandari, MBA, Panaji, Goa. working IT Co. Bangalore. Partner should be from Goa Settled in Bangalore. IT professional / equivalent. Call / E-mail : 9822589850/ shliwa62@gmail.com

WANTED GROOM
Arya Vysya, 30 years, Girl, BE, Works for MNC at Bangalore seeks a suitable Arya Vysya boy settled in Bangalore with a Degree BE/MS/MBA
Girl's Star: Jesta 3rd Padha, Swagothra: Nabhilla.
Contact: 99862 06654

Muslim

SUNNI MUSLIM 28/5'3' slim girl BE/MBA Assistant Manager MNC in Bangalore, Seeks Educated Settled Boy. Pref. Whatsapp. 9513906784

Matrimonial Bureaus

WANTED BRIDES SECOND MARRIAGE
1) Caste No Bar, Hindu, Divorcee, 40 years, 5'10", MBBS MD, Radiology.
2) Caste No Bar, Hindu, Divorcee, 40 years, 5'10", B.Tech, MNC, Salary Rs. 30 LPA.
3) Caste No Bar, Hindu, Divorcee, 34 years, M.Tech,
Contact USHODHAYA: 9611919477/ 9886884291

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಹಿಮಾಚಲ ಪ್ರದೇಶ ಶೇ 65.92ರಷ್ಟು ಮತದಾನ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಶನಿವಾರ ಸಂಜೆ 5 ಗಂಟೆಯವರೆಗೆ ಶೇ 65.92ರಷ್ಟು ಮತದಾನವಾಗಿದೆ ಎಂದು ಚುನಾವಣಾ ಆಯೋಗವು ತಿಳಿಸಿದೆ. ಎಷ್ಟು ಮತದಾನ ಆಗಿದೆ ಎಂಬ ನಿಖರ ಮಾಹಿತಿ ಇನ್ನಷ್ಟೇ ತಿಳಿಯಬೇಕಿದೆ. 2017ರ ಚುನಾವಣೆಯಲ್ಲಿ ಶೇ 74.6ರಷ್ಟು ಮತದಾನ ಆಗಿತ್ತು.

ಹಿಮಾಚಲ ಪ್ರದೇಶದಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ. 1985ರ ಬಳಿಕ, ಈ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪರ್ಯಾಯವಾಗಿ ಆಡಳಿತ ನಡೆಸಿವೆ. ಪ್ರತಿ ಬಾರಿಯೂ ಆಡಳಿತ ಪಕ್ಷವನ್ನು ಜನರು ಸೋಲಿಸಿದ್ದಾರೆ. ಈ ಪ್ರವೃತ್ತಿಯನ್ನು ಬದಲಾಯಿಸಿ ದಾಖಲೆ ಸೃಷ್ಟಿಸುವ ಉಮೇದಿನಲ್ಲಿ ಬಿಜೆಪಿ ಇದೆ. ಆದರೆ, ಈವರೆಗಿನ ಪ್ರವೃತ್ತಿಯಂತೆ, ಮತ್ತೆ ಅಧಿಕಾರಕ್ಕೆ ಏರುವ ಉತ್ಸಾಹ ಕಾಂಗ್ರೆಸ್ ಪಕ್ಷದಲ್ಲಿ ಇದೆ.

ರಾಜ್ಯದ ಎಲ್ಲೆಡೆ ಮತದಾನ ಶಾಂತಿಯುತವಾಗಿ ನಡೆದಿದೆ.

ಗುಜರಾತ್ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ ● ಹಲವು ಕೊಡುಗೆಗಳ ಭರವಸೆ

10 ಲಕ್ಷ ನೌಕರಿ ಸೃಷ್ಟಿಯ ವಾಗ್ದಾನ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯನ್ನು ಶನಿವಾರ ಪ್ರಕಟಿಸಿದೆ. ಸರ್ಕಾರಿ ಮತ್ತು ಅರೆಸರ್ಕಾರಿ ಇಲಾಖೆಗಳಲ್ಲಿ 10 ಲಕ್ಷ ಉದ್ಯೋಗ ಸೃಷ್ಟಿ, ₹500ಕ್ಕೆ ಅಡುಗೆ ಅನಿಲ ಸಿಲಿಂಡರ್, ಪ್ರತಿ ಮನೆಗೆ ತಿಂಗಳಿಗೆ 300 ಯೂನಿಟ್ ಉಚಿತ ವಿದ್ಯುತ್ ಪ್ರಣಾಳಿಕೆಯಲ್ಲಿ ಇರುವ ಮುಖ್ಯ ಭರವಸೆಗಳಾಗಿವೆ.

ನಿರುದ್ಯೋಗಿಗಳಿಗೆ ತಿಂಗಳಿಗೆ ₹3,000 ಭತ್ಯೆ, ಅಂಗವಿಕಲರು, ವಿಧವೆಯರು, ಹಿರಿಯ ನಾಗರಿಕರು ಮತ್ತು ಅಗತ್ಯ ಇರುವ ಮಹಿಳೆಯರಿಗೆ ₹2,000 ಮಾಸಾಶನ, ಮೀನುಗಾರರ ₹3 ಲಕ್ಷ ವರೆಗಿನ ಸಾಲ ಮನ್ನಾ ಮಾಡುವ ವಾಗ್ದಾನವನ್ನೂ ಪ್ರಣಾಳಿಕೆಯು ನೀಡಿದೆ.

ರಾಜಸ್ಥಾನ ಮುಖ್ಯಮಂತ್ರಿ ಮತ್ತು ಗುಜರಾತ್ ಚುನಾವಣೆಗೆ ಕಾಂಗ್ರೆಸ್ ವೀಕ್ಷಕರಾಗಿರುವ ಅಶೋಕ್ ಗೆಹಲೋತ್ ಅವರು ಪಕ್ಷದ ರಾಜ್ಯ ಘಟಕದ ಕೇಂದ್ರ ಕಚೇರಿಯಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು. 65 ಲಕ್ಷಕ್ಕೂ ಹೆಚ್ಚು ಜನರನ್ನು ಸಂಪರ್ಕಿಸಿ ಅವರ ಜೊತೆ ಸಂವಹನ ನಡೆಸಿ ಈ ಪ್ರಣಾಳಿಕೆ ಸಿದ್ಧಪಡಿಸಲಾಗಿದೆ ಎಂದು ಪ್ರಣಾಳಿಕೆ ಸಮಿತಿ ಅಧ್ಯಕ್ಷ ದೀಪಕ್ ಬಬರಿಯಾ ಹೇಳಿದ್ದಾರೆ.

ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರ ಸೂಚನೆಯಂತೆ, ಪಕ್ಷವು ಅಧಿಕಾರಕ್ಕೆ ಬಂದ ಬಳಿಕ ಪ್ರಣಾಳಿಕೆ ಅನುಷ್ಠಾನ ಆಯೋಗವನ್ನು ರಚಿಸಲಿದ್ದೇವೆ. ಸರ್ಕಾರ ರಚನೆಯಾದ ಕೂಡಲೇ ಪ್ರಣಾಳಿಕೆಯು ಸರ್ಕಾರದ ಅಧಿಕೃತ ಕಾರ್ಯಸೂಚಿ ಆಗಲಿದೆ ಎಂದೂ ಬಬರಿಯಾ ತಿಳಿಸಿದ್ದಾರೆ.

2002ರ ಗುಜರಾತ್ ಗಲಭೆ ಸಂದರ್ಭದಲ್ಲಿ ಬಿಲ್ಕಿಸ್ ಬಾನು ಅವರ ಮೇಲೆ ಅತ್ಯಾಚಾರ ಎಸಗಿ ಅವರ ಕುಟುಂಬದವರನ್ನು ಹತ್ಯೆ ಮಾಡಿದ 11 ಹಂತಕರ ಶಿಕ್ಷೆಯನ್ನು ಕಡಿತ ಮಾಡಿ, ಬಿಡುಗಡೆಗೊಳಿಸಿದ ನಿರ್ಧಾರವನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ಕಾಂಗ್ರೆಸ್ ಹೇಳಿದೆ.

ಬಿಜೆಪಿಯಲ್ಲಿ ಬಂಡಾಯ?: ಬಿಜೆಪಿ ಟಿಕೆಟ್ ದೊರೆಯದ ಒಬ್ಬ ಶಾಸಕ ಮತ್ತು ನಾಲ್ವರು ಮಾಜಿ ಶಾಸಕರು ಬಂಡಾಯದ ಬೆದರಿಕೆ ಒಡ್ಡಿದ್ದಾರೆ. ಪಕ್ಷೇತರರಾಗಿ ಕಣಕ್ಕೆ ಇಳಿಯುವುದಾಗಿ ಹೇಳಿದ್ದಾರೆ. ಶಾಸಕ ಹರ್ಷ ವಾಸವ ಅವರು ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರವನ್ನೂ ಸಲ್ಲಿಸಿದ್ದಾರೆ. ವಾಸವ ಅವರು ಗುಜರಾತ್ ಎಸ್‌ಟಿ ಮೋರ್ಚಾದ ಅಧ್ಯಕ್ಷರಾಗಿದ್ದಾರೆ.

‘ಮೋದಿ ಸ್ಟೇಡಿಯಂಗೆ ಪಟೇಲ್ ಹೆಸರು’

ಅಧಿಕಾರಕ್ಕೆ ಬಂದರೆ, ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಸ್ಟೇಡಿಯಂನ ಹೆಸರನ್ನು ಬದಲಾಯಿಸುವುದಾಗಿ ಕಾಂಗ್ರೆಸ್ ಪಕ್ಷವು ವಾಗ್ದಾನ ಮಾಡಿದೆ. ಈ ಕ್ರೀಡಾಂಗಣದ ಹೆಸರನ್ನು ಸರ್ದಾರ್ ಪಟೇಲ್ ಸ್ಟೇಡಿಯಂ ಎಂದು ಬದಲಾಯಿಸುವುದಾಗಿ ಪಕ್ಷವು ಹೇಳಿದೆ.

‘ಇಂದು ಕರಮ್‌ಸದ್‌ನ (ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಹುಟ್ಟೂರು) ಕೆಲವು ಕಾರ್ಯಕರ್ತರು ಬಂದು ಸ್ಟೇಡಿಯಂನ ಮೂಲ ಹೆಸರನ್ನೇ ಉಳಿಸಿಕೊಳ್ಳಬೇಕು ಎಂದು ಮನವಿಯೊಂದನ್ನು ಕೊಟ್ಟಿದ್ದಾರೆ’ ಎಂದು ಬಬರಿಯಾ ಹೇಳಿದ್ದಾರೆ.

ಸರ್ದಾರ್ ಪಟೇಲ್ ಅವರ ವ್ಯಕ್ತಿತ್ವವು ಮೋದಿ ಅವರ ವ್ಯಕ್ತಿತ್ವಕ್ಕಿಂತ ಬಹಳ ದೊಡ್ಡದು. ಪಟೇಲ್ ಅವರ ಹೆಸರು ಬದಲಿಸಿ ತಮ್ಮ ಹೆಸರು ಇರಿಸಿಕೊಳ್ಳಲು ಮೋದಿ ಅವರಿಗೆ ನಾಚಿಕೆ ಆಗಬೇಕು ಎಂದು ಕಾಂಗ್ರೆಸ್ ಮುಖಂಡ ಮಧುಸೂದನ ಮಿಸ್ತ್ರಿ ಹೇಳಿದ್ದಾರೆ. ‘ಪಟೇಲ್ ಅವರ ಸಮಕ್ಕೆ ತಾವು ಇರಬೇಕು ಎಂಬ ಕಾರಣಕ್ಕೆ ಮೋದಿ ಅವರು ಸ್ಟೇಡಿಯಂನ ಹೆಸರು ಬದಲಾಯಿಸಿದರು. ಮೋದಿ ಅವರು ತಮ್ಮನ್ನು ಪಟೇಲ್ ಅವರೊಂದಿಗೆ ಹೋಲಿಸಿಕೊಳ್ಳುತ್ತಿದ್ದರೂ ಮೋದಿ ಅವರು ಪಟೇಲ್ ಅವರ ಹತ್ತಿರಕ್ಕೂ ಬರುವುದಿಲ್ಲ’ ಎಂದು ಮಿಸ್ತ್ರಿ ಹೇಳಿದ್ದಾರೆ.

ಪ್ರಣಾಳಿಕೆಯಲ್ಲಿ ಏನಿದೆ?

- ಸರ್ಕಾರಿ ಆಸ್ಪತ್ರೆಗಳಲ್ಲಿ ₹10 ಲಕ್ಷದವರೆಗಿನ ಚಿಕಿತ್ಸೆ ಉಚಿತ
- ಅರ್ಹ ವಿದ್ಯಾರ್ಥಿಗಳಿಗೆ ₹20 ಸಾವಿರದವರೆಗೆ ಶಿಷ್ಯವೇತನ
- ಆದಾಯ ತೆರಿಗೆ ಪಾವತಿಸುವ ವೇತನದಾರರು ಮತ್ತು ಇತರ ವೃತ್ತಿಪರರಿಗೆ ವೃತ್ತಿಪರ ತೆರಿಗೆಯಿಂದ ವಿನಾಯಿತಿ
- ಗೋವುಗಳ ರಕ್ಷಣೆ ಮತ್ತು ಗೋಶಾಲೆಗಳ ನಿರ್ಮಾಣಕ್ಕಾಗಿ ₹1,000 ಕೋಟಿ ಮೀಸಲು
- ನೇಮಕಾತಿ ಅಕ್ರಮ ತಡೆಗಾಗಿ ವಿಶೇಷ ಕಾಯ್ದೆ ಜಾರಿ, ತ್ವರಿತಗತಿ ನ್ಯಾಯಾಲಯ ಸ್ಥಾಪನೆ

‘ಪಟೇಲ್ ಕುರಿತು ಮಾತನಾಡಲು ನೈತಿಕತೆ ಇಲ್ಲ’

ಭಾರತದ ಮೊದಲ ಗೃಹ ಸಚಿವ ಮತ್ತು ಉಪಪ್ರಧಾನಿಯಾಗಿದ್ದ ಪಟೇಲ್ ಅವರ ಬಗ್ಗೆ ಮಾತನಾಡುವ ನೈತಿಕ ಹಕ್ಕು ಕಾಂಗ್ರೆಸ್‌ಗೆ ಇಲ್ಲ ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

ಸ್ವಾತಂತ್ರ್ಯ ಬಂದ ಬಳಿಕ ಪ್ರಧಾನಿ ಹುದ್ದೆಗೆ ಎಲ್ಲರ ಆಯ್ಕೆ ಸರ್ದಾರ್ ಪಟೇಲ್ ಆಗಿದ್ದರು. ಆದರೆ, ಜವಾಹರಲಾಲ್ ನೆಹರೂ ಪ್ರಧಾನಿ ಆದರು. ಪಟೇಲ್ ಅವರ ಹೆಸರಿನಲ್ಲಿ 8-10 ವರ್ಷ ಕಾಲ ಕಾಂಗ್ರೆಸ್ ಏನನ್ನೂ ಮಾಡಿರಲಿಲ್ಲ. 1958–60ರ ಬಳಿಕವೇ ಏನನ್ನಾದರೂ ಮಾಡಿದರು. ಕಾಂಗ್ರೆಸ್‌ನ ಯಾವುದೇ ಮುಖಂಡ ಸರ್ದಾರ್ ಪ್ರತಿಮೆಗೆ ಭೇಟಿ ನೀಡಿದ್ದು ನನಗೆ ಗೊತ್ತಿಲ್ಲ ಎಂದು ತ್ರಿವೇದಿ ಹೇಳಿದ್ದಾರೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ಸುದ್ದಿ 2 ನಿಮಿಷ

ಕಾನೂನು ದಬ್ಬಾಳಿಕೆಯ ಸಾಧನವಾಗದಿರಲಿ: ಸಿಜೆಐ

ನವದೆಹಲಿ (ಪಿಟಿಐ): ಕಾನೂನು ದಬ್ಬಾಳಿಕೆಯ ಸಾಧನವಾಗದೆ ನ್ಯಾಯದ ಸಾಧನವಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಕೇವಲ ನ್ಯಾಯಮೂರ್ತಿಗಳದ್ದಾಗದೆ ನಿರ್ಧಾರ ತೆಗೆದುಕೊಳ್ಳುವ ಪ್ರತಿಯೊಬ್ಬರದ್ದಾಗಬೇಕು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಶನಿವಾರ ಹೇಳಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ ಶೃಂಗಸಭೆಯಲ್ಲಿ ಮಾತನಾಡಿದ ಅವರು, ‘ನಾಗರಿಕರು ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದು ಉತ್ತಮ. ಆದರೆ ನಾವು ನ್ಯಾಯಾಲಯಗಳ ಮಿತಿಗಳನ್ನು ಮತ್ತು ಸಾಮರ್ಥ್ಯವನ್ನು ತಿಳಿದುಕೊಂಡಿರಬೇಕು’ ಎಂದರು.

‘ಕೆಲವೊಮ್ಮೆ ಕಾನೂನು ಮತ್ತು ನ್ಯಾಯ ಒಂದೇ ರೇಖೆಯ ಪಥವನ್ನು ಅನುಸರಿಸುವುದಿಲ್ಲ. ಕಾನೂನು ನ್ಯಾಯದ ಸಾಧನವೂ ಆಗಬಹುದು ದಬ್ಬಾಳಿಕೆಯ ಸಾಧನವೂ ಆಗಬಹುದು. ಹಿಂದೆ ವಸಹಾತುಶಾಹಿ ಕಾಲದಲ್ಲಿ ಇಂದು ಪುಸ್ತಕಗಳಲ್ಲಿರುವ ಅದೇ ಕಾನೂನು ದಬ್ಬಾಳಿಕೆಯ ಸಾಧನವಾಗಿ ಬಳಕೆಯಾಗಿದ್ದು ಎಲ್ಲರಿಗೂ ತಿಳಿದಿದೆ’ ಎಂದಿದ್ದಾರೆ.

ನ್ಯಾಯಾಂಗ ಸಂಸ್ಥೆಗಳನ್ನು ದೀರ್ಘಕಾಲದವರೆಗೆ ಕಾಪಾಡುವುದು ಸಹಾನುಭೂತಿ ಪ್ರಜ್ಞೆ ಮತ್ತು ನಾಗರಿಕರ ಕೂಗಿಗೆ ಉತ್ತರ ನೀಡುವ ಸಾಮರ್ಥ್ಯ ಎಂದಿದ್ದಾರೆ.

ಮಹಿಳೆಯರಿಗೆ ಸೌಲಭ್ಯಗಳ ನಿರಾಕರಣೆ: ಕಾನೂನು ವೃತ್ತಿಯ ರಚನೆಯಲ್ಲಿನ ಊಳಿಗಮಾನ್ಯ, ಪಿತೃಪ್ರಧಾನ ವ್ಯವಸ್ಥೆಯು ಮಹಿಳೆಯರಿಗೆ ಸೌಲಭ್ಯಗಳನ್ನು ನಿರಾಕರಿಸುತ್ತಿದೆ ಎಂದೂ ಚಂದ್ರಚೂಡ್ ಹೇಳಿದರು.

ಕೇರಳ: ರಾಜ್ಯಪಾಲರ ವಜಾ–ರಾಜಭವನ ತಲುಪಿದ ಸುಗ್ರೀವಾಜ್ಞೆ

ತಿರುವನಂತಪುರ (ಪಿಟಿಐ): ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿ ಸ್ಥಾನದಿಂದ ರಾಜ್ಯಪಾಲರನ್ನು ವಜಾಗೊಳಿಸುವ ಸುಗ್ರೀವಾಜ್ಞೆಯನ್ನು ಕೇರಳ ಸರ್ಕಾರ ರಾಜಭವನಕ್ಕೆ ಅನುಮೋದನೆಗಾಗಿ ಕಳುಹಿಸಿದೆ. ಈ ಸಂಬಂಧ ಕೆಲ ದಿನಗಳ ಹಿಂದೆಯೇ ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು.

‘ರಾಜ್ಯಪಾಲ ಆರಿಫ್ ಮೊಹ್ಮದ್ ಖಾನ್ ಅವರ ಅಂಕಿತಕ್ಕಾಗಿ, ಕಳುಹಿಸಲಾದ ಸುಗ್ರೀವಾಜ್ಞೆ ತಲುಪಿದೆ’ ಎಂದು ರಾಜಭವನದ ಮೂಲಗಳು ಖಚಿತಪಡಿಸಿವೆ.

ಇನ್ನೊಂದೆಡೆ, ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರದ ನಡುವಿನ ಸಂಘರ್ಷ ಇನ್ನೂ ಶಮನವಾಗಿಲ್ಲ. ಈ ಕಾರಣದಿಂದಾಗಿ, ಆರಿಫ್ ಮೊಹ್ಮದ್ ಖಾನ್ ಅವರು ಈ ಸುಗ್ರೀವಾಜ್ಞೆಗೆ ಅಂಕಿತ ಹಾಕುವ ಸಾಧ್ಯತೆಗಳು ಕಡಿಮೆ ಎಂದು ಮೂಲಗಳು ಹೇಳಿವೆ.

ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರ ಬುಧವಾರ ಸುಗ್ರೀವಾಜ್ಞೆಯನ್ನು ಹೊರತರಲು ನಿರ್ಧರಿಸಿತ್ತು. ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ, ರಾಜ್ಯ ಸರ್ಕಾರದ ಈ ನಡೆಯನ್ನು ವಿರೋಧಿಸಿದ್ದವು. ಕೇರಳದ ವಿಶ್ವವಿದ್ಯಾಲಯಗಳನ್ನು ಕಮ್ಯುನಿಸ್ಟ್ ಕೇಂದ್ರಗಳಾಗಿ ಪರಿವರ್ತಿಸುವ ಉದ್ದೇಶದಿಂದ ಸಂಪುಟ ಇಂಥ ನಿರ್ಧಾರ ಕೈಗೊಂಡಿದೆ ಎಂದು ಆರೋಪಿಸಿದ್ದವು.

ಇಡಬ್ಲ್ಯುಎಸ್: ಮರುಚಿಂತನೆಗೆ ಮುಂದಾದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಎಸ್‌.ಸಿ, ಎಸ್‌.ಟಿ ಮತ್ತು ಹಿಂದುಳಿದ ವರ್ಗಗಳನ್ನು ಹೊರಗಿಟ್ಟು, ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇ 10ರಷ್ಟು ಮೀಸಲಾತಿ ನೀಡುವುದನ್ನು ಸುಪ್ರೀಂ ಕೋರ್ಟ್ ಈಚೆಗೆ ಎತ್ತಿ ಹಿಡಿದಿರುವುದರ ಕುರಿತಂತೆ ತನ್ನ ನಿಲುವನ್ನು ಮರುಪರಿಶೀಲಿಸಲು ಕಾಂಗ್ರೆಸ್ ಮುಂದಾಗಿದೆ.

ಸುಪ್ರೀಂ ಕೋರ್ಟ್ ತೀರ್ಪನ್ನು ಕಾಂಗ್ರೆಸ್ ಪಕ್ಷ ಸ್ವಾಗತಿಸಿತ್ತು. ಆದರೆ ಮಿತ್ರಪಕ್ಷಗಳಾದ ಡಿಎಂಕೆ ಮತ್ತು ಆರ್‌ಜೆಡಿ ತೀರ್ಪನ್ನು ವಿರೋಧಿಸಿರುವಂತೆಯೇ ಕಾಂಗ್ರೆಸ್ ಸಹ ತನ್ನ ನಿರ್ಧಾರದ ಬಗ್ಗೆ ಮರುಪರಿಶೀಲನೆಗೆ ಮುಂದಾಗಿದೆ.

> ಇದು ಮರುಚಿಂತನೆ ಅಲ್ಲ; ಆಳವಾದ ಚಿಂತನೆ. ನಮ್ಮದು ರಾಷ್ಟ್ರೀಯ ಪಕ್ಷವಾದ್ದರಿಂದ, ಎಲ್ಲಾ ರಾಜ್ಯಗಳ ಬಗೆಗೆ ಗೌರವ ಇದೆ ಮತ್ತು ಅವುಗಳ ಭಾವನೆಗಳನ್ನು ಗೌರವಿಸುತ್ತೇವೆ
>
> **ಜೈರಾಂ ರಮೇಶ್,** ಪ್ರಧಾನ ಕಾರ್ಯದರ್ಶಿ

‘ಸಾಮಾಜಿಕ ನ್ಯಾಯದ ಕುರಿತ ‘ಸಾಮಾಜಿಕ ಮತ್ತು ರಾಜಕೀಯ ಭಾರತದ ಸುದೀರ್ಘ ಹೋರಾಟಕ್ಕೆ ಈ ತೀರ್ಪಿನಿಂದ ಹಿನ್ನಡೆ ಆಗಲಿದೆ’ ಎಂದು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಹೇಳಿದ್ದಾರೆ. ತಮಿಳುನಾಡು, ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದಲ್ಲಿ ಈ ತೀರ್ಪಿನ ಕುರಿತು ವಿರೋಧ ವ್ಯಕ್ತವಾಗುತ್ತಿದೆ. ಇದೇ ಕಾರಣಕ್ಕೆ ಕಾಂಗ್ರೆಸ್ ತನ್ನ ನಿಲುವಿನ ಮರುಪರಿಶೀಲನೆಗೆ ಮುಂದಾಗಿದೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ಮುಖಂಡರು ತೀರ್ಪಿನ ‘ಸಾಮಾಜಿಕ ಮತ್ತು ರಾಜಕೀಯ ಪರಿಣಾಮ’ದ ಕುರಿತು ಅಧ್ಯಯನ ನಡೆಸುತ್ತಿದ್ದಾರೆ. ಜೊತೆಗೆ, ತೀರ್ಪಿನ ಕಾನೂನು ಆಯಾಮದ ಕುರಿತು ಪಿ. ಚಿದಂಬರಂ ಮತ್ತು ಅಭಿಷೇಕ್ ಮನು ಸಿಂಘ್ವಿ ಅಧ್ಯಯನ ನಡೆಸುತ್ತಿದ್ದಾರೆ ಎಂದು ಶನಿವಾರ ಪಕ್ಷದ ಮೂಲಗಳು ತಿಳಿಸಿವೆ.

‘ರಾಜಕೀಯ ಪರಿಣಾಮವನ್ನು ಗಮನಿಸದೆಯೇ ಪಕ್ಷವು ಆತುರಾತುರವಾಗಿ ತೀರ್ಪಿನ ಬಗ್ಗೆ ಪ್ರತಿಕ್ರಿಯೆ ನೀಡಿತು’ ಎಂದು ಪಕ್ಷದ ಮುಖಂಡರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಪತಂಜಲಿಯ 5 ಔಷಧ ಉತ್ಪಾದನೆ ಸ್ಥಗಿತಕ್ಕೆ ಉತ್ತರಾಖಂಡ ಸೂಚನೆ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ಆಯುರ್ವೇದ ಮತ್ತು ಯುನಾನಿ ಪರವಾನಗಿ ಪ್ರಾಧಿಕಾರವು ಇಲ್ಲಿನ ದಿವ್ಯ ಫಾರ್ಮಸಿಗೆ ಐದು ಪತಂಜಲಿ ಸಂಸ್ಥೆಗೆ ಸೇರಿದ ಔಷಧಗಳ ಉತ್ಪಾದನೆಯನ್ನು ನಿಲ್ಲಿಸುವಂತೆ ಸೂಚಿಸಿದೆ. ಅಲ್ಲದೆ ಮರು ಅನುಮೋದನೆ ಪಡೆಯಲು ಪರಿಷ್ಕೃತ ಸೂತ್ರೀಕರಣ ವಿವರ ಸಲ್ಲಿಸುವಂತೆ ತಿಳಿಸಿದೆ.

ಕೇರಳದ ವೈದ್ಯ ಕೆ.ವಿ.ಬಾಬು ಅವರು, ದಿವ್ಯ ಫಾರ್ಮಸಿಯು ಔಷಧಿ ಮತ್ತು ಸೌಂದರ್ಯವರ್ಧಕ ಕಾಯ್ದೆಯನ್ನು ಉಲ್ಲಂಘಿಸಿ ಔಷಧ ಉತ್ಪಾದಿಸುತ್ತಿದೆ ಎಂದು ಆರೋಪಿಸಿ ದೂರು ದಾಖಲಿಸಿದ್ದರು. ಈ ಬೆನ್ನಲ್ಲೇ ಪ್ರಾಧಿಕಾರ ದಿವ್ಯ ಫಾರ್ಮಸಿಗೆ ನೋಟಿಸ್ ಜಾರಿ ಮಾಡಿದೆ.

ಆದರೆ, ಪ್ರಾಧಿಕಾರದ ನಿರ್ಧಾರದ ಹಿಂದೆ ‘ಆಯುರ್ವೇದ ಔಷಧ ವಿರೋಧಿ ಮಾಫಿಯಾ’ ಇದೆ ಎಂದು ದಿವ್ಯ ಫಾರ್ಮಸಿ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

TECHNICIANS & ENGINEERS REQUIRED FOR RELIANCE JIO PROJECT IN BANGALORE
Telecom/ IBS/ Network Engineer
Experience: 2 to 5 years in O&M with Telecom industry
Education: BE/ BTech- (electrical/ electronics/ E&C/ EEE)
Telecom/ IBS/ Network Technician
Years of experience: 3 to 4 years in O&M with Telecom industry.
Education: ITI/ Diploma- (electrical/electronics/ E&C/ EEE)
Contact Us Now:
Email: info@telecomone.in
Mobile: 6361616636
CTC- 25k to 35k per month *accommodation shall be provided

Accounts & Finance

LEADING PRIVATE Bank needs Data Entry Operator. Full-time, on-roll of bank. Salary Rs. 2.40 - 2.75 lacs per annum Fresh Graduates with Typing (high-speed), basic banking, spoken English Mandatory Training: 2 weeks Training Fee to be paid, after receiveing the offer letter. Mail resume to: apply@stratadigm.biz

Drivers

ಬೇಕಾಗಿದ್ದಾರೆ! ಬೈಕ್ ಚಾಲಕರು
(Full Time & Part Time)
ಬೇಕಾಗಿರುವ ದಾಖಲೆಗಳು – Bike, Valid DL, RC ಹಾಗು Android Phone
ನೀವು ಬೈಕ್ ಹೊಂದಿದ್ದೀರಾ? ಕೆಲಸ ಹುಡುಕುತ್ತಿದ್ದೀರಾ? ಸಮಯ ಸಿಕ್ಕಾಗ ಬೈಕ್ ಚಲಾಯಿಸಿ ಹಾಗು
4 ಗಂಟೆಗಳಲ್ಲಿ Rs.1000/- ಸಂಪಾದಿಸಿ! ಈಗಲೇ ಕರೆ ಮಾಡಿ:
080-45686913

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

Marketing & Sales

CANDIDATE WITH Three Years Experience And Two-Wheeler May Apply To Market Thermal Insulation Products For A Private Ltd Company. Contact 9480056374 / 9448143883

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

ರೆಂಟಲ್ ಪ್ರಾಪರ್ಟೀಸ್

Accommodation Available

Flats

FLAT FOR Rent at Kodipalya (Kengeri), 3-BHK,1295 Sft, Furnished, Family preferred. Contact: 9880702151

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್

Sites

Mysore

WANTED SITE, 30x40 or 40x60, Any Telecom Layout in Mysore. Contact : 9743532664

ವೈವಾಹಿಕ

Brides Wanted

SC/ ST

ವಧು ಬೇಕಾಗಿದೆ
33 ವರ್ಷ, ಆದಿ ಕರ್ನಾಟಕ ಜಾತಿ (ಬಲಗೈ), ಡಿಪ್ಲೊಮಾ, ಬೆಂಗಳೂರಿನಲ್ಲಿ ಸ್ವಂತ ಬ್ಯುಸಿನೆಸ್ ಮಾಡಿಕೊಂಡಿರುವ ವರನಿಗೆ ವಧು ಬೇಕಾಗಿದೆ.
ಬಾಳ ಸಂಗಾತಿಯಾಗಬಯಸುವವರು / ಬ್ರೋಕರ್ಸ್ ಸಂಪರ್ಕಿಸಿ:
99869 48807

Grooms Wanted

Brahmin

ಬ್ರಾಹ್ಮಣ ವಧು, ವಯಸ್ಸು 26, SSLC ಕಲಿತಿರುವ/ವಯಸ್ಸು 32, PUC/ವಯಸ್ಸು 38, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. 9035730677

Muslim

SUNNI MUSLIM 28/5'3' slim girl BE/MBA Assistant Manager MNC in Bangalore, Seeks Educated Settled Boy. Pref. Whatsapp. 9513906784

ವ್ಯಾಪಾರ

Business Offers

General

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. For Details please call 90709 90709. Successful 5th Year. All Investments supported with Legal Document. 90709 90709.

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಸ್ತ್ರೀ ಪುರುಷ, ಶತ್ರುಕಾಟ, ಗಂಡಹೆಂಡತಿ ದೂರವಾಗಿದ್ದರೆ, ನಿಮ್ಮಂತೆ ಆಗಲು. 2 ದಿನದಲ್ಲಿ ಪರಿಹಾರ 9611968471

“ಕೆಲಸಆದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ವಿಮಾನ/ A/C ರೂಂ/ A/C ಬಸ್ಸಿನಲ್ಲಿ 15.12.2022 ಸೋಮನಾಥ ಕಚ್‌ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ ಹಾಗೂ ಪೂರಿಜಗನ್ನಾಥ್ ಕಲ್ಕತ್ತ,ಗ್ಯಾಂಗ್‌ಟಕ್,ಡಾರ್ಜಲಿಂಗ್ ಇತ್ಯಾದಿ. ಹೈದ್ರಾಬಾದ್ ಭದ್ರಾಚಲಂ,ಪಂಚರಾಮ ಕ್ಷೇತ್ರ 14 ದಿನಗಳು. 24.12.2022 ಕಾಶಿ,ಬುದ್ಧಗಯಾ ಅಲಹಾಬಾದ್ ಇತ್ಯಾದಿ. ಶಿರಡಿ ಪ್ರವಾಸ 6 ದಿನಗಳು. ರಾಮೇಶ್ವರ,ಮದುರೈ ಕನ್ಯಾಕುಮಾರಿ 9 ದಿನಗಳು. ಮಹಾಶಿವರಾತ್ರಿ ಪ್ರಯುಕ್ತ 11.02.2023 ನೇಪಾಳ.ಪೋಖ್ರಾ ವಾರಣಾಸಿ ಅಯೋಧ್ಯ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ 26574131 8317446683 9448508708

ಕೃಷ್ಣ ಹೆರಿಟೇಜ್ ಟೂರ್ಸ್ ಚಾಮರಾಜಪೇಟೆ ಊಟ ರೂಮಿನೊಂದಿಗೆ 5/12 ದಿನಗಳು. 30.11.2022 ನವಗ್ರಹ ದರ್ಶನದೊಂದಿಗೆ 18 ಕ್ಷೇತ್ರಗಳು. ತಂಜಾವೂರು ಕುಂಭಕೋಣಂ ಚಿದಂಬರಂ ವೆಲಾಂಗಣಿ ಇತ್ಯಾದಿ 6500. 24.01.2023 ಗುಜರಾತ್,ಮಧ್ಯಪ್ರದೇಶ 01.04.2023 ಕಾಶಿ,ಅಯೋಧ್ಯ ಇತ್ಯಾದಿ. 22.04.2023 ವೈಷ್ಣೋದೇವಿ ಇತ್ಯಾದಿ. 9448390735 9449721678 9731159966

20.11.2022 5ದಿನಗಳು ರಾಮೇಶ್ವರಂ,ಕನ್ಯಾಕುಮಾರಿ ಪ್ರವಾಸ.,16.12.2022 17ದಿನಗಳು ಗುಜರಾತ್ ಭಾವನಗರ,ಅಷ್ಟಜ್ಯೋತಿರ್ಲಿಂಗ., 24.12.2022 10ದಿನಗಳು ಉಜ್ಜೈನಿ,ಓಂಕಾರೇಶ್ವರ ಮಹಾರಾಷ್ಟ್ರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9945445809, 9902433500, 6363416487

22.11.2022 ಮಧ್ಯಪ್ರದೇಶ, ಗುಜರಾತ್, ಜ್ಯೋತಿರ್ಲಿಂಗ ಪ್ರವಾಸ 22.12.2022 ತಮಿಳುನಾಡು, ಕೇರಳ, ಶಿರಡಿ, ಪ್ರವಾಸ ಕರ್ನಾಟಕ ಹೆರಿಟೇಜ್ ಟೂರ್ಸ (ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ಜಗನ್ ಸ್ವಾಗತ, ಕೆಸಿಆರ್‌ಗೆ ಅಪಥ್ಯ

ಆಂಧ್ರ ಪ್ರದೇಶ, ತೆಲಂಗಾಣಕ್ಕೆ ಪ್ರಧಾನಿ ಮೋದಿ ಭೇಟಿ ● ಭಿನ್ನ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರಿಗೆ ವೈಎಸ್‌ಆರ್‌ಪಿ ವಿಶಾಖಪಟ್ಟಣದಲ್ಲಿ ಶನಿವಾರ ಬೆಳಿಗ್ಗೆ ಭವ್ಯ ಸ್ವಾಗತ ಕೋರಿತ್ತು. ಅಪರಾಹ್ನ ತೆಲಂಗಾಣಕ್ಕೆ ಬಂದ ಮೋದಿ ಅವರನ್ನು ‘ತೆಲಂಗಾಣಕ್ಕೆ ಪ್ರವೇಶವಿಲ್ಲ’ ಎಂಬ ಬ್ಯಾನರ್‌ಗಳು ಎದುರಾದವು. ಹೈದರಾಬಾದ್‌ನಲ್ಲಿ ಬಿಆರ್‌ಎಸ್ (ಈ ಹಿಂದಿನ ಟಿಆರ್‌ಎಸ್) ಮೋದಿ ಅವರನ್ನು ಸಂಪೂರ್ಣವಾಗಿ ತಿರಸ್ಕರಿಸಿದೆ.

ತೆಲುಗು ಭಾಷಿಕ ಎರಡು ರಾಜ್ಯಗಳಲ್ಲಿ ದೊರೆತ ಭಿನ್ನ ಪ್ರತಿಕ್ರಿಯೆಗಳು ರಾಜಕೀಯ ಸಮೀಕರಣವನ್ನು ಬಿಂಬಿಸುತ್ತಿವೆ. ಈ ಎರಡು ರಾಜ್ಯಗಳ ಮುಖ್ಯಮಂತ್ರಿಗಳ ಜತೆಗೆ ಮೋದಿ ಯಾವ ರೀತಿ ಸಂಬಂಧ ಹೊಂದಿದ್ದಾರೆ ಎಂಬುದನ್ನೂ ಹೇಳುತ್ತಿವೆ.

ಆಂಧ್ರ ಪ್ರದೇಶ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರು ವಿಶಾಖಪಟ್ಟಣದ ಆಂಧ್ರ ವಿಶ್ವವಿದ್ಯಾಲಯ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೋದಿ ಅವರನ್ನು ಹಾಡಿ ಹೊಗಳಿದರು. ದಯಾಪರ, ಉದಾರಿ ಮುಂತಾದ ಪದಗಳಿಂದ ಬಣ್ಣಿಸಿದರು. ರಾಜ್ಯಕ್ಕೆ ಇನ್ನಷ್ಟು ಯೋಜನೆಗಳು ಮತ್ತು ಹೆಚ್ಚುವರಿ ಅನುದಾನ ಒದಗಿಸುವಂತೆ ಕೋರಿದರು.

> ಕೆಸಿಆರ್ ಕುಟುಂಬದ ಸಂಘರ್ಷಾತ್ಮಕ ಧೋರಣೆಯು ರಾಜ್ಯಕ್ಕೆ ಮಾರಕ. ಎಡರಂಗ, ಕಾಂಗ್ರೆಸ್, ಡಿಎಂಕೆ, ಟಿಎಂಸಿ ಆಳ್ವಿಕೆಯ ರಾಜ್ಯಗಳಲ್ಲಿಯೂ ಈ ರೀತಿಯ ಪ್ರತಿರೋಧ ಇಲ್ಲ
>
> **ಕಿಶನ್ ರೆಡ್ಡಿ,** ಕೇಂದ್ರ ಸಚಿವ

ಮೋದಿ ಅವರನ್ನು ದೆಹಲಿಯಲ್ಲಿ ಆಗಾಗ ಭೇಟಿಯಾಗುತ್ತಿರುವ ಜಗನ್ ಅವರು, ಮೋದಿ ಜೊತೆಗಿನ ತಮ್ಮ ಸಂಬಂಧ ರಾಜಕೀಯವನ್ನು ಮೀರಿದ್ದು ಎಂದರು.

ಶುಕ್ರವಾರ ಸಂಜೆ ಬಂದ ಮೋದಿ ಅವರನ್ನು ಜಗನ್ ಅವರು ವಿಮಾನ ನಿಲ್ದಾಣದಲ್ಲಿಯೇ ಬರಮಾಡಿಕೊಂಡಿದ್ದರು. ಆಂಧ್ರ ವಿಶ್ವವಿದ್ಯಾಲಯ ಮೈದಾನದಲ್ಲಿ ನಡೆದ ಕಾರ್ಯಕ್ರಮವನ್ನು ವೈಎಸ್‌ಆರ್‌ಪಿ ಆಯೋಜಿಸಿದೆ. ವೈಎಸ್‌ಆರ್‌ಪಿ ಸಂಸದೀಯ ಪಕ್ಷದ ನಾಯಕ ವಿಜಯಸಾಯಿ ರೆಡ್ಡಿ ಅವರೇ ಉಸ್ತುವಾರಿ ನೋಡಿಕೊಂಡಿದ್ದರು.

ಆದರೆ, ಹೈದರಾಬಾದ್‌ನಲ್ಲಿ ಎಂದಿನಂತೆ ತಿರಸ್ಕಾರವೇ ಮೋದಿ ಅವರನ್ನು ಎದುರುಗೊಂಡಿತ್ತು. ಪ್ರಧಾನಿಯನ್ನು ಬರಮಾಡಿಕೊಳ್ಳಲು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರು ಹೋಗಲಿಲ್ಲ. ಬದಲಿಗೆ, ಪಶುಸಂಗೋಪನಾ ಸಚಿವ ತಲಸಾನಿ ಶ್ರೀನಿವಾಸ್ ಅವರನ್ನು ಕಳುಹಿಸಿದ್ದರು. ಪ್ರಧಾನಿಯನ್ನು ಬರಮಾಡಿಕೊಳ್ಳಲು ಕೆಸಿಆರ್ ಹೋಗದೇ ಇರುವುದು ಈ ವರ್ಷದಲ್ಲಿ ಇದು ನಾಲ್ಕನೇ ಬಾರಿ.

‘ಬೈ ಬೈ ಮೋದಿ’ ಎಂಬ ಫ್ಲೆಕ್ಸ್‌ಗಳೂ ಹೈದರಾಬಾದ್‌ನ ಬೀದಿಗಳಲ್ಲಿ ಕಾಣಿಸಿವೆ. ‘ನನಗೆ 50 ದಿನಗಳನ್ನು ಕೊಡಿ. ನಾನು ಹೇಳಿದ್ದು ತಪ್ಪಾದರೆ ನನ್ನನ್ನು ಜೀವಂತ ಸುಟ್ಟುಬಿಡಿ’ ಎಂದು 2016ರ ನವೆಂಬರ್‌ನಲ್ಲಿ ಮೋದಿ ಹೇಳಿದ್ದನ್ನು ನೆನಪಿಸುವ ಫ್ಲೆಕ್ಸ್‌ಗಳೂ ಇದ್ದವು.

‘ಈಗ 2,195 ದಿನಗಳಾಗಿವೆ. ಹಾಗಿದ್ದರೂ ಯಾವ ಸುಧಾರಣೆಯೂ ಆಗಿಲ್ಲ ಮೋದಿಯವರೇ’ ಎಂದು ಒಂದು ಬ್ಯಾನರ್‌ನಲ್ಲಿ ಬರೆಯಲಾಗಿದೆ. ಮೋದಿ, ಅಮಾನ್ಯ ಮಾಡಲಾದ ₹1000 ಮುಖಬೆಲೆಯ ನೋಟು, ಪೆಟ್ರೋಲ್ ಕ್ಯಾನ್ ಮತ್ತು ಉರಿಯುತ್ತಿರುವ ಬೆಂಕಿ ಕಡ್ಡಿಯ ಚಿತ್ರವೂ ಈ ಬ್ಯಾನರ್‌ನಲ್ಲಿ ಇದೆ.

‘ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲು ತೆಲಂಗಾಣಕ್ಕೆ ಬಂದ ಪ್ರಧಾನಿಯನ್ನು ಈ ರೀತಿ ಹೀಯಾಳಿಸಿದ್ದರ ಹಿಂದೆ ಕೆಸಿಆರ್ ಅವರ ಕೈವಾಡ ಇದೆ’ ಎಂದು ತೆಲಂಗಾಣ ಬಿಜೆಪಿ ಆರೋಪಿಸಿದೆ.

ಬೇಗಂಪೇಟೆಯಲ್ಲಿ ಪಕ್ಷದ ಸಮಾವೇಶ ಉದ್ದೇಶಿಸಿ ಮಾತನಾಡಿದ ಮೋದಿ ಅವರು ‘ಸಾರ್ವಜನಿಕರಿಗೆ ಕೊಡಲು ಏನೂ ಇಲ್ಲದವರು ನನ್ನನ್ನು ಮೂದಲಿಸುತ್ತಾರೆ. ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಡಿ. ಇಲ್ಲಿ ಬೇಗದಲ್ಲಿಯೇ ಕಮಲ ಅರಳಲಿದೆ’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

‘ವೃತ್ತಿಪರ ಕಾಲೇಜು: ಮಾನ್ಯತೆ ನಿರಾಕರಿಸುವ ಹಕ್ಕು ರಾಜ್ಯಕ್ಕಿದೆ’

ನವದೆಹಲಿ: ಅಭ್ಯರ್ಥಿಗಳಿಗೆ ಸಾಕಷ್ಟು ಉದ್ಯೋಗಾವಕಾಶಗಳು ಇಲ್ಲದ ಕಾರಣ ಹೊಸ ವೃತ್ತಿಪರ ಕಾಲೇಜುಗಳಿಗೆ ಮಾನ್ಯತೆ ನಿರಾಕರಿಸುವ ಹಕ್ಕನ್ನು ರಾಜ್ಯ ಸರ್ಕಾರ ಹೊಂದಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಎಂ.ಎಂ ಸುಂದ್ರೇಶ್ ಅವರನ್ನು ಒಳಗೊಂಡ ನ್ಯಾಯಪೀಠ ಉತ್ತರಾಖಂಡ ಹೈಕೋರ್ಟ್ ಆದೇಶವನ್ನು ರದ್ದು ಮಾಡಿದೆ. ಈ ಮೂಲಕ ಮನಬಂದಂತೆ ಬಿ.ಇಡಿ ಹೊಸ ಕಾಲೇಜುಗಳಿಗೆ ಮಾನ್ಯತೆ ನೀಡಲು ಸಾಧ್ಯವಿಲ್ಲ ಎಂಬ ಉತ್ತರಾಖಂಡ ಸರ್ಕಾರದ ನಿರ್ಧಾರವನ್ನು ಎತ್ತಿಹಿಡಿದಿದೆ.

ಶೋಧನೆ ಸಮಿತಿಯಿಂದಷ್ಟೇ ಕುಲಪತಿ ನೇಮಕ: ‘ಸುಪ್ರೀಂ’

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಗೆ ಆಯ್ಕೆ ಮತ್ತು ನೇಮಕಾತಿಯು ‘ಶೋಧನೆ ಮತ್ತು ಆಯ್ಕೆ’ ಸಮಿತಿಯ ಮೂರರಿಂದ ಐವರು ಸದಸ್ಯರ ತಂಡದ ಮೂಲಕ ನಡೆಯಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಉತ್ತರಾಖಂಡದ ಸೋಬನ್ ಸಿಂಗ್ ಜೀನಾ ವಿಶ್ವವಿದ್ಯಾಲಯದ ಕುಲಪತಿಯಾಗಿ ತಮ್ಮ ನೇಮಕಾತಿಯನ್ನು ರದ್ದುಪಡಿಸಿದ್ದನ್ನು ಪ್ರಶ್ನಿಸಿ ಪ್ರೊ. ನರೇಂದ್ರ ಸಿಂಗ್ ಭಂಡಾರಿ ಅವರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ ನ್ಯಾಯಮೂರ್ತಿಗಳಾದ ಎಂ.ಆರ್ ಶಾ ಮತ್ತು ಎಂ.ಎಂ ಸುಂದ್ರೇಶ್ ಅವರಿದ್ದ ಪೀಠವು ಹೀಗೆ ಹೇಳಿದೆ.

ತಾವು ಅರ್ಹ ಅಭ್ಯರ್ಥಿ ಎಂದು ಹೇಳುವ ಮೂಲಕ ಭಂಡಾರಿ ಅವರು ತಮ್ಮ ನೇಮಕಾತಿಯನ್ನು ಸಮರ್ಥಿಸಿಕೊಂಡಿದ್ದರು. ಅದನ್ನು ತಳ್ಳಿಹಾಕಿರುವ ಪೀಠವು, ‘ಅವರನ್ನು ಬೇರೆ ಅಭ್ಯರ್ಥಿಗಳ ಜೊತೆ ಹೋಲಿಸಲು ಸಾಧ್ಯವಾಗದ ಕಾರಣ ಅವರನ್ನು ಅರ್ಹ ಅಭ್ಯರ್ಥಿ ಎಂದು ಕರೆಯಲು ಸಾಧ್ಯವಿಲ್ಲ’ ಎಂದು ಹೇಳಿದೆ.

ನಾಲ್ವರನ್ನು ನಿರಾಶ್ರಿತರ ಶಿಬಿರಕ್ಕೆ ಕರೆದೊಯ್ದ ಪೊಲೀಸರು

ಕಾರಾಗೃಹದಿಂದ ರಾಜೀವ್ ಹಂತಕರ ಬಿಡುಗಡೆ

ಚೆನ್ನೈ (ಪಿಟಿಐ): ರಾಜೀವ್ ಗಾಂಧಿ ಹಂತಕರಾದ ನಳಿನಿ ಶ್ರೀಹರನ್, ಆಕೆಯ ಪತಿ ಮತ್ತು ಇತರ ನಾಲ್ವರು ಅಪರಾಧಿಗಳನ್ನು ತಮಿಳುನಾಡಿನ ಎರಡು ಕಾರಾಗೃಹಗಳಿಂದ ಶನಿವಾರ ಸಂಜೆ ಬಿಡುಗಡೆ ಮಾಡಲಾಯಿತು.

ಅತಿ ಹೆಚ್ಚು ಅವಧಿಗೆ ಕಾರಾಗೃಹದಲ್ಲಿ ಇದ್ದ ಭಾರತದ ಮೊದಲ ಮಹಿಳೆ ನಳಿನಿ, ವೆಲ್ಲೂರಿನ ಮಹಿಳಾ ವಿಶೇಷ ಕಾರಾಗೃಹದಿಂದ ಬಿಡುಗಡೆಯಾದರು. ಬಳಿಕ ವೆಲ್ಲೂರಿನ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾದ ತನ್ನ ಪತಿ ವಿ. ಶ್ರೀಹರನ್ ಅಲಿಯಾಸ್ ಮುರುಗನ್ ಅವರನ್ನು ಕಂಡು ಭಾವುಕರಾದರು.

ನಳಿನಿ ಮತ್ತು ರವಿಚಂದ್ರನ್ ಭಾರತೀಯ ಪ್ರಜೆಗಳು. ಹೀಗಾಗಿ ಅವರು ತಮ್ಮ ಊರುಗಳಿಗೆ ತೆರಳಿದರು. ಆದರೆ, ಭಾರತಕ್ಕೆ ಅಕ್ರಮವಾಗಿ ನುಸುಳಿದ್ದ, ಶ್ರೀಲಂಕಾ ಪ್ರಜೆಗಳಾದ ಮುರುಗನ್, ಸಂತನ್ ಹಾಗೂ ಚೆನ್ನೈಗೆ ಸಮೀಪದ ಪುಝಲ್ ಕಾರಾಗೃಹದಿಂದ ಬಿಡುಗಡೆಯಾದ ರಾಬರ್ಟ್ ಪಯಾಸ್ ಮತ್ತು ಜಯಕುಮಾರ್ ಅವರನ್ನು ಪೊಲೀಸ್ ವಾಹನದಲ್ಲಿ ತಿರುಚಿರಾಪಳ್ಳಿಯಲ್ಲಿರುವ ವಿಶೇಷ ನಿರಾಶ್ರಿತರ ಶಿಬಿರಕ್ಕೆ ಕರೆದೊಯ್ಯಲಾಯಿತು.

‘ಈ ನಾಲ್ವರನ್ನು ಮರಳಿ ಶ್ರೀಲಂಕಾಗೆ ಅಥವಾ ಅವರು ಇಚ್ಛಿಸುವ ದೇಶಕ್ಕೆ ಕಳುಹಿಸುವ ಕುರಿತು ಕೇಂದ್ರ ಸರ್ಕಾರ ನಿರ್ಧಾರ ಕೈಗೊಳ್ಳುವವರೆಗೂ ನಿರಾಶ್ರಿತರ ಶಿಬಿರದಲ್ಲಿ ಇರಿಸಲಾಗುವುದು ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ. ಈ ನಾಲ್ವರನ್ನು ಚೆನ್ನೈ ಬಳಿಯ ಪ್ರದೇಶವೊಂದಕ್ಕೆ ಕಳುಹಿಸುವ ಸಾಧ್ಯತೆಯೂ ಇದೆ’ ಎಂದೂ ತಿಳಿಸಿವೆ.

ತಮಿಳುನಾಡಿನ ವೆಲ್ಲೂರು ಜೈಲಿನಿಂದ ಶನಿವಾರ ಬಿಡುಗಡೆಯಾದ ನಳಿನಿ ಮತ್ತು ಮುರುಗನ್ –ಪಿಟಿಐ ಚಿತ್ರ

ಬಿಜೆಪಿ ‘ಮೌನ’ ಕಾಂಗ್ರೆಸ್ ಖಂಡನೆ

ನವದೆಹಲಿ: ರಾಜೀವ್ ಗಾಂಧಿ ಹಂತಕರ ಅವಧಿಪೂರ್ವ ಬಿಡುಗಡೆಗೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಕುರಿತು ಬಿಜೆಪಿ ‘ಮೌನ’ ವಹಿಸಿರುವುದನ್ನು ಕಾಂಗ್ರೆಸ್ ಶನಿವಾರ ಖಂಡಿಸಿದೆ. ಈ ಮೌನವು ‘ಭಯೋತ್ಪಾದನಾ ಕೃತ್ಯದೊಂದಿಗೆ ರಾಜಿ ಮಾಡಿಕೊಂಡಂತಾಗಿದೆ’ ಎಂದೂ ದೂರಿದೆ.

‘ಭಯೋತ್ಪಾದಕರ ಕುರಿತು ಎಂದಿಗೂ ಕರುಣೆ ಇರಬಾರದು. ಹಂತಕರ ಬಿಡುಗಡೆ ಬೆಂಬಲಿಸುತ್ತಿರುವವರು ಹಂತಕರನ್ನು ಬೆಂಬಲಿಸುತ್ತಿದ್ದಾರೆ’ ಎಂದು ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ಬೆಂಗಳೂರಿನ ನೆಟ್ಟಕಲ್ಲಪ್ಪ ಈಜು ಕೇಂದ್ರದ ಹತ್ತನೇ ವಾರ್ಷಿಕೋತ್ಸವದ ಅಂಗವಾಗಿ ಶನಿವಾರ ಆರಂಭವಾದ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್ ಉದ್ಘಾಟನೆ ಸಮಾರಂಭದಲ್ಲಿ ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜ್ ಅವರನ್ನು ದ ಪ್ರಿಂಟರ್ಸ್ ಮೈಸೂರು ಲಿಮಿಟೆಡ್ ಸಂಸ್ಥೆಯ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎನ್. ತಿಲಕ್ ಕುಮಾರ್ ಅಭಿನಂದಿಸಿದರು. ಟಿ. ಅನಂತರಾಜು, ಸಜನ್ ಪ್ರಕಾಶ್, ಸುಜಾತಾ ತಿಲಕ್ ಕುಮಾರ್ ಹಾಜರಿದ್ದರು (ಎಡಚಿತ್ರ). ಬಿಎಸಿಯ ಎಸ್. ಶಿವ ಅವರು 50 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಸ್ಪರ್ಧಿಸಿದರು –ಪ್ರಜಾವಾಣಿ ಚಿತ್ರಗಳು/ ವಿ.ಪುಷ್ಕರ್

ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್: 'ಸ್ಕಿನ್ಸ್' ಮಾದರಿ ಆಕರ್ಷಣೆ

ಮೊದಲ ದಿನ ಶಿವ, ರಿಧಿಮಾ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನೆಟ್ಟಕಲ್ಲಪ್ಪ ಈಜು ಕೇಂದ್ರವು (ಎನ್‌ಎಸಿ) ಶನಿವಾರ, ದೇಶದ ಈಜು ಕ್ಷೇತ್ರದಲ್ಲಿ ಹೊಸದೊಂದು ಮೈಲಿಗಲ್ಲು ನೆಟ್ಟಿತು.

ಯೂರೋಪ್ ಮತ್ತು ಅಮೆರಿಕದಲ್ಲಿ ನಡೆಯುವ ಅಂತರರಾಷ್ಟ್ರೀಯ ಈಜು ಲೀಗ್‌ನಲ್ಲಿ ಮಾತ್ರ ಕಂಡುಬರುವ 'ಸ್ಕಿನ್ಸ್' ಮಾದರಿಯ ಸ್ಪರ್ಧೆಯನ್ನು ಆಯೋಜಿಸಿ ಗಮನ ಸೆಳೆಯಿತು.

ಎನ್‌ಎಸಿ ದಶಮಾನೋತ್ಸವ ಅಂಗವಾಗಿ ಆಯೋಜಿಸಿರುವ 'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್'ನ ಮೊದಲ ದಿನ 50 ಮೀ. ವಿಭಾಗದ ಎಲ್ಲ ಸ್ಪರ್ಧೆಗಳು ಸ್ಕಿನ್ಸ್ ಮಾದರಿಯಲ್ಲಿ ನಡೆದವು. ಅಂದರೆ ಫೈನಲ್ಸ್‌ನಲ್ಲಿ 3 ಸುತ್ತುಗಳ ಸ್ಪರ್ಧೆ ನಡೆಸಿ ವಿಜೇತರನ್ನು ನಿರ್ಣಯಿಸಲಾಯಿತು. ಈ ಮಾದರಿಯ ಸ್ಪರ್ಧೆ ಈಜುಪಟುಗಳಲ್ಲಿ ಹೊಸ ಉತ್ಸಾಹ ಮೂಡಿಸಿತು.

ಬಸವನಗುಡಿ ಈಜು ಕೇಂದ್ರದ ಎಸ್.ಶಿವ ಮತ್ತು ರಿಧಿಮಾ ವೀರೇಂದ್ರಕುಮಾರ್ ಅವರು ಮೊದಲ ದಿನ ಗಮನ ಸೆಳೆದರು. ಪುರುಷರ 50 ಮೀ. ಬ್ಯಾಕ್‌ಸ್ಟ್ರೋಕ್, 50 ಮೀ. ಬಟರ್‌ಫ್ಲೈ ಮತ್ತು 18 ವರ್ಷಕ್ಕಿಂತ ಮೇಲಿನವರ 200 ಮೀ. ಮೆಡ್ಲೆ ವಿಭಾಗದಲ್ಲಿ ಶಿವ ಚಿನ್ನದ ಪದಕ ಜಯಿಸಿದರು. ರಿಧಿಮಾ, ಮಹಿಳೆಯರ 50 ಮೀ. ಬ್ಯಾಕ್‌ಸ್ಟ್ರೋಕ್ ಮತ್ತು 50 ಮೀ. ಬಟರ್‌ಫ್ಲೈ ವಿಭಾಗಗಳಲ್ಲಿ ಅಗ್ರಸ್ಥಾನ ಪಡೆದರು.

ಮೊದಲ ದಿನದ ಫಲಿತಾಂಶ: ಪುರುಷರು (ಮುಕ್ತ ವಿಭಾಗ): 50 ಮೀ. ಬ್ಯಾಕ್‌ಸ್ಟ್ರೋಕ್: ಎಸ್.ಶಿವ (ಬಸವನಗುಡಿ ಈಜು ಕೇಂದ್ರ-ಬಿಎಸಿ; ಕಾಲ: 26.36 ಸೆ.)-1, ಸೌಮ್ಯಜಿತ್ ಸಹಾ (ಡಾಲ್ಫಿನ್ ಅಕ್ವಟಿಕ್ಸ್)-2, ಆಕಾಶ್ ಮಣಿ (ಬಿಎಸಿ)-3. 50 ಮೀ. ಬಟರ್‌ಫ್ಲೈ: ಎಸ್.ಶಿವ (ಬಿಎಸಿ; ಕಾಲ: 25.67 ಸೆ)-1, ಪ್ರಥಮ್ ಶರ್ಮ (ಡಾಲ್ಫಿನ್)-2, ಎನ್.ಅರವಿಂದ್ (ಐಎಸಎಸ್)-3

18 ವರ್ಷಕ್ಕಿಂತ ಮೇಲಿನವರು: 200 ಮೀ. ಮೆಡ್ಲೆ: ಎಸ್.ಶಿವ (ಬಿಎಸಿ; ಕಾಲ: 2 ನಿ. 11.40 ಸೆ.)-1, ಸೌಮ್ಯಜಿತ್ ಸಹಾ (ಡಾಲ್ಫಿನ್)-2, ಧ್ಯಾನ್ ಬಾಲಕೃಷ್ಣ (ಬಿಎಸಿ)-3. 100 ಮೀ. ಬ್ಯಾಕ್‌ಸ್ಟ್ರೋಕ್: ಸೌಮ್ಯಜಿತ್ ಸಹಾ (ಡಾಲ್ಫಿನ್; ಕಾಲ: 1 ನಿ. 00.57 ಸೆ.)-1, ಅರವಿಂದ್ ಎನ್. (ಐಎಸಎಸ್), ಬಿ.ಜತಿನ್ (ಗ್ಲೋಬಲ್ ಸ್ವಿಮ್ ಸೆಂಟರ್)-3. 100 ಮೀ. ಬಟರ್‌ಫ್ಲೈ: ಪವನ್ ಗುಪ್ತಾ (ಎಸ್‌ಡಿಎಟಿ ಡಾಲ್ಫಿನ್; ಕಾಲ: 1 ನಿ. 00.20 ಸೆ.)-1, ಮಿತೇಶ್ ಕುಂಟೆ (ಎನ್‌ಎಸಿ)-2, ಸುನೀಶ್ ಎಸ್. (ಗ್ಲೋಬಲ್)-3

ಬಾಲಕರ ಗುಂಪು 2: 100 ಮೀ. ಬ್ಯಾಕ್‌ಸ್ಟ್ರೋಕ್: ಕುಶಾಲ್ ಕೆ (ಬಿಎಸಿ; ಕಾಲ: 1 ನಿ. 5.23 ಸೆ.)-1, ರಾಘವ್ ಸ್ವಚ್ಛಂದಮ್ (ನೆಟ್ಟಕಲ್ಲಪ್ಪ ಈಜು ಕೇಂದ್ರ-ಎನ್‌ಎಸಿ)-2, ಸ್ವರೂಪ್ ಸತೀಶ್ (ಸೇಂಟ್ ಪಾಲ್ಸ್ ಇಂಗ್ಲಿಷ್ ಹೈಸ್ಕೂಲ್)-3. 100 ಮೀ. ಬ್ಯಾಕ್‌ಸ್ಟ್ರೋಕ್: ಜೋಶುವಾ ರಾಬರ್ಟ್ (ಎಂ.ಪಿ ಅಕ್ವಟಿಕ್ಸ್; ಕಾಲ: 1 ನಿ. 25.98 ಸೆ.)-1, ಅಮೋಘ್ ಎಸ್.ಎಂ. (ನಿಶಾ ಮಿಲೆಟ್ಸ್ ಈಜು ಅಕಾಡೆಮಿ)-2, ಡಿ.ಆರ್. ಕುಶಾನ್ ಗಂಗಾಟ್ಕರ್ (ಬಿಎಸಿ)-3. 100 ಮೀ. ಬಟರ್‌ಫ್ಲೈ: ಸ್ವರೂಪ್ ಸತೀಶ್ (ಸೇಂಟ್ ಪಾಲ್ಸ್ ಇಂಗ್ಲಿಷ್ ಸ್ಕೂಲ್; ಕಾಲ: 1 ನಿ. 01.56 ಸೆ.)-1, ದರ್ಶನ್ ಎಸ್. (ಬಿಎಸಿ)-2, ಹರಿಕಾರ್ತಿಕ್ ವೇಲು (ಗೋಲ್ಡನ್ ಫಿನ್ಸ್)-3

ಬಾಲಕರ ಗುಂಪು 1: 100 ಮೀ. ಬ್ಯಾಕ್‌ಸ್ಟ್ರೋಕ್: ಆಕಾಶ್ ಮಣಿ (ಬಿಎಸಿ; ಕಾಲ: 1 ನಿ. 2.61 ಸೆ.)-1, ಧ್ಯಾನ್ ಎಂ. (ಗ್ಲೋಬಲ್ ಸ್ವಿಮ್ ಸೆಂಟರ್)-2, ಆರ್. ಅಕ್ಷಯ ಶೇಟ್ (ಗ್ಲೋಬಲ್)-3. 400 ಮೀ. ಫ್ರೀಸ್ಟೈಲ್: ಶಿವಾಂಕ್ ವಿಶ್ವನಾಥ್ (ರೇ ಸೆಂಟರ್; ಕಾಲ: 4 ನಿ. 21.81 ಸೆ.)-1, ನಯನ್ ವಿಘ್ನೇಶ್ (ಎನ್‌ಎಸಿ)-2, ಪ್ರಶಂಸ್ ಎಚ್.ಎಂ. (ಬಿಎಸಿ)-3. 200 ಮೀ. ಮೆಡ್ಲೆ: ನಯನ್ ವಿಘ್ನೇಶ್ (ಎನ್‌ಎಸಿ; ಕಾಲ: 2 ನಿ.17.31 ಸೆ.)-1, ಶಿವಾಂಕ್ ವಿಶ್ವನಾಥ್ (ರೇ ಸೆಂಟರ್)-2, ಸೂರ್ಯ ಜೋಯಪ್ಪ (ಬಿಎಸಿ)-3. 100 ಮೀ. ಬಟರ್‌ಫ್ಲೈ: ಪ್ರಥಮ್ (ಡಾಲ್ಫಿನ್; ಕಾಲ: 58.74 ಸೆ.)-1, ನಯನ್ ವಿಘ್ನೇಶ್ (ಎನ್‌ಎಸಿ)-2, ರಿಷಭ್ ಸಿಂಗ್ (ಡಾಲ್ಫಿನ್)-3

ಮಹಿಳೆಯರು: ಮುಕ್ತ ವಿಭಾಗ: 50 ಮೀ. ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರಕುಮಾರ್ (ಬಿಎಸಿ; ಕಾಲ:30.19 ಸೆ.)-1, ಶಾಲಿನಿ ಆರ್ ದೀಕ್ಷಿತ್ (ಡಾಲ್ಫಿನ್)-2, ಆರುಷಿ ಅಗರವಾಲ್ (ಡಾಲ್ಫಿನ್)-3. 50 ಮೀ. ಬಟರ್‌ಫ್ಲೈ: ರಿಧಿಮಾ ವೀರೇಂದ್ರಕುಮಾರ್ (ಬಿಎಸಿ; ಕಾಲ: 30.25 ಸೆ.)-1, ಸುಹಾಸಿನಿ ಘೋಷ್ (ಡಾಲ್ಫಿನ್)-2, ನೈಶಾ ಶೆಟ್ಟಿ (ಡಾಲ್ಫಿನ್)-3.

18 ವರ್ಷಕ್ಕಿಂತ ಮೇಲಿನವರು: 200 ಮೀ. ಮೆಡ್ಲೆ: ಶೃಂಗಿ ರಾಜೇಶ್ ಬಾಂದೇಕರ್ (ಜೈನ್ ವಿವಿ: ಕಾಲ: 2 ನಿ. 37.59 ಸೆ.)-1, ಅನುಮತಿ ಚೌಗುಲೆ (ಜೈನ್)-2, ನಿಧಿ ಶಶಿಧರ (ಬಿಎಸಿ)-3. 100 ಮೀ. ಬ್ಯಾಕ್‌ಸ್ಟ್ರೋಕ್: ಶೃಂಗಿ ರಾಜೇಶ್ ಬಾಂದೇಕರ್ (ಜೈನ್; ಕಾಲ: 1 ನಿ. 11.69 ಸೆ.)-1, ಕ್ಷಿತಿಜಾ ಕೆ. (ಬಿಎಸಿ)-2, ದಿವ್ಯಾ ಘೋಷ್ (ಗ್ಲೋಬಲ್ ಸ್ವಿಮ್ ಸೆಂಟರ್)-3. 100 ಮೀ. ಬಟರ್‌ಫ್ಲೈ: ಅದ್ಯಾ ನಾಯಕ್ (ರೇ ಸೆಂಟರ್; ಕಾಲ: 1 ನಿ. 09.99 ಸೆ.)-1, ಅನುಮತಿ ಚೌಗುಲೆ (ಜೈನ್)-2, ಕ್ಷಿತಿಜಾ ಕೆ. (ಬಿಎಸಿ)-3

ಬಾಲಕಿಯರ ಗುಂಪು 1: 100 ಮೀ. ಬ್ಯಾಕ್‌ಸ್ಟ್ರೋಕ್: ಆರುಷಿ ಅಗರವಾಲ್ (ಡಾಲ್ಫಿನ್; ಕಾಲ: 1 ನಿ. 10.80 ಸೆ.)-1, ಶಾಲಿನಿ ಆರ್.ದೀಕ್ಷಿತ್ (ಡಾಲ್ಫಿನ್)-2, ಆದ್ಯಾ ಮೋಹನ್ (ಬಿಎಸಿ)-3. 400 ಮೀ. ಫ್ರೀಸ್ಟೈಲ್: ಅಶ್ಮಿತಾ ಚಂದ್ರ (ಡೆಕ್ಕನ್ ಇಂಟರ್‌ನ್ಯಾಷನಲ್ ಸ್ಕೂಲ್; ಕಾಲ: 4 ನಿ. 44.3 ಸೆ)-1, ರಿಧಿಮಾ ವೀರೇಂದ್ರಕುಮಾರ್ (ಬಿಎಸಿ)-2, ಅದಿತಿ ಎನ್.ಎಂ. (ಬಿಎಸಿ)-3. 200 ಮೀ. ಮೆಡ್ಲೆ: ಲಿನೇಶಾ ಎ.ಕೆ (ಗ್ಲೋಬಲ್; ಕಾಲ: 2 ನಿ. 37.49 ಸೆ.)-1, ನೈಶಾ ಶೆಟ್ಟಿ (ಡಾಲ್ಫಿನ್)-2, ಝೂರಾ ಜಬ್ಬಾರ್ (ಡಾಲ್ಫಿನ್)-3. 100 ಮೀ. ಬಟರ್‌ಫ್ಲೈ: ನೈಶಾ ಶೆಟ್ಟಿ (ಡಾಲ್ಫಿನ್; ಕಾಲ: 1 ನಿ. 6.90 ಸೆ.)-1, ತಿತೀಕ್ಷಾ ಎಚ್. (ಡಾಲ್ಫಿನ್)-2, ಅಶ್ಮಿತಾ ಚಂದ್ರ (ಡೆಕ್ಕನ್ ಇಂಟರ್‌ನ್ಯಾಷನಲ್ ಸ್ಕೂಲ್)-3.

ಬಾಲಕಿಯರ ಗುಂಪು 2: 100 ಮೀ. ಬ್ಯಾಕ್‌ಸ್ಟ್ರೋಕ್: ನೈಶಾ (ಬಿಎಸಿ; ಕಾಲ: 1 ನಿ. 11.26 ಸೆ.)-1, ಸಿದ್ಧಿ ಗೌತಮ್ ಶಾ (ಡಾಲ್ಫಿನ್)-2, ದಯನಿತಾ ಎಸ್. (ರೇ ಸೆಂಟರ್)-3. 100 ಮೀ. ಬಟರ್‌ಫ್ಲೈ: ಸುಹಾಸಿನಿ ಘೋಷ್ (ಡಾಲ್ಫಿನ್; ಕಾಲ: 1 ನಿ. 09.64 ಸೆ.)-1, ಜನ್ಯಾ ಬಿ.ಎಸ್. (ಬಿಎಸಿ)-2, ಸ್ಮೃತಿ ಚೇತನ್ (ಬಿಎಸಿ)-3

'ಕ್ರೀಡಾಕ್ಷೇತ್ರಕ್ಕೆ ನೆಟ್ಟಕಲ್ಲಪ್ಪನವರ ಕಾಣಿಕೆ ಅಪಾರ'

ಬೆಂಗಳೂರು: 'ನಾಡಿನ ಕ್ರೀಡಾಕ್ಷೇತ್ರದ ಬೆಳವಣಿಗೆಗೆ ಕೆ.ಎ. ನೆಟ್ಟಕಲ್ಲಪ್ಪ ಅವರು ಅಪಾರ ಕೊಡುಗೆ ನೀಡಿದ್ದಾರೆ. ಹಲವು ಕ್ರೀಡಾಪ್ರತಿಭೆಗಳ ಬೆಳವಣಿಗೆಗೆ ಪ್ರೇರಣೆಯಾಗಿದ್ದಾರೆ' ಎಂದು ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್ ಹೇಳಿದರು.

'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್' ಉದ್ಘಾಟನೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ನಾನು ಕ್ರೀಡೆಯತ್ತ ಒಲವು ಬೆಳೆಸಿಕೊಳ್ಳಲು ನೆಟ್ಟಕಲ್ಲಪ್ಪನವರೇ ಪ್ರೇರಣೆ. ಅಪಾರ ಪ್ರೋತ್ಸಾಹ ನೀಡಿದರು. ಕರ್ನಾಟಕ ಒಲಿಂಪಿಕ್ ಸಂಸ್ಥೆಯು (ಕೆಒಎ) ಆರಂಭವಾಗಿದ್ದು ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಕಚೇರಿಯಲ್ಲಿ. ಸಂಸ್ಥೆಯ ಮೊದಲ ಸಭೆ ಕೂಡ ಅಲ್ಲಿ ನಡೆದಿತ್ತು. ಅದಕ್ಕೆ ಕಾರಣರಾದವರು ನೆಟ್ಟಕಲ್ಲಪ್ಪನವರು. ಇವತ್ತು ಕೆಒಎ ದೊಡ್ಡ ಮರವಾಗಿದೆ. ಹಲವು ಕ್ರೀಡಾಪಟುಗಳ ಬೆಳವಣಿಗೆಗೆ ಕಾರಣವಾಗಿದೆ. ನಾಡಿನಲ್ಲಿ ಒಲಿಂಪಿಕ್ ಆಂದೋಲನಕ್ಕೆ ಬಲ ತುಂಬಿದೆ' ಎಂದರು. ಈಜು ಸ್ಪರ್ಧೆಯನ್ನು ಒಲಿಂಪಿಯನ್ ಈಜುಪಟು ಸಜನ್ ಪ್ರಕಾಶ್ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಕೆಒಎ ಕಾರ್ಯದರ್ಶಿ ಟಿ. ಅನಂತರಾಜು, ದ ಪ್ರಿಂಟರ್ಸ್ ಮೈಸೂರು ಲಿಮಿಟೆಡ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್, ಎನ್‌ಎಸಿಯ ನಿರ್ದೇಶಕಿ ಸುಜಾತಾ ತಿಲಕ್ ಕುಮಾರ್ ಹಾಜರಿದ್ದರು.

ಮೆಲ್ಬರ್ನ್‌ನಲ್ಲಿ ಇಂದು ಇಂಗ್ಲೆಂಡ್– ಪಾಕಿಸ್ತಾನ ಸೆಣಸು

ಟಿ20 ಕ್ರಿಕೆಟ್; ಯಾರಿಗೆ ಕಿರೀಟ?

ಜೋಸ್ ಬಟ್ಲರ್

ಬಾಬರ್ ಆಜಂ

ಟಿ20 ಬಲಾಬಲ

17 ಇಂಗ್ಲೆಂಡ್ ಗೆಲುವು
9 ಪಾಕ್ ಗೆಲುವು
27 ಒಟ್ಟು ಪಂದ್ಯಗಳು
1 ಟೈ

ಮೆಲ್ಬರ್ನ್ (ರಾಯಿಟರ್ಸ್): ಚುಟುಕು ಕ್ರಿಕೆಟ್‌ನ ವಿಶ್ವ ಚಾಂಪಿಯನ್ ಪಟ್ಟಕ್ಕಾಗಿ ಇಂಗ್ಲೆಂಡ್ ಮತ್ತು ಪಾಕಿಸ್ತಾನ ತಂಡಗಳು ಐತಿಹಾಸಿಕ ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಭಾನುವಾರ ಪೈಪೋಟಿ ನಡೆಸಲಿವೆ.

ಪೂರ್ಣ ಅವಧಿಯ ಪಂದ್ಯಕ್ಕೆ ಮಳೆ ಅನುವು ಮಾಡಿಕೊಟ್ಟರೆ, ಕ್ರಿಕೆಟ್ ಪ್ರೇಮಿಗಳಿಗೆ ರೋಚಕ ಆಟವನ್ನು ಉಣಬಡಿಸಲು ಬಾಬರ್ ಆಜಂ ಮತ್ತು ಜೋಸ್ ಬಟ್ಲರ್ ಬಳಗ ಸಜ್ಜಾಗಿದೆ.

ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಮೆಲ್ಬರ್ನ್‌ನಲ್ಲಿ ಭಾನುವಾರ ಹಾಗೂ ಫೈನಲ್ ಪಂದ್ಯದ ಮೀಸಲು ದಿನವಾದ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಎರಡೂ ದಿನಗಳಲ್ಲಿ ಆಟ ನಡೆಯದಿದ್ದರೆ, ಉಭಯ ತಂಡಗಳನ್ನು ಜಂಟಿ ಚಾಂಪಿಯನ್ ಎಂದು ಘೋಷಿಸಲಾಗುತ್ತದೆ.

ಇಂದಿನ ಹಣಾಹಣಿ 30 ವರ್ಷಗಳ ಹಿಂದೆ ಇದೇ ತಾಣದಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದ ಪುನರಾವರ್ತನೆ ಎನಿಸಿಕೊಂಡಿದೆ. 1992ರಲ್ಲಿ ನಡೆದಿದ್ದ ಫೈನಲ್‌ನಲ್ಲಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ, ಗ್ರಹಾಂ ಗೂಚ್ ನಾಯಕತ್ವದ ಇಂಗ್ಲೆಂಡ್ ಮಣಿಸಿ ಕಿರೀಟ ಮುಡಿಗೇರಿಸಿಕೊಂಡಿತ್ತು.

ಉಭಯ ತಂಡಗಳಿಗೆ ಈ ಟೂರ್ನಿಯ ಆರಂಭದಲ್ಲಿ ಹಿನ್ನಡೆ ಎದುರಾಗಿತ್ತಾದರೂ, ಅಲ್ಪ ಅದೃಷ್ಟದ ನೆರವಿನೊಂದಿಗೆ ಪುಟಿದೆದ್ದು ನಿಂತು ಫೈನಲ್ ಪ್ರವೇಶಿಸಿವೆ.

ಪಾಕಿಸ್ತಾನ ತಂಡ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿದ್ದರೆ, ಇಂಗ್ಲೆಂಡ್ ತಂಡ ಭಾರತದ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿತ್ತು.

ಏಕದಿನ ವಿಶ್ವಕಪ್ ಚಾಂಪಿಯನ್ ಆಗಿರುವ ಇಂಗ್ಲೆಂಡ್‌ಗೆ ಇದೀಗ ಟಿ20 ವಿಶ್ವಕಪ್ ಕೂಡಾ ಗೆದ್ದು ಈ ಸಾಧನೆ ಮಾಡಿದ ಮೊದಲ ತಂಡ ಎನಿಸಿಕೊಳ್ಳುವ ಉತ್ತಮ ಅವಕಾಶ ಲಭಿಸಿದೆ.

'ಈ ಪಂದ್ಯಕ್ಕೂ 1992ರ ಫೈನಲ್ ಪಂದ್ಯಕ್ಕೂ ಸಾಕಷ್ಟು ಸಾಮ್ಯತೆಗಳಿವೆ. ಇಲ್ಲಿ ಚಾಂಪಿಯನ್ ಆಗುವುದು ನಮ್ಮ ಗುರಿ. ಏಕೆಂದರೆ ಎಂಸಿಜಿಯಲ್ಲಿ ತಂಡವನ್ನು ಟ್ರೋಫಿಯತ್ತ ಮುನ್ನಡೆಸುವುದು ಹೆಮ್ಮೆಯ ಸಂಗತಿ' ಎಂದು ಬಾಬರ್ ಆಜಂ ಹೇಳಿದ್ದಾರೆ.

ಆರಂಭಿಕ ಜತೆಯಾಟ ನಿರ್ಣಾಯಕ: ಸೆಮಿಫೈನಲ್ ಪಂದ್ಯಗಳಲ್ಲಿ ಎರಡೂ ತಂಡಗಳ ಗೆಲುವಿನಲ್ಲಿ ಆರಂಭಿಕ ಜತೆಯಾಟ ನಿರ್ಣಾಯಕ ಪಾತ್ರ ವಹಿಸಿತ್ತು. ಜೋಸ್ ಬಟ್ಲರ್ ಮತ್ತು ಅಲೆಕ್ಸ್ ಹೇಲ್ಸ್ ಅವರು ಭಾರತದ ವಿರುದ್ಧ 170 ರನ್‌ಗಳ ಜತೆಯಾಟ ನೀಡಿದ್ದರೆ, ಪಾಕಿಸ್ತಾನದ ಬಾಬರ್ ಮತ್ತು ಮೊಹಮ್ಮದ್ ರಿಜ್ವಾನ್ ಅವರು ನ್ಯೂಜಿಲೆಂಡ್ ಎದುರು 105 ರನ್‌ಗಳ ಜತೆಯಾಟ ಆಡಿದ್ದರು.

ಫೈನಲ್‌ನಲ್ಲಿ ಉಭಯ ತಂಡಗಳು ಆರಂಭಿಕ ಬ್ಯಾಟರ್‌ಗಳಿಂದ ಉತ್ತಮ ಜತೆಯಾಟ ನಿರೀಕ್ಷಿಸುತ್ತಿವೆ. ಆರಂಭಿಕರ ವಿಕೆಟ್ ಬೇಗನೆ ಪಡೆಯಬೇಕಾದ ಒತ್ತಡ ಎರಡೂ ತಂಡಗಳ ಬೌಲರ್‌ಗಳ ಮೇಲಿದೆ.

ಪಾಕಿಸ್ತಾನವು ಸೆಮಿಯಲ್ಲಿ ಆಡಿದ ತಂಡವನ್ನೇ ಕಣಕ್ಕಿಳಿಸುವ ಸಾಧ್ಯತೆಯಿದೆ. ಇಂಗ್ಲೆಂಡ್ ತಂಡದಲ್ಲಿ ಬದಲಾವಣೆ ನಿರೀಕ್ಷಿಸಲಾಗಿದ್ದು, ಗಾಯದಿಂದ ಸಂಪೂರ್ಣವಾಗಿ ಚೇತರಿಸಿಕೊಂಡರೆ ವೇಗಿ ಮಾರ್ಕ್ ವುಡ್ ಮತ್ತು ಮೂರನೇ ಕ್ರಮಾಂಕದ ಬ್ಯಾಟರ್ ಡೇವಿಡ್ ಮಲಾನ್ ಅವರು ಅಂತಿಮ ಹನ್ನೊಂದರಲ್ಲಿ ಸ್ಥಾನ ಪಡೆಯಬಹುದು.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್ ಆ್ಯಪ್

ಸಾನಿಯಾ–ಶೋಯೆಬ್ ಮಧ್ಯೆ ಬಿರುಕು?

ಬೆಂಗಳೂರು: ಭಾರತದ ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಹಾಗೂ ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶೋಯೆಬ್ ಮಲಿಕ್ ದಾಂಪತ್ಯದಲ್ಲಿ ಬಿರುಕು ಮೂಡಿದೆಯೇ? ಹೌದು ಹೀಗೊಂದು ವದಂತಿ ಕೇಳಿ ಬರುತ್ತಿದೆ.

'ಕಾನೂನು ತೊಡಕುಗಳನ್ನು ನಿವಾರಿಸಿಕೊಂಡು ಈ ದಂಪತಿ ಅಧಿಕೃತವಾಗಿ ವಿಚ್ಛೇದನ ಘೋಷಣೆ ಮಾಡಲಿದ್ದಾರೆ' ಎಂದು ಪಾಕ್‌ನ 'ಜಿಯೋನ್ಯೂಸ್' ವರದಿ ಮಾಡಿದೆ. ಆದರೆ, ಈ ಬಗ್ಗೆ ಸಾನಿಯಾ ಆಗಲಿ ಅಥವಾ ಶೋಯೆಬ್ ಆಗಲಿ ಅಧಿಕೃತವಾಗಿ ಮಾಹಿತಿ ನೀಡಿಲ್ಲ. 'ಸಾನಿಯಾ ಹಾಗೂ ಶೋಯೆಬ್ ದಾಂಪತ್ಯದಲ್ಲಿ ಈ ಹಿಂದೆ ಸಾಕಷ್ಟು ಸಾರಿ ಬಿರುಕು ಮೂಡಿತ್ತು. ಆದರೆ, ಅದು ವಿಚ್ಛೇದನದ ಹಂತಕ್ಕೆ ಹೋಗಿರಲಿಲ್ಲ. ಇದೀಗ ವಿಚ್ಛೇದನದ ನಿರ್ಧಾರ ಮಾಡಿರುವ ದಂಪತಿ ಮಗುವನ್ನು ಸಹ ಪೋಷಕ ಪದ್ಧತಿ ಅಡಿ ಬೆಳೆಸುವ ತೀರ್ಮಾನ ಮಾಡಿದ್ದಾರೆ' ಎಂದು ಶೋಯೆಬ್ ಸಂಬಂಧಿ ಯೊಬ್ಬರ ಹೇಳಿಕೆ ಉಲ್ಲೇಖಿಸಿ ವರದಿ ಮಾಡಲಾಗಿದೆ.

ರಾಷ್ಟ್ರೀಯ ಅಥ್ಲೆಟಿಕ್ಸ್: ಪ್ರಿಯಾ, ಪಾವನಾಗೆ ಚಿನ್ನ

ಪ್ರಿಯಾ

ಪಾವನಾ

ಬೆಂಗಳೂರು: ಕರ್ನಾಟಕದ ಪ್ರಿಯಾ ಮೋಹನ್ ಮತ್ತು ಪಾವನಾ ನಾಗರಾಜ್ ಅವರು ಅಸ್ಸಾಂನ ಗುವಾಹಟಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳಿಗೆ ಕೊರಳೊಡ್ಡಿದರು.

ಶನಿವಾರ ನಡೆದ ಹೈಜಂಪ್ ಸ್ಪರ್ಧೆಯಲ್ಲಿ ಪಾವನಾ 1.73 ಮೀಟರ್ಸ್ ಸಾಧನೆಯೊಂದಿಗೆ ಅಗ್ರಸ್ಥಾನ ಗಳಿಸಿದರು.

400 ಮೀ. ಓಟದಲ್ಲಿ ಪ್ರಿಯಾ 53.94 ಸೆಕೆಂಡುಗಳಲ್ಲಿ ಗುರಿ ತಲುಪಿ ಸ್ವರ್ಣಪದಕ ಗಳಿಸಿದರು. ಹೀನಾ ದಾಖಲೆ: ಪಶ್ಚಿಮ ಬಂಗಾಳದ ರೆಜೋನಾ ಮಲಿಕ್ ಹೀನಾ ಅವರು 16 ವರ್ಷದೊಳಗಿನವರ 300 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಬರೆದರು. 38.57 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು ಕಳೆದ ವರ್ಷ ಕರ್ನಾಟಕದ ಉನ್ನತಿ ಅಯ್ಯಪ್ಪ ನಿರ್ಮಿಸಿದ್ದ ದಾಖಲೆಯನ್ನು (40.11 ಸೆ.) ಮೀರಿದರು.

ಐಸಿಸಿ: ಹಣಕಾಸು ಸಮಿತಿಗೆ ಶಾ ಮುಖ್ಯಸ್ಥ

ಮೆಲ್ಬರ್ನ್ (ಪಿಟಿಐ): ನ್ಯೂಜಿಲೆಂಡ್‌ನ ಗ್ರೆಗ್ ಬಾರ್ಕ್ಲೆ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಅಧ್ಯಕ್ಷರಾಗಿ ಸತತ 2ನೇ ಅವಧಿಗೆ ಪುನರಾಯ್ಕೆಯಾಗಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಅವರು ಐಸಿಸಿಯ ಹಣಕಾಸು ಮತ್ತು ವಾಣಿಜ್ಯ ವ್ಯವಹಾರಗಳ (ಎಫ್ ಮತ್ತು ಸಿಎ) ಸಮಿತಿಯ ಮುಖ್ಯಸ್ಥರಾಗಿ ಆಯ್ಕೆಯಾದರು. ಮೆಲ್ಬರ್ನ್‌ನಲ್ಲಿ ನಡೆದ ಐಸಿಸಿ ಆಡಳಿತ ಮಂಡಳಿ ಸಭೆಯಲ್ಲಿ ಮುಂದಿನ ಎರಡು ವರ್ಷಗಳ ಅವಧಿಗೆ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಕಣದಲ್ಲಿದ್ದ ಇನ್ನೊಬ್ಬ ಸ್ಪರ್ಧಿ ತವೆಂಗ್ವ ಮುಕುಲನಿ ಅವರು ಸ್ಪರ್ಧೆಯಿಂದ ಹಿಂದೆ ಸರಿದರು. ಇದರಿಂದ ಬಾರ್ಕ್ಲೆ ಆಯ್ಕೆ ಅವಿರೋಧವಾಗಿ ನಡೆಯಿತು.

ಕಬಡ್ಡಿ: ಬೆಂಗಾಲ್‌ಗೆ ಜಯ

ಪುಣೆ (ಪಿಟಿಐ): ಅತ್ಯುತ್ತಮ ಆಟವಾಡಿದ ಬೆಂಗಾಲ್ ವಾರಿಯರ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಜಯ ಗಳಿಸಿದರು.

ಇಲ್ಲಿನ ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಾಲ್ 46–27ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು. ವಿಜೇತ ತಂಡಕ್ಕಾಗಿ ಮಣಿಂದರ್ ಸಿಂಗ್ (12 ಪಾಯಿಂಟ್ಸ್) ಮತ್ತು ಶ್ರೀಕಾಂತ್ ಜಾಧವ್ (10) ಭರ್ಜರಿ ಆಟವಾಡಿದರು. ಪಂದ್ಯದ ಪ್ರಥಮಾರ್ಧದಲ್ಲಿ ಗುಜರಾತ್ 15–14ರಿಂದ ಮುಂದಿತ್ತು. ದ್ವಿತೀಯಾರ್ಧದಲ್ಲಿ ಬೆಂಗಾಲ್ ತಿರುಗೇಟು ನೀಡಿ ಗೆಲುವು ಒಲಿಸಿಕೊಂಡಿತು. ಇನ್ನೊಂದು ಪಂದ್ಯದಲ್ಲಿ ಯುಪಿ ಯೋಧಾಸ್ 41–30ರಿಂದ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು. ಮತ್ತೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 57–32ರಿಂದ ದಬಾಂಗ್ ಡೆಲ್ಲಿ ವಿರುದ್ಧ ಗೆದ್ದಿತು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	13	7	4	2	44
ಜೈಪುರ	13	8	5	0	43
ಬೆಂಗಳೂರು	12	7	4	1	41
ಯುಪಿ	13	6	5	2	40
ಮುಂಬಾ	12	7	5	0	38
ಪಟ್ನಾ	12	6	4	2	38

ಇಂದಿನ ಪಂದ್ಯಗಳು
ಯು ಮುಂಬಾ– ಪುಣೇರಿ ಪಲ್ಟನ್
ತಮಿಳ್ ತಲೈವಾಸ್– ಬೆಂಗಳೂರು ಬುಲ್ಸ್

ತಿಲೋತ್ತಮಾ, ಮೆಹುಲಿಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಮೆಹುಲಿ ಘೋಷ್ ಮತ್ತು ತಿಲೋತ್ತಮಾ ಸೇನ್ ಅವರು ಏಷ್ಯನ್ ಏರ್‌ಗನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಕೊರಿಯಾದ ಡೇಗುನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಮೀಟರ್ಸ್ ಏರ್ ರೈಫಲ್ ವಿಭಾಗದ ಫೈನಲ್‌ನಲ್ಲಿ ಮೆಹುಲಿ 16–12ರಿಂದ ಕೊರಿಯಾದ ಚೊ ಯುನ್‌ಯಂಗ್ ಅವರನ್ನು ಪರಾಭವಗೊಳಿಸಿದರು. ಮಹಿಳೆಯರ 10 ಮೀ. ಏರ್ ರೈಫಲ್ ಜೂನಿಯರ್ ವಿಭಾಗದಲ್ಲಿ ತಿಲೋತ್ತಮಾ ಹಾಗೂ ಭಾರತದವರೇ ಆದ ನ್ಯಾನ್ಸಿ ಕ್ರಮವಾಗಿ ಮೊದಲೆರಡು ಸ್ಥಾನಗಳನ್ನು ಪಡೆದರು. ಫೈನಲ್‌ನಲ್ಲಿ ತಿಲೋತ್ತಮಾ 17–12ರಿಂದ ನ್ಯಾನ್ಸಿ ಅವರಿಗೆ ಸೋಲುಣಿಸಿದರು.

ವಿಜಯ್ ಹಜಾರೆ ಟ್ರೋಫಿ: ಮಿಂಚಿದ ಶ್ರೇಯಸ್

ಶ್ರೇಯಸ್

ಕೋಲ್ಕತ್ತ: ಶ್ರೇಯಸ್ ಗೋಪಾಲ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಮೇಘಾಲಯ ತಂಡವನ್ನು 115 ರನ್‌ಗಳಿಂದ ಮಣಿಸಿ ಶುಭಾರಂಭ ಮಾಡಿತು.

ಕೋಲ್ಕತ್ತದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕರ್ನಾಟಕ 50 ಓವರ್‌ಗಳಲ್ಲಿ 259 ರನ್‌ಗಳಿಗೆ ಆಲೌಟಾಯಿತು. ಮೇಘಾಲಯ 46 ಓವರ್‌ಗಳಲ್ಲಿ 144 ರನ್ ಮಾತ್ರ ಗಳಿಸಿತು.

76 ಎಸೆತಗಳಲ್ಲಿ 64 ರನ್ ಗಳಿಸಿದ್ದಲ್ಲದೆ, 8 ಓವರ್‌ಗಳಲ್ಲಿ 21 ರನ್‌ಗಳಿಗೆ ಮೂರು ವಿಕೆಟ್ ಪಡೆದ ಶ್ರೇಯಸ್, ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ 50 ಓವರ್‌ಗಳಲ್ಲಿ 259 (ಆರ್. ಸಮರ್ಥ್ 46, ಮಯಂಕ್ ಅಗರವಾಲ್ 15, ನಿಕಿನ್ ಜೋಸ್ 13, ಮನೀಷ್ ಪಾಂಡೆ 36, ಶ್ರೇಯಸ್ ಗೋಪಾಲ್ 64, ಬಿ.ಆರ್.ಭರತ್ 32, ಅಭಿಷೇಕ್ ಕುಮಾರ್ 54ಕ್ಕೆ 3, ಚಿರಾಗ್ ಖುರಾನಾ 42ಕ್ಕೆ 2, ರಾಜೇಶ್ ಬಿಷ್ಣೋಯಿ 47ಕ್ಕೆ 2). ಮೇಘಾಲಯ 46 ಓವರ್‌ಗಳಲ್ಲಿ 144 (ಸೂರ್ಯ ರಾಯ್ 38, ಚಿರಾಗ್ ಖುರಾನಾ 32, ಶ್ರೇಯಸ್ ಗೋಪಾಲ್ 21ಕ್ಕೆ 3, ರೋನಿತ್ ಮೋರೆ 22ಕ್ಕೆ 2, ಕೆ.ಗೌತಮ್ 33ಕ್ಕೆ 3) ಫಲಿತಾಂಶ: ಕರ್ನಾಟಕಕ್ಕೆ 115 ರನ್‌ಗಳ ಗೆಲುವು

'ರಕ್ಷಣಾ ಉಪಕರಣ ತಯಾರಿಕೆ: ಹೊಸ ಪರಿಕಲ್ಪನೆಗೆ ಅನುದಾನ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಯುವ ತಂತ್ರಜ್ಞರು ತಮ್ಮ ಬಳಿಯಿರುವ ಹೊಸ ಆಲೋಚನೆಗಳು, ಪರಿಕಲ್ಪನೆಗಳನ್ನು ಡಿಆರ್‌ಡಿಒ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿದರೆ, ಅತ್ಯುತ್ತಮವಾಗಿದ್ದರೆ ಅವುಗಳಿಗೆ ಟೆಕ್ನಾಲಜಿ ಡೆವಲಪ್‌ಮೆಂಟ್ ಫಂಡ್ (ಟಿಡಿಎಫ್) ಅಡಿ ಅನುದಾನ ಸಿಗಲಿದೆ' ಎಂದು ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರ ಜಿ.ಸತೀಶ್ ರೆಡ್ಡಿ ಮಾಹಿತಿ ನೀಡಿದರು.

ಇಲ್ಲಿನ ಬಿ.ವಿ.ಬಿ ಕಾಲೇಜಿನಲ್ಲಿ ಶನಿವಾರ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ ಆಯೋಜಿಸಿದ್ದ ಡಿಫೆನ್ಸ್ ಟೆಕ್ ಕನೆಕ್ಟ್ ಸಮ್ಮೇಳನದಲ್ಲಿ 'ಆತ್ಮನಿರ್ಭರ ಭಾರತದಲ್ಲಿ ಸ್ಟಾರ್ಟ್‌ಅಪ್ಸ್ ಹಾಗೂ ಎಂಎಸ್‌ಎಂಇ ಪಾತ್ರ' ಕುರಿತು ಉಪನ್ಯಾಸ ನೀಡಿದರು. 'ತಯಾರಕರಿಗೆ ಉತ್ತೇಜನ ನೀಡಲು ಟಿಡಿಎಫ್ ಮೂಲಕ ₹ 50 ಕೋಟಿವರೆಗೆ ಅನುದಾನ ನೀಡಲಾಗುತ್ತಿದೆ. ಈಗಾಗಲೇ 60 ನವೋದ್ಯಮಗಳು ಪ್ರಯೋಜನ ಪಡೆದುಕೊಂಡಿವೆ. ರಕ್ಷಣಾ ವಲಯದ ಉಪಕರಣಗಳ ತಯಾರಿಕೆಯಲ್ಲಿ ನವೋದ್ಯಮಗಳು ಮತ್ತು ಕಿರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ವಿಪುಲ ಅವಕಾಶಗಳಿವೆ.

'ಡಿಆರ್‌ಡಿಒ ಸಹಯೋಗದಲ್ಲಿ ದೇಶದಲ್ಲಿ 20 ಸಾವಿರ ನವೋದ್ಯಮಗಳು ರಕ್ಷಣಾ ವಲಯದ ಉಪಕರಣಗಳನ್ನು ತಯಾರಿಸುವಲ್ಲಿ ತೊಡಗಿವೆ. ಅತ್ಯಾಧುನಿಕ ತಂತ್ರಜ್ಞಾನ ಬಳಸಿ, ಕಡಿಮೆ ವೆಚ್ಚದಲ್ಲಿ ತಯಾರಿಸುತ್ತಿವೆ. ಖಾಸಗಿ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ದೇಶೀಯ ರಕ್ಷಣಾ ಸಂಸ್ಥೆಗಳನ್ನೇ ಅವಲಂಬಿಸಬೇಕಾಗಿಲ್ಲ. ವಿದೇಶಗಳಿಗೂ ರಫ್ತು ಮಾಡಬಹುದು' ಎಂದರು. ವಿಶ್ವವಿದ್ಯಾಲಯದ ಡೀನ್ ಡಾ.ಪಿ.ಜಿ. ತಿವಾರಿ, ಸಿಟಿಎಫ್ ನಿರ್ದೇಶಕ ಶಿವಯೋಗಿ ತುರಮರಿ, ಡಾ.ಉಮಾ ಮುದೇನಗುಡಿ, ಪ್ರೊ.ಬಿ.ಎಲ್. ದೇಸಾಯಿ ಇದ್ದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹535

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹130

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14300
ಎಸಿ	₹7000
ಆರ್‌ಪಿ	₹8500
ಆರ್‌ಸಿ	₹4530

ಶೇ 7ಕ್ಕಿಂತ ಕೆಳಗೆ: ಆರ್‌ಬಿಐ ಗವರ್ನರ್ ವಿಶ್ವಾಸ

ಅಕ್ಟೋಬರ್‌ನಲ್ಲಿ ತಗ್ಗಲಿದೆ ಹಣದುಬ್ಬರ

ಮುಖ್ಯಾಂಶಗಳು
- ಹಣದುಬ್ಬರದ ಗುರಿ; ಬದಲಾವಣೆ ಇಲ್ಲ
- 9ನೇ ತಿಂಗಳಿನಲ್ಲಿಯೂ ಗರಿಷ್ಠ ಮಟ್ಟದಲ್ಲಿದೆ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): 'ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 7ಕ್ಕಿಂತಲೂ ಕಡಿಮೆ ಆಗಿರುವ ವಿಶ್ವಾಸ ಇದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಶನಿವಾರ ಹೇಳಿದ್ದಾರೆ.

'ಬೆಲೆ ಏರಿಕೆಯೇ ದೊಡ್ಡ ಸವಾಲು ಎಂದಿರುವ ಅವರು, 'ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ಕಳೆದ ಆರರಿಂದ ಏಳು ತಿಂಗಳುಗಳಲ್ಲಿ ತೆಗೆದುಕೊಂಡಿರುವ ಕ್ರಮಗಳಿಂದಾಗಿ ಅಕ್ಟೋಬರ್‌ನಲ್ಲಿ ಹಣದುಬ್ಬರವು ಇಳಿಕೆ ಆಗುವ ನಿರೀಕ್ಷೆ ಮಾಡಲಾಗಿದೆ' ಎಂದು ಸಮಾವೇಶವೊಂದರಲ್ಲಿ ತಿಳಿಸಿದ್ದಾರೆ.

'ಆರ್‌ಬಿಐ ರೆಪೊ ದರ ಹೆಚ್ಚಿಸಿದ್ದರೆ, ಕೇಂದ್ರ ಸರ್ಕಾರವು ಪೂರೈಕೆ ವ್ಯವಸ್ಥೆ ಸುಧಾರಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಪ್ರಕಟಿಸಿದೆ' ಎಂದು ತಿಳಿಸಿದ್ದಾರೆ.

ಅಕ್ಟೋಬರ್ ತಿಂಗಳ ಚಿಲ್ಲರೆ ಹಣದುಬ್ಬರದ ಅಂಕಿ–ಅಂಶವು ಸೋಮವಾರ ಬಿಡುಗಡೆ ಆಗುವ ನಿರೀಕ್ಷೆ ಮಾಡಿರುವುದಾಗಿ ಅವರು ಹೇಳಿದ್ದಾರೆ. 'ಹಣದುಬ್ಬರದ ಗುರಿಯನ್ನು ಬದಲಾಯಿಸುವ ಅಗತ್ಯ ಇಲ್ಲ. ಏಕೆಂದರೆ ಶೇ 6ಕ್ಕಿಂತ ಹೆಚ್ಚಿನ ಮಟ್ಟದ ಹಣದುಬ್ಬರವು ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ' ಎಂದು ದಾಸ್ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ 7ರಷ್ಟು ಇದ್ದಿದ್ದು, ಆಹಾರ ಮತ್ತು ಇಂಧನ ವೆಚ್ಚದಲ್ಲಿ ಏರಿಕೆ ಆಗಿದ್ದರಿಂದ ಸೆಪ್ಟೆಂಬರ್‌ನಲ್ಲಿ ಶೇ 7.4ಕ್ಕೆ ಏರಿಕೆ ಆಗಿತ್ತು.

ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುವ ಪ್ರಮುಖ ಆರ್ಥಿಕತೆಯಾಗಿಯೇ ಭಾರತ ಮುಂದುವರಿಯಲಿದೆ ಎನ್ನುವ ವಿಶ್ವಾಸವನ್ನು ದಾಸ್ ವ್ಯಕ್ತಪಡಿಸಿದ್ದಾರೆ.

ದೇಶದ ಆರ್ಥಿಕ ತಳಹದಿ ಬಲಿಷ್ಠವಾಗಿ ಇರುವುದು ಹಾಗೂ ಹಣಕಾಸು ವಲಯವು ಸ್ಥಿರವಾಗಿ ಇರುವುದರಿಂದ 2022–23ರಲ್ಲಿ ಜಿಡಿಪಿಯು ಶೇ 7ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದಿದ್ದಾರೆ.

ಮುಂಬೈ ಧಾರಣೆ

ಶೇಂಗಾ

12–11-2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10600-10650
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	1360 (1360)
ಪಾಮ್ ವಾರದ ಡೆಲಿವರಿ	995 (993)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,200 (52,150)
ಬೆಳ್ಳಿ ಕೆ.ಜಿ 61,500 (61,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಟ್ವಿಟರ್ ದಿವಾಳಿ: ಮಸ್ಕ್ ಎಚ್ಚರಿಕೆ

ಸ್ಯಾನ್ ಫ್ರಾನ್ಸಿಸ್ಕೊ (ರಾಯಿಟರ್ಸ್/ಎಪಿ): ಟ್ವಿಟರ್ ದಿವಾಳಿಯಾಗುವ ಸಾಧ್ಯತೆ ಇದೆ ಎಂದು ಕಂಪನಿಯ ಮಾಲೀಕ ಇಲಾನ್ ಮಸ್ಕ್ ಉದ್ಯೋಗಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಹಿರಿಯ ಉದ್ಯೋಗಿಗಳು ಕಂಪನಿಯಿಂದ ಹೊರನಡೆದ ಬೆನ್ನಲ್ಲೇ ಮಸ್ಕ್ ಈ ಎಚ್ಚರಿಕೆ ನೀಡಿದ್ದಾರೆ. ಜಾಹೀರಾತು ವರಮಾನ ಕುಸಿಯುತ್ತಿದ್ದು, ಅದನ್ನು ಸರಿದೂಗಿಸಲು ಚಂದಾದಾರಿಕೆ ವರಮಾನ ಹೆಚ್ಚಳ ಆಗದೇ ಇದ್ದರೆ ಮುಂಬರುವ ಆರ್ಥಿಕ ಕುಸಿತದಿಂದ ಕಂಪನಿಗೆ ಉಳಿದುಕೊಳ್ಳುವುದು ಕಷ್ಟವಾಗಲಿದೆ ಎಂದು ಉದ್ಯೋಗಿಗಳಿಗೆ ಬರೆದಿರುವ ಇ–ಮೇಲ್‌ನಲ್ಲಿ ತಿಳಿಸಿದ್ದಾರೆ. ಮುಖ್ಯ ಮಾಹಿತಿ ಸುರಕ್ಷತಾ ಅಧಿಕಾರಿ ಲಿಯಾ ಕಿಸ್ನರ್ ಸೇರಿದಂತೆ ಉನ್ನತ ಹುದ್ದೆಯಲ್ಲಿದ್ದವರು ಕಂಪನಿಗೆ ರಾಜೀನಾಮೆ ನೀಡಿದ್ದಾರೆ.

ಉದ್ಯೋಗ ಕಡಿತಕ್ಕೆ ಮುಂದಾದ ಡಿಸ್ನಿ

ಲಾಸ್ ಏಂಜಲಿಸ್ (ರಾಯಿಟರ್ಸ್): ಅಮೆರಿಕದಲ್ಲಿ ಎದುರಾಗಿರುವ ಆರ್ಥಿಕ ಅನಿಶ್ಚಿತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಾಲ್ಟ್ ಡಿಸ್ನಿ ಕಂಪನಿಯು ಹೊಸ ನೇಮಕಾತಿ ಸ್ಥಗಿತಗೊಳಿಸಲು ಮತ್ತು ಒಂದಷ್ಟು ಉದ್ಯೋಗ ಕಡಿತ ಮಾಡಲು ಯೋಜಿಸುತ್ತಿದೆ.

ಡಿಸ್ನಿ+ ಸ್ಟ್ರೀಮಿಂಗ್ ಸೇವೆಯನ್ನು ಲಾಭದಾಯಕ ಆಗಿಸುವ ನಿಟ್ಟಿನಲ್ಲಿ ವೆಚ್ಚ ನಿರ್ವಹಣೆ ಮಾಡಲು ಈ ಕ್ರಮ ಕೈಗೊಳ್ಳುತ್ತಿರುವುದಾಗಿ ಸಿಇಒ ಬಾಬ್ ಚಾಪೆಕ್ ಅವರು ಕಂಪನಿಯ ಮುಖ್ಯಸ್ಥರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ತೀರಾ ಅಗತ್ಯ ಇರುವ ಕಡೆಗಳಲ್ಲಿ ಸೀಮಿತ ಸಂಖ್ಯೆಯಲ್ಲಿ ಮಾತ್ರವೇ ನೇಮಕ ನಡೆಯಲಿದೆ. ವೆಚ್ಚ ತಗ್ಗಿಸಿಕೊಳ್ಳುವ ಭಾಗವಾಗಿ ಸಣ್ಣ ಪ್ರಮಾಣದಲ್ಲಿ ಸಿಬ್ಬಂದಿ ಕಡಿತದ ನಿರೀಕ್ಷೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ಕಂಪನಿಯ ತ್ರೈಮಾಸಿಕದ ಆರ್ಥಿಕ ಸಾಧನೆಯು ಮಾರುಕಟ್ಟೆಯ ನಿರೀಕ್ಷೆಯನ್ನು ತಲುಪಿಲ್ಲ. ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಸ್ಟ್ರೀಮಿಂಗ್ ಸೇವೆಯು ನಾಲ್ಕನೇ ತ್ರೈಮಾಸಿಕದಲ್ಲಿ 1.2 ಕೋಟಿ ಚಂದಾದಾರರನ್ನು ಪಡೆದುಕೊಂಡಿದೆ. ಆದರೆ, ಕಾರ್ಯಾಚರಣಾ ನಷ್ಟವು ₹12,300 ಕೋಟಿಯಷ್ಟಾಗಿದೆ. 2024ನೇ ಹಣಕಾಸು ವರ್ಷದ ವೇಳೆಗೆ ಡಿಸ್ನಿ+ ಲಾಭಗಳಿಸಲಿದೆ ಎಂದು ಕಂಪನಿಯು ತಿಳಿಸಿದೆ.

ಶ್ರೀ ಶ್ರೀ ರವಿಶಂಕರ ಗುರೂಜಿಗೆ ಪ್ರಶಸ್ತಿ

ಅಟ್ಲಾಂಟಾದ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಕೇಂದ್ರದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ ಗುರೂಜಿ ಅವರಿಗೆ 'ಗಾಂಧಿ ಪೀಸ್ ಪಿಲಿಗ್ರಿಮ್' ಪ್ರಶಸ್ತಿ ನೀಡಲಾಯಿತು.

ವಾಷಿಂಗ್ಟನ್ (ಪಿಟಿಐ): ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ ಗುರೂಜಿ ಅವರಿಗೆ ಅಮೆರಿಕದ ಗಾಂಧಿ ಪ್ರತಿಷ್ಠಾನವು ಪ್ರತಿಷ್ಠಿತ 'ಗಾಂಧಿ ಪೀಸ್ ಪಿಲಿಗ್ರಿಮ್' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಅಟ್ಲಾಂಟಾದ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ಸೋದರಳಿಯ ಐಸಾಕ್ ಫಾರಿಸ್ ಅವರು ಈ ಪ್ರಶಸ್ತಿಯನ್ನು ಗುರೂಜಿ ಅವರಿಗೆ ಪ್ರದಾನ ಮಾಡಿದರು. ಈ ವೇಳೆ ಭಾರತದ ಕಾನ್ಸುಲ್ ಜನರಲ್ ಡಾ. ಸ್ವಾತಿ ಕುಲಕರ್ಣಿ ಉಪಸ್ಥಿತರಿದ್ದರು.

'ಗುರೂಜಿ ಅವರ ಮಹೋನ್ನತ ಸೇವೆ ಮತ್ತು ಮಾನವೀಯತೆಯ ಆಧಾರದ ಮೇಲೆ ಜಾಗತಿಕವಾಗಿ ಬದಲಾವಣೆ ತರಲು ಅವರು ಶ್ರಮಿಸುತ್ತಿರುವುದನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಗಾಂಧಿ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಅವರು ಶಾಂತಿ, ಅಹಿಂಸೆಯನ್ನು ಪ್ರತಿಪಾದಿಸಿದರು. ಈ ಇಬ್ಬರು ನಾಯಕರಿಂದ ಸ್ಫೂರ್ತಿ ಪಡೆದಿರುವ ಗುರೂಜಿ ಅವರು ಜಾಗತಿಕ ಶಾಂತಿ ಸ್ಥಾಪನೆಗೆ ಶ್ರಮಿಸುತ್ತಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ನಿರ್ಬಂಧ ಬಿಗಿಗೊಳಿಸಿದ ಚೀನಾ

ಬೀಜಿಂಗ್ (ಎಪಿ): ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ಏರಿಕೆಯಾದ ಹಿನ್ನೆಲೆಯಲ್ಲಿ ಚೀನಾ ನಿರ್ಬಂಧಗಳನ್ನು ಮತ್ತಷ್ಟು ಕಠಿಣ ಮಾಡಿದೆ. 18 ಲಕ್ಷ ಜನಸಂಖ್ಯೆ ಇರುವ ದಕ್ಷಿಣ ಚೀನಾದ ಗ್ವಾಂಗ್ಝೌ ನಗರದಲ್ಲಿ ಯಾರೂ ಮನೆಯಿಂದ ಹೊರಬರದಂತೆ ಸೂಚಿಸಲಾಗಿದೆ, ಶಾಲೆಗಳನ್ನು ಬಂದ್ ಮಾಡಲಾಗಿದೆ.

ರಾಷ್ಟ್ರೀಯ ಆರೋಗ್ಯ ಆಯೋಗದ ಪ್ರಕಾರ ಗ್ವಾಂಗ್ಝೌನಲ್ಲಿ ಒಟ್ಟು 3,775 ಪ್ರಕರಣಗಳು ವರದಿಯಾಗಿವೆ. ಈ ಪೈಕಿ 2,996 ಪ್ರಕರಣಗಳು ಸೋಂಕು ಲಕ್ಷಣರಹಿತವಾಗಿವೆ. ಕಳೆದ 24 ಗಂಟೆಗಳಲ್ಲಿ ದೇಶದಾದ್ಯಂತ 11,773 ಕೊರೊನಾ ಪ್ರಕರಣಗಳು ದೃಢಪಟ್ಟಿವೆ. ಈ ಪೈಕಿ 10,351 ಮಂದಿಗೆ ಸೋಂಕು ಲಕ್ಷಣರಹಿತವಾಗಿದೆ.

ಹಡಗಿನಲ್ಲಿ 800 ಮಂದಿಗೆ ಕೋವಿಡ್

ಸಿಡ್ನಿ: ಆಸ್ಟ್ರೇಲಿಯಾದ ಸಿಡ್ನಿ ನಗರದ ಬಂದರಿನಲ್ಲಿ ಲಂಗರು ಹಾಕಿರುವ 'ಮೆಜೆಸ್ಟಿಕ್ ಪ್ರಿನ್ಸಸ್' ಹಡಗಿನಲ್ಲಿ ಬರೋಬ್ಬರಿ 800 ಮಂದಿ ಪ್ರಯಾಣಿಕರಲ್ಲಿ ಕೋವಿಡ್ ದೃಢಪಟ್ಟಿದೆ. ಈ ಸಂಬಂಧ ಕಟ್ಟೆಚ್ಚರದ ಸೂಚನೆ ನೀಡಿರುವ ಆಸ್ಟ್ರೇಲಿಯಾದ ಗೃಹ ಸಚಿವಾಲಯ ಕೋವಿಡ್ ನಿಯಮಗಳು ಮತ್ತು ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶಿಸಿದೆ.

ಪ್ರಕರಣದ ಬಗ್ಗೆ ಮಾಹಿತಿ ನೀಡಿರುವ ಗೃಹ ಸಚಿವ ಕ್ಲಾರ್ ಓ'ನೀಲ್, 'ಸ್ಥಳದಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಪಾಲನೆ ಮಾಡಲಾಗುತ್ತಿದೆ. ಮೆಜೆಸ್ಟಿಕ್ ಪ್ರಿನ್ಸಸ್‌ನಿಂದ ಪ್ರಯಾಣಿಕರನ್ನು ಹೊರ ತರುವ ಬಗ್ಗೆ ಚರ್ಚೆ ನಡೆಯುತ್ತಿದೆ' ಎಂದು ಹೇಳಿದ್ದಾರೆ.

ನೇಪಾಳ, ಉತ್ತರ ಭಾರತದಲ್ಲಿ ಮತ್ತೆ ಭೂಕಂಪ

ನವದೆಹಲಿ (ಪಿಟಿಐ): ನೇಪಾಳ ಹಾಗೂ ಉತ್ತರ ಭಾರತದ ಹಲವು ಕಡೆಗಳಲ್ಲಿ ಶನಿವಾರ ರಾತ್ರಿ 8 ಗಂಟೆಯ ಸುಮಾರಿಗೆ ಭೂಕಂಪ ಸಂಭವಿಸಿದ್ದು, ನೇಪಾಳದಲ್ಲಿ ಕಂಪನದ ಪ್ರಮಾಣ ರಿಕ್ಟರ್ ಮಾಪಕದಲ್ಲಿ 5.4ರಷ್ಟಿತ್ತು. ಹಾನಿಯ ವರದಿಯಾಗಿಲ್ಲ.

ದೆಹಲಿ–ಎನ್‌ಸಿಆರ್ ಮತ್ತು ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಕಂಪನದ ಅನುಭವ ಆಗಿದೆ. ನೇಪಾಳದ ಸಿಲಂಗಾ ಪಟ್ಟಣದಿಂದ 3 ಕಿ.ಮೀ ದೂರದ ಭೂಮಿಯ 10 ಕಿ.ಮೀ ಆಳದಲ್ಲಿ ಭೂಕಂಪನ ಕೇಂದ್ರ ಬಿಂದು ದಾಖಲಾಗಿದೆ. ಉತ್ತರಾಖಂಡದ ಪಿಥೋರಗಢ, ಮುನ್ಸಿಯಾರಿ ಮತ್ತು ಗಂಗೋಲಿಹಟ್‌ನಲ್ಲಿ ಭೂಕಂಪದ ವರದಿಯಾಗಿದೆ. 3 ದಿನಗಳ ಹಿಂದಷ್ಟೇ ನೇಪಾಳದಲ್ಲಿ 6.3 ತೀವ್ರತೆಯ ಭೂಕಂಪ ಸಂಭವಿಸಿ 6 ಮಂದಿ ಮೃತಪಟ್ಟಿದ್ದರು.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 13 ನವೆಂಬರ್ 2022

ಕಲೆ: ಬೆಳಕು ಎಸ್. ಜಿ.
2ನೇ ತರಗತಿ, ಯೂನಿಟಿ ಶಾಲೆ ನಂಜನಗೂಡು

ಕಲೆ: ಗುಜ್ಜಾರ್

ಮೂವರು ಮುದುಕರು

ದಿವಂಗತ ಎನ್. ಶ್ರೀನಿವಾಸ ಉಡುಪ ಅವರ ಇನ್ನೂ ಅಚ್ಚಿನಲ್ಲಿರುವ ಕಾವ್ಯ ಸಂಕಲನ 'ಪಾಪಚ್ಚಿ ಪದ್ಯಗಳು' ಕೃತಿಯಿಂದ ಆಯ್ದ ಶಿಶುಪದ್ಯ. ಇನ್ನಷ್ಟು 'ಕಂದ ಪದ್ಯ'ಗಳು ಪುಟ 10ರಲ್ಲಿ

ಹಳ್ಳದಾಚೆ ಕೊಳ್ಳದಲ್ಲಿ ಮೂರು ಮುದುಕರಿದ್ದರು
ಬೆಳ್ಳನೆ ಬೆಳುದಿಂಗಳಲ್ಲಿ ಅವರು ಯಾಕೊ ಎದ್ದರು.

ಮೊದಲ ಮುದುಕ 'ಚಳಿ' ಎನ್ನುತ ಮುಗಿಲನೆಳೆದು ಹೊದ್ದನು!
'ಹಸಿವು, ಹಸಿವು' ಎನ್ನುತೊಬ್ಬ ಇಡೀ ಬೆಟ್ಟ ಮೆದ್ದನು!
ಮೂರನೇ ಮುದುಕ ಎದ್ದು 'ನೀರು ಬೇಕು' ಎಂದನು
ಬೊಗಸೆಯಲ್ಲಿ ಮೊಗೆದು ಮೊಗೆದು, ಇಡೀ ಹಳ್ಳ ಕುಡಿದನು!

ಬೆಳಗಾಯಿತು; ಸೂರ್ಯ ಬಂದ: ಆಕಾಶವ ಹುಡುಕಿದ
'ಅಯ್ಯೋ, ಆಗಸವೆ ಇಲ್ಲ! ಮೂಡಲೆಲ್ಲಿ?'– ಮಿಡುಕಿದ!

ಹಣ್ಣ ಅರಸಿ ತಿನ್ನಲೆಂದು ಹಕ್ಕಿ ಹಾರಿ ಬಂದವು
'ಬೆಟ್ಟವಿಲ್ಲ, ಮರಗಳಿಲ್ಲ, ಹೊಟ್ಟೆಗೇನು?'– ನೊಂದವು
ಆನೆ, ಸಿಂಹ, ಹುಲಿ, ಜಿಂಕೆ ನೀರು ಕುಡಿಯಬಂದವು
'ಹಳ್ಳದಲ್ಲಿ ನೀರೆ ಇಲ್ಲ, ಏನು ಗತಿ!' ಎಂದವು.

ಮೂರು ಮುದುಕರಿದನು ಕಂಡು ತುಂಬ ನೊಂದುಕೊಂಡರು
ತಾವು ಮಾಡಿದಂಥ ತಪ್ಪು ಎಂಥದೆಂದು ಕಂಡರು.

ಮೊದಲ ಮುದುಕ ಮೈಯ ಒದರಿ ಆಕಾಶವ ಎಸೆದನು
ಎರಡನೆಯವ ಬೆಟ್ಟವನ್ನು ಹೊಟ್ಟೆಯಿಂದ ಹಿಸಿದನು
ಮೂರನೇ ಮುದುಕ ಕುಡಿದ ನೀರೆಲ್ಲವ ಉಗುಳಿದ
ತಾ ಮಾಡಿದ ತಪ್ಪಿಗಾಗಿ ಬಹಳ ಬಹಳ ಮರುಗಿದ!

ಬಿಸಿಲು ಕೊಟ್ಟ ಸೂರ್ಯ; ಗಾಳಿ ಹಿತವಾಗಿ ಬೀಸಿತು!
ಹೂವರಳಿತು; ಹಕ್ಕಿ ಹಾಡಿ ಮೃಗಸಂಕುಲ ತಣಿಯಿತು!

ಮುದ್ದು ಮಕ್ಕಳೇ, ಪ್ರತೀ ದಿನ ನಿಮ್ಮದೇ ದಿನವಾದರೂ ನಾಳೆ ನಿಮ್ಮ ಪಾಲಿಗೆ ಇನ್ನೂ ವಿಶೇಷ ದಿನ. ಮಕ್ಕಳ ದಿನಾಚರಣೆ ಹೊಸ್ತಿಲಲ್ಲಿ ಸುಧಕ್ಕಜ್ಜಿ, ಈಶ್ವರ್‌ಚಂದ್ರ ಅಜ್ಜ ಅವರು ಬರೆದ ಕಥೆಗಳು, ಶ್ರೀನಿವಾಸ ಅಜ್ಜ ಬರೆದ ಪಾಪಚ್ಚಿ ಪದ್ಯಗಳು, ಇಲಿಯ ಹಲ್ಲು, ಆನೆಯ ಸೊಂಡಿಲು ಮತ್ತು ನಾಯಿಯ ಬಾಲದ ಕುರಿತ ರಸವತ್ತಾದ ಮಾಹಿತಿಗಳನ್ನು ಭಾನುವಾರದ ಪುರವಣಿ ನಿಮಗಾಗಿ ಹೊತ್ತು ತಂದಿದೆ...

ಅಬ್ಬಬ್ಬಾ ಎಂತಹ ಪೋಸು! ಬಾಲ್ಯದ ಕನಸುಗಳು ಇಲ್ಲಿ ಕಿಕ್ಕಿರಿದು ತುಂಬಿವೆ. ಭವಿಷ್ಯದ ಮೇಲೊಂದು ಭರವಸೆಯ ನೋಟ ಇದೆ. ಏನನ್ನಾದರೂ ಸಾಧಿಸುವ ಆತ್ಮಬಲವೂ ಈ ನೋಟಕ್ಕೆ ಜತೆಯಾಗಿದೆ... ಚಿತ್ರ: ಪಾರಿಜಾತ ಬುದಿಧಿ

ರಾಜಕುಮಾರಿಯ ಪ್ರಶ್ನೆ

ಸುಧಾಮೂರ್ತಿ

ಹಿಂದೆ ಕೋಸಲ ರಾಜ್ಯದಲ್ಲಿ 'ರತ್ನಾವಳಿ' ಎಂಬ ಬುದ್ಧಿವಂತ ಸುಂದರ ರಾಜಕುಮಾರಿ ಇದ್ದಳು. ಅವಳಿಗೆ ಬುದ್ಧಿವಂತ ರಾಜಕುಮಾರನನ್ನು ಮದುವೆಯಾಗುವ ಮನಸ್ಸಿತ್ತು. ಹೀಗಾಗಿ ಅವಳ ಪ್ರಶ್ನೆಗೆ ಉತ್ತರಿಸಿದವರನ್ನು ಮಾತ್ರ ಮದುವೆಯಾಗುತ್ತೇನೆಂದೂ ಉತ್ತರಿಸದಿದ್ದಲ್ಲಿ ಆ ರಾಜಕುಮಾರರು ತನ್ನ ಸೇವಕರಾಗಿರಬೇಕೆಂದೂ ಒಂದು ಷರತ್ತನ್ನು ಇಟ್ಟಿದ್ದಳು.

ಮೊದಮೊದಲು ಇದೇನು ರಾಜಕುಮಾರಿಯ ಪ್ರಶ್ನೆ ಎಂದು ಹೀಗಳೆದು ಅನೇಕ ರಾಜಕುಮಾರರು ಪಂದ್ಯಕ್ಕೆ ಬಂದರು. ಆದರೆ, ಅವಳ ಪ್ರಶ್ನೆಗಳಿಗೆ ಉತ್ತರಿಸಲಾರದೆ ಸೋತು ಅವಳ ಸೇವಕರಾದರು. ಇದನ್ನು ಅರಿತು ಮುಂದೆ ಬುದ್ಧಿವಂತರೂ ಅವಳ ಬಳಿ ಸುಳಿಯಲಿಲ್ಲ.

ಸಿಂಧೂರ ದೇಶದ ಮಹಾರಾಜನಿಗೆ ನಾಲ್ಕು ಜನ ಗಂಡು ಮಕ್ಕಳು. ಅವರೆಲ್ಲರೂ ಬುದ್ಧಿವಂತರೇ. ಮೊದಲನೆಯ ರಾಜಕುಮಾರ 'ಅಮೃತೇಶ' ರತ್ನಾವಳಿಯ ಪಂದ್ಯಕ್ಕೆ ಬಂದ. ರತ್ನಾವಳಿ ಅವನಿಗೆ ಎರಡು ಚಿತ್ರಗಳನ್ನು ತೋರಿಸಿದಳು. ಒಂದನೇ ಚಿತ್ರದಲ್ಲಿ ಸುಂದರವಾದ ಒಂದು ಹೂವಿನ ತೋಟ, ಅದಕ್ಕೆ ಸುತ್ತಲೂ ಕಟ್ಟಿಗೆಯ ಬೇಲಿಯಿದ್ದಿತು. ಇನ್ನೊಂದು ಚಿತ್ರದಲ್ಲಿ ಆ ಕಟ್ಟಿಗೆಯ ಬೇಲಿ ಕತ್ತರಿಯಾಗಿ ಹೂವಿನ ತೋಟವನ್ನು ಕತ್ತರಿಸಿತ್ತು. ರತ್ನಾವಳಿ ಅದರ ಅರ್ಥವನ್ನು ಕೇಳಿದಳು.

ರಾಜಕುಮಾರ ಅಮೃತೇಶನಿಗೆ ಅದರ ಅರ್ಥವೇ ಹೊಳೆಯಲಿಲ್ಲ.

'ಸರಿ ಹಾಗಿದ್ದರೆ, ಇನ್ನುಮುಂದೆ ನೀನು ನನ್ನ ಸೇವಕ' ಎಂದಳು ರತ್ನಾವಳಿ.

ಎಷ್ಟು ದಿನವಾದರೂ ರಾಜಕುಮಾರ ಅಮೃತೇಶ ಬಾರದಿರಲು, ಎರಡನೇ ರಾಜಕುಮಾರ ಲಕ್ಷ್ಮೀಶ ಅಣ್ಣನನ್ನು ಹುಡುಕುತ್ತಾ ಬಂದ. ದಾರಿಯಲ್ಲಿ ಒಬ್ಬ ಮುದುಕ ತನ್ನ ಬೆನ್ನಮೇಲೆ ಹೊರಲಾರದಷ್ಟು ಕಟ್ಟಿಗೆಯ ಹೊರೆಯನ್ನು ಹೊತ್ತಿದ್ದರೂ, ಇನ್ನೂ ಕಟ್ಟಿಗೆಯ ಚೂರು ಹೆಕ್ಕುತ್ತಿದ್ದುದನ್ನು ಲಕ್ಷ್ಮೀಶ ನೋಡಿದ.

'ತಾತ, ನಿಮಗೆ ಸಹಾಯ ಮಾಡಲೇ' ಎಂದು ಲಕ್ಷ್ಮೀಶ ಕೇಳಿದರೂ, ಆತ ಉತ್ತರಿಸದೇ ತನ್ನ ಕೆಲಸ ಮುಂದುವರೆಸಿದ.

ಲಕ್ಷ್ಮೀಶ ರತ್ನಾವಳಿಯನ್ನು ಭೇಟಿ ಮಾಡಿದ.

'ರಾಜಕುಮಾರನೇ, ದಾರಿಯಲ್ಲಿ ನೀನೇನು ಕಂಡೆ?'

ಲಕ್ಷ್ಮೀಶ ವಿವರವಾಗಿ ತಾನು ಕಂಡಿದ್ದನ್ನು ಹೇಳಿದ.

'ಇದರರ್ಥವೇನು' ಎಂದು ಕೇಳಿದಳು ರತ್ನಾವಳಿ.

'ನನಗೆ ಗೊತ್ತಿಲ್ಲ'

'ಹಾಗಾದರೆ, ಇನ್ನು ನೀನು ನನ್ನ ಸೇವಕ' ಎಂದಳು ರತ್ನಾವಳಿ.

ಬಹಳ ದಿನಗಳಾದರೂ ಇಬ್ಬರು ಅಣ್ಣಂದಿರೂ ಬಾರದಿರಲು ಮೂರನೆಯ ರಾಜಕುಮಾರ ವಜ್ರೇಶ ಹೊರಟ. ಬರುತ್ತ ದಾರಿಯಲ್ಲಿ ಆತ ಒಂದು ದೊಡ್ಡಕೆರೆಯಿಂದ ನೀರು ಉಕ್ಕಿ ಉಕ್ಕಿ ಹೊರಗೆ ಹರಿದು, ಕೆರೆ ಬರಿದಾಗುವುದನ್ನು ಆಶ್ಚರ್ಯದಿಂದ ನೋಡಿ, ರತ್ನಾವಳಿಯ ಬಳಿ ಬಂದು ತಲುಪಿದ. ರತ್ನಾವಳಿ ಆತನಿಗೆ ದಾರಿಯಲ್ಲಿ ಕಂಡಿದ್ದನ್ನು ವಿವರಿಸಲು ಕೇಳಿದಳು.

'ನನಗೆ ಗೊತ್ತಿಲ್ಲ' ಎಂದ ವಜ್ರೇಶ.

ಅವನನ್ನೂ ಸೇವಕನನ್ನಾಗಿ ಮಾಡಿಕೊಂಡಳು ರತ್ನಾವಳಿ.

ಮೂರೂ ಜನ ಅಣ್ಣಂದಿರನ್ನು ಹುಡುಕಿಕೊಂಡು ನಾಲ್ಕನೆಯ ರಾಜಕುಮಾರ ಭರತೇಶ ಅರಮನೆಗೆ ಒಂದು ರತ್ನಾವಳಿಯನ್ನು ಭೇಟಿಯಾಗಿ, 'ನಾನು ಬಂದಿರುವುದು ನನ್ನ ಅಣ್ಣಂದಿರನ್ನು ಬಿಡಿಸಲು. ನೀನು ಯಾವ ಪ್ರಶ್ನೆಗಳನ್ನು ನನ್ನ ಅಣ್ಣಂದಿರಿಗೆ ಕೇಳಿದೆ? ಅದನ್ನು ನನಗೆ ಹೇಳು, ನಾನು ಉತ್ತರಿಸುತ್ತೇನೆ' ಎಂದ.

ರತ್ನಾವಳಿ ಅಚ್ಚರಿಯಿಂದ 'ಆಗಲಿ' ಎಂದು ಪ್ರಶ್ನೆಗಳನ್ನು ಕೇಳಿದಳು.

ಭರತೇಶ ರತ್ನಾವಳಿಯ ಪ್ರಶ್ನೆಗೆ ಉತ್ತರಿಸಿದ.

'ನಿನ್ನ ಮೊದಲನೆಯ ಪ್ರಶ್ನೆಯ ಉತ್ತರ-ಬೇಲಿ ಎಂಬುದು ಅರಸನ ಅಧಿಕಾರ, ಅರಸನೇ ಪ್ರಜೆಗಳಿಗೆ ತೊಂದರೆ ಕೊಟ್ಟರೆ ರಾಜ್ಯ ಉಳಿದೀತೆ?'

ನಿನ್ನ ಎರಡನೆಯ ಪ್ರಶ್ನೆಗೆ ಉತ್ತರ- 'ಮನುಷ್ಯನ ದುರಾಸೆ. ತನಗೆ ಎಷ್ಟೇ ಇದ್ದರೂ, ಮನುಷ್ಯ ಅತಿಯಾಸೆಯಿಂದ ಮುಪ್ಪಿನಲ್ಲೂ ಅತೃಪ್ತಿಯಾಗೇ ಉಳಿಯುತ್ತಾನೆ, ಅಶಾಂತಿಯಿಂದ ಬದುಕುತ್ತಾನೆ'.

ಇನ್ನು ನಿನ್ನ ಮೂರನೇ ಪ್ರಶ್ನೆಗೆ ಉತ್ತರ- ಹೆಚ್ಚು ಬಳಸಿದಂತೆ ಹೇಗೆ ಕೆರೆಯ ನೀರು ಬರಿದಾಗುವುದೋ ಹಾಗೆಯೇ ಎಷ್ಟೇ ಹಣವಿದ್ದರೂ ದುಂದುವೆಚ್ಚದಿಂದ ಮನುಷ್ಯ ದಿವಾಳಿಯಾಗುತ್ತಾನೆ.

'ರಾಜಕುಮಾರನೆ, ಇನ್ನೂ ಎರಡು ಚಿತ್ರಗಳನ್ನು ತೋರಿಸುತ್ತೇನೆ. ಅದರ ಅರ್ಥವನ್ನು ವಿವರಿಸು' ಎಂದು ಎರಡು ಚಿತ್ರಗಳನ್ನು ತೋರಿಸಿದಳು.

ಒಂದರಲ್ಲಿ ದೊಡ್ಡ ಅರಮನೆ ಕುಸಿಯುತ್ತಿರುವ ಚಿತ್ರವಿತ್ತು. ಎರಡನೆಯದರಲ್ಲಿ ಒಂದು ಬಲವಾದ ಹದ್ದು, ಹಣ್ಣು ತುಂಬಿದ ಗಿಡದಲ್ಲಿ ಕುಳಿತಿದ್ದರೂ, ಚಿಕ್ಕ ಚಿಕ್ಕ ಪಕ್ಷಿಗಳನ್ನು ತಿನ್ನುವ ಚಿತ್ರವಿತ್ತು.

'ಎಷ್ಟೇ ದೊಡ್ಡ ಅರಮನೆಯಿದ್ದರೇನಾಯಿತು. ಅದರ ಬುನಾದಿ ಸರಿ ಇಲ್ಲದಿದ್ದರೆ ಅದು ಕುಸಿದು ಬಿದ್ದೀತು. ಅಂತೆಯೇ ಬಾಳಿನಲ್ಲಿ ಎಷ್ಟೇ ಹಣ ಗಳಿಸಿದರೂ ಸರಿಯಾದ ಮೌಲ್ಯವಿರದಿದ್ದರೆ ಬಾಳು ಹಾಳಾಗುವುದು. ಇದು ಮೊದಲನೆ ಚಿತ್ರದ ಅರ್ಥ. ಇನ್ನು ಎರಡನೆಯ ಚಿತ್ರ. ಕ್ರೂರವಾದ ಮನುಷ್ಯನಿಗೆ ಅಧಿಕಾರ ಬಂದರೆ ಆತ ಕಾರಣವಿಲ್ಲದೆಯೂ ಬಲಹೀನರನ್ನು ಹಿಂಸಿಸುತ್ತಾನೆ.'

ಭರತೇಶನ ಮಾತಿನಿಂದ ರತ್ನಾವಳಿ ನಿಬ್ಬೆರಗಾದಳು.

'ರಾಜಕುಮಾರ, ನೀನೊಂದು ಪ್ರಶ್ನೆಯನ್ನು ಕೇಳು ನಾನು ಉತ್ತರಿಸುತ್ತೇನೆ. ನಾನು ಉತ್ತರಿಸದಿದ್ದರೆ ನಿನ್ನನ್ನು ಮದುವೆಯಾಗುತ್ತೇನೆ'. ಒಂದು ಕ್ಷಣ ಭರತೇಶ ವಿಚಾರ ಮಾಡಿ ಕೇಳಿದ, 'ರತ್ನಾವಳಿ, ನನ್ನ ಯಾವ ಪ್ರಶ್ನೆಗೆ ನೀನು ಉತ್ತರಿಸಲಾರೆ ಹೇಳು?' ರತ್ನಾವಳಿ ನಕ್ಕು ಭರತೇಶನನ್ನು ಮದುವೆಯಾದಳು.

(ತಮ್ಮ 'ಮೆಚ್ಚಿನ ಕಥೆ'ಗಳಿಂದ ಸುಧಾಮೂರ್ತಿಯವರು ಪುಟಾಣಿಗಳಿಗೆ ಹೆಕ್ಕಿಕೊಟ್ಟದ್ದು)



ಕಲೆ: ಪ್ರಕಾಶ್ ಶೆಟ್ಟಿ

ಏಕದಂತನ ವಾಹನದ 'ದಂತ'ಕಥೆ



ನಮ್ ಟಿ.ವಿ. ಕಾರ್ಯಕ್ರಮ ಹಿಂಗೆ ಶೂಟಿಂಗ್ ಆಗುತ್ತೆ ನೋಡಿ

ನಮ್ ಟಿ.ವಿ. ಕಾರ್ಯಕ್ರಮ ನೋಡೋಕೆ ನೀವೂ ಜತೆಯಾಗಿ

ನಮ್ದೇ ಟಿ.ವಿ, ನಾವೇ ಆ್ಯಂಕರ್ಸ್!

ಸಂತೋಷ ಗುಡ್ಡಿಯಂಗಡಿ

ಆಗಷ್ಟೇ ಮಳ ಹನಿ ಹನಿ ಹೆಗ್ಗಡಹಳ್ಳಿಗ ಹೂದು ಮಳ್ಗಾಲ ಬತ್ತದ ಅಂತ ಹೇಳಿತ್ತು. ಅದೇ ಟೀಮಿಗ ಇಸ್ಕೂಲು ರೀಓಪನ್ ಆಗಿ ಹೊಸ ಐಕ ಬರಾಕ ಸುರು ಮಾಡಿದ್ವು. ಹಳೇ ಐಕ್ಳು ನಾವು ಒಂಜಿನ ಇಸ್ಕೂಲ ಮನ ಹಿಂದ್ಕ ಕಾಲಿ ಬಿದ್ಕಂಡಿದ್ದ ಜಾಗವ ಕ್ಲೀನ್ ಮಾಡಾಕ ಅಂತ ಯುದ್ಧಕ್ಕ ಹೋಗೋರಂಗ ಎಲ್ಕೋಟು, ಹಾರ, ಪಿಕಾಸಿ, ಕಡ್ಕತ್ತಿ, ಪೊರಕೆ ಇಂತವುಗಳನ್ನ ತಡಕಾಡಿ ತಂದು ರಂಗಕ್ಕೆ ಇಳಿದ್ಬುಟ್ವ...

ಇಂತಾ ಬ್ಯುಟಿಪುಲ್ ಚಣವ ಸೆರೆ ಹಿಡಿದು ಉಳಿಸ್ಕಬೇಕು ಅಂದ್ಕಂಡು ಪೋಟ ತೆಗಿಯೋದು, ವಿಡಿಯೊ ಮಾಡೋದು ಎಲ್ಲ ಕೆಲಸ ನಡಿತಾ ಇರುವಾಗ್ಲಿಯಾ ಆಗ್ತಿತ್ತು. ತೆಗ್ದಿರೋ ಪೋಟ ವಿಡಿಯೊ ಮಡಿಕಂಡು ಏನ್ ಮಾಡೋದು ನಾಕ್ಜನಕ ಹಂಚಬೇಕು. ಹಂಗಾರ ಏನ್ ಮಾಡೋದು?

ಅಷ್ಟೊತ್ಗ ಬಂದಿರೋದು ನೋಡಿ ಟಿ.ವಿ. ಐಡಿಯಾ. ಐಕ್ಳು ಮಾಡಿರೋ ಕೆಲ್ಸದ ವಿಡಿಯೊಕ್ಕ ಟಿ.ವಿ. ತರವಾಗಿನ ಫ್ರೇಮು ಮಡ್ಗಿ ಇಸ್ಕೂಲ ಐಕ್ಳ ವಾಟ್ಸಾಪ್ ಗ್ರೂಪಲ್ಲಿ ತೂದು ಎಸ್ದುಬುಟ್ಟೆ. ತಗಾ, ಅದ್ರ ನಾಳಕ ಇಸ್ಕೂಲ್ಕನಾಲಿ ಒಂದೇ ಪ್ರಶ್ನ 'ಯಾವ್ ಟಿವಿಲಿ ಬಂದಿತ್ತು ಸಾ?', 'ಯಾವ್ ಟಿವಿಲಿ ಬಂದಿತ್ತು ಸಾ?' ಅಂತ. ನಮ್ದೇ ಟಿ.ವಿ. ಅಂತ ಅಂದ್ನ, ಹ್ಯಾಗ್ ಮಾಡಿದ್ದು ಅಂತ ಐಕ್ಳಿಗ ಹೇಳಿದ್ನಾ 'ವಾ..' ಅಂದ್ರು. ಆಗ್ಲಿಯಾ ನಮ್ ಸ್ಕೂಲ್ದು ಟಿ.ವಿ. ಮಾಡಿದ್ರ ಹ್ಯಾಂಗ? ಅಂದಿ. ಅದಕ್ಕ ಕೆಲವರು ಮಾಡಿದ್ರ ಎಲ್ಲಿ ಬರ್ತದ? ಯಾರ್ ನೋಡ್ತರ? ಅಂದ್ರು. ಯೂಟ್ಯೂಬ್ಲಿ ಬರ್ತದ. ಯಾರಾರ ನೋಡ್ಲಿ, ಯಾರ್ ನೋಡ್ದಿದ್ರ ನಾವೇ ನೋಡೋಣ. ನಾವ್ ಮಾಡಿರೋದಕ್ಕ ದಾಖಲೆ ಇರ್ತದ ಅಂದ್ಕಂಡು 'ನಮ್ ಸ್ಕೂಲ್ ಟಿ.ವಿ' ಯೂಟ್ಯೂಬ್ ಚಾನಲ್ ಜುಲೈ 9ರಂದು ಆರಂಭವಾಗಿ ಮೊದಲ ಕಂತು ಪ್ರಸಾರ ಆಯ್ತದ. ಇದ್ಕ 'ನಮ್ ಸ್ಕೂಲ್ ಟಿ.ವಿ' ಅಂತ ಹೆಸರಿಟ್ಟಿದ್ದು 10ನೇ ಕ್ಲಾಸು ಕುಸುಮ.

ಯಾರ್ ನೋಡ್ತರ ಅಂದ್ಕಂಡಿದ್ದೋ.... ಆದ್ರ ನೋಡ್ದವ್ರು ವಸಿ ಜನ್ವಾ!! ನಮ್ ನಂಜನಗೂಡು ಬಿಇಓ ಸಿ.ಎನ್. ರಾಜು ಸರ್ ಸ್ಯಾನೆ ಕುಸಿಪಟ್ರು. ಮುಂದ್ಕ ಅವ್ರು ಎಲ್ಲಾ ಎಪಿಸೋಡ್ನೂವಿ ನೋಡ್ಬುಟ್ಟು ಬ್ಯಾರೆಯವ್ರಿಗ ಹಂಚಿದ್ರು. ಹಂಗೆ ನಾಡಿನ ನೂರಾರು ಜನ ಹಿರಿಯರು ಫೋನ್ ಮಾಡವ್ರ, ಮೆಸೇಜ್ ಮಾಡವ್ರ ಮತ್ತ ನಮ್ ಚಾನಲಿಗ ಸಬ್‌ಸ್ಕ್ರೈಬ್ ಮಾಡವ್ರ.

ನಮ್ ಸ್ಕೂಲ್ ಟಿ.ವಿ. ಎರಡ್ನೇ ಎಪಿಸೋಡಲ್ಲಿ ಜೇಮ್ಸ್ ವೆಬ್ ಟೆಲಿಸ್ಕೋಪ್ ಬಗ್ಗ ಕಾರ್ಯಕ್ರಮ ಮಾಡಿದ್ವಿ. ಅದ್ನ ನೋಡಿ ನಾಗೇಶ್ ಹೆಗಡೆ ಸರ್ ಚೋಚುಗ ಪಟ್ಕಂಡ್ರು 'ನಾನು ಪ್ರಜಾವಾಣಿಗ ಟೆಲಿಸ್ಕೋಪ್ ಬಗ್ಗ ಬರ್ದಿದೀನಿ, ಅದು ಪ್ರಿಂಟ್ ಆಗಿ ನನ್ ಕಯ್ಗ ಬರೋ ಮೊದ್ಲು ಹೆಗ್ಗಳ್ಳಿ ಐಕ್ಳು ಟೆಲಿಸ್ಕೋಪ್ ಬಗ್ಗ ಸ್ಯಾನೆ ಚಂದವಾಗಿ ಕಾರ್ಯಕ್ರಮ ಮಾಡಿದ್ರಲ್ಲ!' ಅಂತ ಬರ್ದು ಕಳ್ಸವ್ರ. ಇದಲ್ವಾ ನಮ್ಗ ಕುಸಿ?

ಹೊಸ ಹೊಸ ವಾರ ಬಂದಂಗ ಹೊಸ ಎಪಿಸೋಡಿಗ ಹೊಸ ಆ್ಯಂಕರ್ಸು ಬಂದು ಸುದ್ದಿ ಓದಾಕ ಕುಂತ್ರು. ಕೆಲವ್ರಿಗ ಈ ವಾರ ತನಗ ಸಿಕ್ಕಿಲ್ಲ ಅಂದ್ಕಂಡು ಬೇಜಾರಾಗಿದ್ದು ನಡ್ದದ. ಜಿನ ಜಿನ ನಮ್ ಸ್ಕೂಲ್ ಟಿ.ವಿ. ನೋಡೋರು ಹೆಚ್ಗಂಡ್ರು. ಅದ್ನ ನೋಡಿ ಬ್ಯಾರೆ ಇಸ್ಕೂಲ ಮಾಸ್ತ್ರುಗಳು ಚನ್ನಾಗದ ನಮ್ಗೂ ವಸಿ ಹೇಳ್ಕೊಡಿ ಹ್ಯಾಂಗ ಮಾಡೋದು ಇದ್ನ ಅಂತ ಕೇಂಡ್ರು. ಇತ್ತಗ ಕೆಲವ್ರು ಹಿರಿಯರು ಹೀಂಗ ಮಾಡಿ ಚನ್ನಾಗಾಯ್ತದ ಅಂತ ಸಲಹೆ ಕೊಟ್ರು. ಅವುಗಳನ್ನ ಕೇಳ್ಕಂಡು ನಮ್ ಟಿ.ವಿ. ಜಿನ ಜಿನ ಹೊಸದಾಯ್ತ ಅದ. ನಮ್ ಸ್ಕೂಲ್ ಟಿ.ವಿ. ನೋಡ್ಕಂಡು ಎರಡ್ಮೂರು ಇಸ್ಕೂಲವ್ರು ಟಿ.ವಿ. ಸುರು ಮಾಡರ. ಒಂದು ವಾರ ಹೊಸ ಎಪಿಸೋಡು ಅಪ್ಲೋಡ್ ಮಾಡಿಲ್ಲ ಅಂದ್ರ 'ಯಾಕ್ ಈ ವಾರ ಬಂದಿಲ್ಲ?' ಅಂದ್ಕಂಡು ಫೋನ್ ಮಾಡಿ ಕೇಳ್ತರ. ಇದಲ್ವಾ ನಮ್ಗ ಕುಶಿ.

ನಮ್ ಇಸ್ಕೂಲ ಕೈತೋಟದ ಕೆಲ್ಸ ಮಾಡ್ವಾಗ ತಮಾಸಿಗ ಅಂತ ಸುರು ಮಾಡಿದ್ದ ಈ ಟಿ.ವಿ. ಇಂದ್ಗ ಅರ್ವತ್ತು ಸಾವ್ರಕ್ಕೂ ಹೆಚ್ಚು ವೀವ್ಸ್ ಕಂಡದ. ಆರ್ನೂರಕ್ಕೂ ಹೆಚ್ಚು ಸಬ್‌ಸ್ಕ್ರೈಬ್ ಆಗದ. ಶನಿವಾರ ಜಿನ ಬ್ಯಾಗ್ನೆ ಇಸ್ಕೂಲು ಬುಡ್ತದಲ್ಲ ಅವಾಗ ನಾವು ಟಿ.ವಿ.ಗ ರೆಕಾರ್ಡಿಂಗ್ ಮಾಡ್ಕತೀವಿ. ಭಾನ್ವಾರ ಜಿನ ಬೆಳ್ಗನಾಗ ಹೊಸ ಎಪಿಸೋಡು ಅಪ್ಲೋಡ್ ಆಯ್ತದ. ನಮ್ ಸ್ಕೂಲ್ ಟಿ.ವಿ.ನ ಯಾರ್ ನೋಡ್ತರ ಅಂತಿದ್ರು ನಮ್ ಐಕ. ಐದು ತಿಂಗ ಕಳ್ದದ. ಕನ್ನಡ ನಾಡು ನಮ್ ಟಿ.ವಿ. ನೋಡ್ತದ ಅಂಬೋದೇ ನಮ್ ಸಂಭ್ರಮ. ನೀವು ನೋಡಿ, ನಿಮ್ ಇಸ್ಕೂಲಲ್ಲಿ ನಿಮ್ದೇ ಟಿ.ವಿ. ಮಾಡಿ. ❖

> ನಂಜನಗೂಡು ತಾಲ್ಲೂಕು ಹೆಗ್ಗಡಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳು ಸುದ್ದಿಯನ್ನು ತಾವೇ ವರದಿ ಮಾಡಿ, ತಾವೇ ಆ್ಯಂಕರ್ಸ್ ಆಗಿ, ತಮ್ಮದೇ ಟಿ.ವಿ. ಚಾನೆಲ್ ನಡೆಸುತ್ತಾರೆ ಗೊತ್ತೆ?

ಮಕ್ಕಳಿಗಾಗಿ ಯಾರು ಬರೆಯಬೇಕು?

ಎಚ್.ಎಸ್. ವೆಂಕಟೇಶ ಮೂರ್ತಿ



ಮಕ್ಕಳಿಗಾಗಿ ಯಾರು ಬರೆಯಬೇಕು ಎನ್ನುವುದು ಚಿಂತಿಸಬೇಕಾದ ವಿಷಯ. ಮಕ್ಕಳಿಗಾಗಿ ಮಕ್ಕಳೇ ಬರೆಯಬೇಕೆಂದು ವಾದ ಮಾಡುವವರು ಇದ್ದಾರೆ. ಅದೇ ನಿಜವಾದ ಮಕ್ಕಳ ಸಾಹಿತ್ಯ, ದೊಡ್ಡವರು ಬರೆದಾಗ ಅವರು ಎಷ್ಟೇ ಪರಕಾಯಪ್ರವೇಶ ಚತುರರಾದರೂ ಮಕ್ಕಳ ಸಹಜ ಮುಗ್ಧತೆ ಅಲ್ಲಿ ಬರುವುದು ಸಾಧ್ಯವಿಲ್ಲ ಎನ್ನುವುದು 'ಮಕ್ಕಳ ಸಾಹಿತ್ಯ ಮಕ್ಕಳಿಂದ' ಎಂದು ವಾದಿಸುವವರ ಮುಖ್ಯ ನಿಲುವು.

ಯಾವುದೇ ಸಾಹಿತ್ಯವಿರಲಿ ಅದಕ್ಕೆ ಕಲಾತ್ಮಕತೆಯ ಪರಿಷ್ಕಾರವಾಗದೆ ಅದು ನಿಜವಾದ ಸಾಹಿತ್ಯವಾಗುವುದು ಸಾಧ್ಯವಿಲ್ಲ. ಮಕ್ಕಳು ಬರೆದುದರಲ್ಲಿ ಮುಗ್ಧತೆ ಇರುತ್ತದೆ ನಿಜ. ಆದರೆ ಆ ಬರಹಕ್ಕೆ ಸಾಹಿತ್ಯ ಸಂಸ್ಕಾರವಾಗದೆ ಅದಕ್ಕೆ ಲಯದ ಸಹಜ ಸೊಬಗು, ಭಾಷೆಯ ಬೆಡಗು, ಕಲ್ಪನೆಯ ಜಿಗಿತ ಸಿದ್ಧಿಸಲಾರದು.

ಹಿಂದೆ ಕ್ಯಾಡ್ಬರಿಯವರು ಮಕ್ಕಳಿಗಾಗಿಯೇ ಒಂದು ಸ್ಪರ್ಧೆ ನಡೆಸಿ ನೂರಾರು ಮಕ್ಕಳ ರಚನೆಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ಮಕ್ಕಳಲ್ಲಿ ಸೃಷ್ಟಿಶೀಲತೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಇಂಥ ಪ್ರಯೋಗಗಳು ಸ್ವಾಗತಾರ್ಹವಾದುವೇ. ಆದರೆ ಮಕ್ಕಳು ಹೀಗೆ ಬರೆದುದು ನಿಜವಾದ ಮಕ್ಕಳ ಸಾಹಿತ್ಯಕ್ಕೆ ಕಚ್ಚಾಮಾಲು ಎಂದು ನನಗೆ ಅನ್ನಿಸುತ್ತೆ. ಮಕ್ಕಳ ಕಲ್ಪನೆ ಹಾರಾಡುವ ನೆಲೆಯನ್ನು ಗುರುತಿಸಿಕೊಳ್ಳಲು ಬಗೆಯ ರಚನೆಗಳು ನಮಗೆ ಸಹಾಯ ಮಾಡುತ್ತವೆ. ಆದರೆ ಕ್ಯಾಡ್ಬರಿಯ ಅಂಥಾಲಜಿಯಲ್ಲಿ ಪಂಜೆ ಮಂಗೇಶರಾಯರ ತೆಂಕಣ ಗಾಳಿಯಾಟ, ಕುವೆಂಪು ಅವರ ಕಿಂದರಿಜೋಗಿ, ಬೇಂದ್ರೆಯವರ ಕರಡಿ ಕುಣಿತ, ರಾಜರತ್ನಂ ಅವರ ತುತ್ತೂರಿ, ಸಿದ್ಧಯ್ಯ ಪುರಾಣಿಕರ ಅಜ್ಜನ ಕೋಲಿದು- ಮೊದಲಾದ ರಚನೆಗಳ ಸಮೀಪಕ್ಕೆ ಬರುವ ರಚನೆಗಳೂ ಇಲ್ಲ. ನಮ್ಮ ದಿನಪತ್ರಿಕೆ, ವಾರಪತ್ರಿಕೆ, ಮಾಸಿಕಗಳಲ್ಲಿ ಪ್ರಕಟವಾಗುವ ಮಕ್ಕಳು ಬರೆದ ಕವಿತೆಗಳೆನ್ನುವ ಬರಹವನ್ನು ಒಮ್ಮೆ ಗಮನಿಸಿದರೆ ನನ್ನ ಮಾತಿನ ಸತ್ಯ ಸ್ಪಷ್ಟವಾಗುವುದು.

ಮಕ್ಕಳ ಸಾಹಿತ್ಯದಲ್ಲಿ ಮಕ್ಕಳ ಭಾಷೆ, ಮಕ್ಕಳ ಕಲ್ಪನೆ, ಮಕ್ಕಳ ಮುಗ್ಧತೆ ಇವೆಲ್ಲಾ ಇರಲೇ ಬೇಕು. ಅವುಗಳ ಹಿಂದೆ ಶ್ರೇಷ್ಠ ಮಟ್ಟದ ಸಾಹಿತ್ಯಕ ಕಸುಬುಗಾರಿಕೆ ಮತ್ತು ಮನಸ್ಸಿನ ಪಕ್ವತೆ ಇಲ್ಲದೆ ಮಕ್ಕಳ ಸಾಹಿತ್ಯ ಉನ್ನತಿ ಸಾಧಿಸಲಾರದು. ಪ್ರೌಢತೆಯ ಹೆಗಲೇರಿ ಕುಳಿತ ಮುಗ್ಧತೆಯಿಂದ ಮಾತ್ರ ಅತ್ಯುನ್ನತ ಮಕ್ಕಳ ಸಾಹಿತ್ಯದ ನಿರ್ಮಿತಿ ಸಾಧ್ಯ. ಸಾಹಿತ್ಯ ಅಂದಮೇಲೆ ಅನುಭವದ ಆಯ್ಕೆ, ಅದರ ನಿರ್ಮಿತಿಗೆ ತಕ್ಕ ರೂಪದ ಆಯ್ಕೆ, ರೂಪವನ್ನು ಯುಕ್ತವಾಗಿ ಧರಿಸಬಲ್ಲ ಭಾಷೆಯ ಆಯ್ಕೆ, ಆ ಭಾಷೆಯೊಂದಿಗೆ ಭಾವಕ್ಕೆ ಸಾಥಿಯಾಗಿ ನಿಲ್ಲುವ ಉಚಿತ ಲಯದ ಆಯ್ಕೆ ಇವೆಲ್ಲಾ ಇರಲಿಕ್ಕೇ ಬೇಕು. ಅವು ಇಲ್ಲವಾದಲ್ಲಿ ಅತ್ಯುತ್ತಮ ಮಕ್ಕಳ ಸಾಹಿತ್ಯದ ನಿರ್ಮಿತಿ ಸಾಧ್ಯವೇ ಇಲ್ಲ. ಅಜ್ಜನ ಕೋಲನ್ನು ಕುದುರೆ ಎಂದು ಮಕ್ಕಳು ಕಲ್ಪಿಸಬಲ್ಲರು. ಆದರೆ, ಈ ಕುದುರೆಯ ವಿಲಕ್ಷಣ ಗುಣಲಕ್ಷಣಗಳನ್ನು ಬಾಲ್ಯವನ್ನು ಆಧಾರವಾಗಿ ಇಟ್ಟುಕೊಂಡು ಈವತ್ತು ಪ್ರೌಢತೆಯ ನೆಲೆಯಲ್ಲಿ ನಿಂತ ಪ್ರಬುದ್ಧ ಕವಿ ಸಿದ್ಧಯ್ಯ ಪುರಾಣಿಕರಂಥವರು ಮಾತ್ರ ಕಲ್ಪಿಸಬಲ್ಲರು.

(ವಸಂತ ಬಾಲ ಸಾಹಿತ್ಯ ಮಾಲೆಗೆ ಬರೆದ ಪ್ರಸ್ತಾವದ ಆಯ್ದಭಾಗ)

ನನ್ನ ಸೊಂಡಿಲೇಕೆ ಇಷ್ಟೊಂದು ಉದ್ದ?



ಕಲೆ: ಸಂತೋಷ್ ಸಸಿಹಿತ್ಲು

ಮುನ್ನೋಟ 13-11-2022 ರಿಂದ 19-11-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಉದ್ಯಮಿಗಳು ನೂತನ ಯಂತ್ರೋಪಕರಣಗಳನ್ನು ಖರೀದಿ ಮಾಡುವ ಎಲ್ಲಾ ಲಕ್ಷಣಗಳಿವೆ. ಇದಕ್ಕೆ ಬೇಕಾದ ಪೂರಕ ಮಾಹಿತಿಗಳು ಈಗ ಒದಗಿಬರುತ್ತವೆ. ಒಡಹುಟ್ಟಿದವರೊಡನೆ ಸಂಬಂಧ ಸ್ವಲ್ಪಮಟ್ಟಿಗೆ ಸುಧಾರಿಸಬಹುದು. ಭೂಮಿ ಖರೀದಿ ವಿಚಾರದಲ್ಲಿ ಅತಿಯಾದ ಆತುರ ಬೇಡ. ಉದ್ಯೋಗದಲ್ಲಿ ಎಚ್ಚರಿಕೆಯ ಹೆಜ್ಜೆ ಇಟ್ಟಲ್ಲಿ ಪ್ರಗತಿಯನ್ನು ಕಾಣಬಹುದು. ಒಡವೆ ಕೊಳ್ಳುವಾಗ ಎಚ್ಚರವಿರಲಿ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಹಣ್ಣು, ತರಕಾರಿ ವ್ಯಾಪಾರ ಮಾಡುವವರಿಗೆ ವ್ಯಾಪಾರದಲ್ಲಿ ವೃದ್ಧಿ ಇರುತ್ತದೆ ಹಾಗೂ ಆದಾಯದಲ್ಲಿ ಚೇತರಿಕೆ ಕಾಣಬಹುದು. ಸಂಗಾತಿಯ ಕಡೆಯ ಶುಭಕಾರ್ಯಗಳಿಗೆ ಹೋಗಿ ಬರುವ ಸಾಧ್ಯತೆಗಳಿವೆ. ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ದೊರಕುತ್ತದೆ. ಕೃಷಿಕರಿಗೆ ಉತ್ತಮ ಸಾಲ ಸೌಲಭ್ಯ ಒದಗಿಬರುತ್ತದೆ. ಬಹಳ ದಿನಗಳಿಂದ ಬಯಸುತ್ತಿದ್ದ ಹೆಚ್ಚಿನ ಮೊತ್ತದ ಸರ್ಕಾರಿ ಸಾಲ ಈಗ ದೊರೆಯುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ನಿತ್ಯ ಕೆಲಸಗಳಲ್ಲಿ ಹೊಸ ಉತ್ಸಾಹ ಮೂಡಿ ಕೆಲಸ ಕಾರ್ಯಗಳಲ್ಲಿ ಚುರುಕುತನ ತೋರುವಿರಿ. ವಿಶ್ವಾಸಿಗಳ ಸಹಕಾರದಿಂದ ವ್ಯಾಪಾರದಲ್ಲಿ ಮುನ್ನಡೆಯನ್ನು ಕಾಣಬಹುದು. ಹೈನುಗಾರಿಕೆ ನಡೆಸುವವರು ಉತ್ತಮ ಆದಾಯವನ್ನು ನಿರೀಕ್ಷಿಸಬಹುದು. ಮನೆಯಲ್ಲಿ ದೈವ ಸಂಬಂಧದ ಕಾರ್ಯಕ್ರಮಕ್ಕಾಗಿ ಸಿದ್ಧತೆಗಳನ್ನು ಮಾಡುವಿರಿ. ಅನಾರೋಗ್ಯ ಪೀಡಿತರ ಆರೋಗ್ಯದಲ್ಲಿ ಚೇತರಿಕೆ ಕಾಣಬಹುದು.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಸಹೋದರಿಗೆ ಸಾಕಷ್ಟು ಸಹಾಯ ಮಾಡುವಿರಿ. ಅವರ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಸರಿ ಮಾಡಿಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡುವಿರಿ. ಕಾನೂನಾತ್ಮಕ ವ್ಯವಹಾರಗಳಲ್ಲಿ ಸೂಕ್ತ ಮಾರ್ಗದರ್ಶನ ಪಡೆದು ವ್ಯವಹರಿಸುವುದು ಒಳ್ಳೆಯದು. ಕಚೇರಿ ಕೆಲಸದ ನಿಮಿತ್ತ ದೂರಪ್ರಯಾಣ ಮಾಡಬೇಕಾಗಬಹುದು. ಇದಕ್ಕೆ ಬೇಕಾದ ಸೌಕರ್ಯಗಳು ಸಿಗುತ್ತವೆ. ಹಣದ ಒಳಹರಿವಿನಲ್ಲಿ ವ್ಯತ್ಯಾಸವಿರುವುದಿಲ್ಲ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ನೌಕರ ವರ್ಗದವರ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಉದ್ಯೋಗದಲ್ಲಿ ಸೂಕ್ತ ಬದಲಾವಣೆಯ ಸಾಧ್ಯತೆ ಇದೆ. ವಾಹನ ಚಾಲನೆ ವೇಳೆ ಹೆಚ್ಚಿನ ಜಾಗರೂಕತೆ ಅಗತ್ಯ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಉನ್ನತ ಅಧಿಕಾರಿಗಳ ಸಹಾಯದಿಂದ ನೌಕರಿಯಲ್ಲಿ ಅನುಕೂಲ ಕಂಡುಬರುತ್ತದೆ. ಸಮಾಜಸೇವೆ ಮಾಡುವವರು ತಮ್ಮ ಕಾಯಕದಲ್ಲಿ ಸಂತೋಷ ಕಾಣುವರು.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ನಿಮ್ಮ ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಕೊಡಿರಿ. ಮನೆ ಬದಲಾವಣೆಯ ವಿಚಾರಗಳು ಮುನ್ನೆಲೆಗೆ ಬರುತ್ತವೆ. ಕ್ರೀಡಾಪಟುಗಳಿಗೆ ಉತ್ತೇಜನ ದೊರೆತು ಸಾಧನೆ ಮಾಡುವ ಸಂದರ್ಭವಿದೆ. ವಾಹನ ಮಾರಾಟಗಾರರಿಗೆ ವ್ಯಾಪಾರ ವೃದ್ಧಿಸುತ್ತದೆ. ನಿಮ್ಮ ಸಂಪತ್ತನ್ನು ಸರಿಯಾಗಿ ರಕ್ಷಣೆ ಮಾಡಿಕೊಳ್ಳಿರಿ. ಆರ್ಥಿಕ ಸ್ಥಿತಿಯು ಸಾಮಾನ್ಯವಾಗಿರುತ್ತದೆ. ಆಹಾರ ವ್ಯತ್ಯಾಸದಿಂದ ಅನಾರೋಗ್ಯವಾಗಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ನಿಮ್ಮ ಕೆಲವು ಯೋಜನೆಗಳನ್ನು ಪೂರೈಸಲು ಬೇಕಾದ ಅನುಕೂಲಗಳು ಸಿಗುತ್ತವೆ. ಉನ್ನತ ಶಿಕ್ಷಣ ಅಥವಾ ಉನ್ನತ ಅಧ್ಯಯನಕ್ಕಾಗಿ ದೂರ ಪ್ರಯಾಣ ಮಾಡಬೇಕಾದೀತು. ಆರ್ಥಿಕ ಅನುಕೂಲಗಳು ನಿಮ್ಮ ಅಗತ್ಯಕ್ಕೆ ತಕ್ಕಷ್ಟೇ ಇರುತ್ತವೆ. ಆಸ್ತಿ ಲಾಭದ ಲಕ್ಷಣಗಳು ಗೋಚರಿಸುತ್ತಿವೆ. ಕೈಸಾಲಗಳನ್ನು ತೀರಿಸಿ ನಿರಾಳರಾಗುವಿರಿ. ವಿದೇಶದಿಂದ ಮಕ್ಕಳ ಅಥವಾ ಬಂಧುಗಳ ಆಗಮನವನ್ನು ನಿರೀಕ್ಷಿಸುವಿರಿ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ನಿರೀಕ್ಷಿತ ಮೂಲಗಳಿಂದ ಧನಾಗಮನ ಆಗದಿದ್ದರೂ ಅನಿರೀಕ್ಷಿತ ಮೂಲದಿಂದ ಹಣ ಒದಗಿ ಸಂತಸವಾಗುವುದು. ಕೆಲವು ಹಂಗಾಮಿ ಮಹಿಳಾ ಉದ್ಯೋಗಿಗಳಿಗೆ ಉದ್ಯೋಗದಲ್ಲಿ ಕಾಯಂ ಆಗಬಹುದು. ಹೊಸ ಗೃಹಾಲಂಕಾರ ವಸ್ತುಗಳನ್ನು ಕೊಳ್ಳುವ ಯೋಗವಿದೆ. ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ ಏರ್ಪಡುತ್ತದೆ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಹಿರಿಯರು ತಮ್ಮ ಮಾತಿನಿಂದ ನಿಷ್ಠುರಕ್ಕೆ ಒಳಗಾಗುವರು. ಇತರರಿಗೆ ಅತಿಯಾದ ಗೌರವವನ್ನು ಕೊಡುವುದು ಬೇಡ. ನಿಂತಿದ್ದ ನ್ಯಾಯಾಲಯದಲ್ಲಿನ ಕಟ್ಟಳೆಗಳಿಗೆ ಮರುಜೀವ ಬಂದು ಪುನರ್ ಆರಂಭವಾಗುತ್ತವೆ. ಸಂಸಾರದಲ್ಲಿನ ಸಂಕಷ್ಟಗಳು ಪರಿಹಾರಗೊಂಡು ಹೊಸ ಬೆಳಕು ಮೂಡುತ್ತದೆ. ಆರ್ಥಿಕ ಸ್ಥಿತಿ ಸಾಮಾನ್ಯವಾಗಿರುತ್ತದೆ. ಸಂಗೀತ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಬೇಕೆನ್ನುವವರಿಗೆ ಸೂಕ್ತ ಅವಕಾಶಗಳು ಇರುತ್ತವೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ವ್ಯವಹಾರಗಳಲ್ಲಿ ಮುನ್ನಡೆ ಇರುತ್ತದೆ. ಸಂಗ್ರಹಿಸಲ್ಪಟ್ಟ ವಸ್ತುಗಳ ಮಾರಾಟದಿಂದ ಹೆಚ್ಚಿನ ಲಾಭ ಇರುತ್ತದೆ. ಮಕ್ಕಳಿಗಾಗಿ ದುಬಾರಿ ವಸ್ತುಗಳನ್ನು ಖರೀದಿ ಮಾಡುವ ಯೋಗವಿದೆ. ಶ್ರೀಮಂತ ಜೀವನಶೈಲಿಗಾಗಿ ಹೆಚ್ಚು ಹಣ ಖರ್ಚು ಮಾಡುವಿರಿ. ವ್ಯಾಪಾರದಲ್ಲಿನ ಸಮಸ್ಯೆಗಳಿಗೆ ಹಂತ ಹಂತವಾಗಿ ಪರಿಹಾರ ಕಂಡುಕೊಳ್ಳುವಿರಿ. ಹಣದ ಒಳಹರಿವು ನಿರೀಕ್ಷಿತ ಮಟ್ಟದಷ್ಟು ಇರುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಕೆಲಸಕಾರ್ಯಗಳಲ್ಲಿ ಅಡ್ಡಿ ಉಂಟಾದರೂ ಎದೆಗುಂದದೆ ಮುಂದುವರಿದು ಯಶಸ್ಸನ್ನು ಸಾಧಿಸಿ ತೋರುವಿರಿ. ತಂದೆತಾಯಿ ಮಕ್ಕಳಿಗಾಗಿಯೇ ವಿದೇಶಕ್ಕೆ ಅಥವಾ ದೂರದೂರಿಗೆ ಪ್ರಯಾಣ ಬೆಳೆಸಬಹುದು. ಅಧ್ಯಯನದಲ್ಲಿನ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣವಾಗುವುದು.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಆದಾಯ ಸ್ವಲ್ಪ ಕಡಿಮೆಯಾಗಿ ಖರ್ಚುಗಳಿಗೆ ಕಡಿವಾಣ ಹಾಕಬೇಕಾದ ಸಂದರ್ಭವಿದೆ. ಹೊಸ ಆದಾಯದ ಮೂಲಗಳತ್ತ ಗಮನ ಹರಿಸುವಿರಿ. ನೀರಾವರಿ ಭೂಮಿಯನ್ನು ಹೊಂದುವ ಯೋಗವಿದೆ. ದೀನ ದಲಿತರ ಸೇವೆ ಮಾಡುವ ಸಂಸ್ಥೆಗಳಿಗೆ ಪ್ರಚಾರಕ್ಕಾಗಿ ಹೋಗುವಿರಿ. ಹೊಸದಾಗಿ ಚಿನ್ನಾಭರಣಗಳ ವ್ಯಾಪಾರ ಆರಂಭಿಸುವವರು ಈಗ ಆರಂಭಿಸಬಹುದು.

ಪದಬಂಧ 2763



ಮೇಲಿನಿಂದ ಕೆಳಕ್ಕೆ

1. ಚಿಗುರುವ ಸೃಷ್ಟಿ ವ್ಯವಸ್ಥೆ 3
2. ರಮೆಯ ಪತಿ 3
3. ಬೆಂಕಿಯಂತೆ ಹೊಳೆಯುವ ಮಂಗಳ 4
4. ಸಿರಿದೇವಿಯ ಸುತ 4
7. ಹೆಚ್ಚುಕಡಿಮೆ ಮಾಡದ ಆಂತರಂಗ ದೃಷ್ಟಿ 4
8. ಮರಗಳಿಂದ ತುಂಬಿ ಹೋದ ಕಾಡು 5
9. ವರಾಹದ ಸ್ತ್ರೀ ರೂಪ 3
12. ಪರಶಿವನ ಕೈಲಿರುವ ಬುಡಬುಡಿಕೆ ಶಬ್ದ 5
15. ಕನ್ನಡಿಯಲ್ಲಿ ನೋಡಿಕೊಂಡಾಗ ಕಾಣುವ ನಮ್ಮ ಕಾಪಿ 4
16. ಬೆಂಕಿಗೆ ಮೈಯೊಡ್ಡುವ ಚಿಟ್ಟೆ 3
18. ಒಡವೆ ವಸ್ತ್ರಗಳಿಂದ ಸಜ್ಜಾಗುವಂತೆ ಶಬ್ದ ಅರ್ಥಗಳಿಂದ ಸಜ್ಜಾದ ಕನ್ನಡ ಕಾವ್ಯ 4
19. ಶ್ರೇಷ್ಠವಾದ ಸಿಹಿ ಓಗರ 4
20. ಕಲ್ಲಾದ ಇದಕ್ಕೆ ಹಾಲನೆರೆ ಎಂಬರು ದಿಟವಾದದಕ್ಕೆ ಕೊಲ್ಲೆಂಬರು ಎಂಬುದು ವಚನ 3
21. ಕಾಡಿನಲ್ಲಿ ಬೆಳೆಯುವ ಸುವಾಸಿತ ಸೊಪ್ಪು 3

ಎಡದಿಂದ ಬಲಕ್ಕೆ

1. ಪತ್ರಿಕೆಯಲ್ಲಿ ನಿರಂತರವಾಗಿ ಕಾಲಂ ಹಿಡಿದು ಬರೆಯುವವ 5
3. ಒಳಗೊಳಗೆ ಹಬ್ಬಿಕೊಂಡಿರುವ ಅಗೋಚರ ನೆಟ್ಟು ವ್ಯವಸ್ಥೆ 4
5. ಸುದೀರ್ಘವಾಗಿ ಮತ್ತೆ ಮತ್ತೆ ಸುವಾಸನೆ ಹರಡುವ ಎಲೆ 3
6. ದ್ರವ್ಯದ ಜೊತೆ ಸೇರಿದ ಮಹಾ ಭೋಜನ ಕೂಟ 5
10. ಕೈಯಿಂದ ಕೈಗೆ ರವಾನೆಯಾಗುವ ಪಾಂಪ್ಲೆಟ್ಟು 4
11. ಕನ್ನಡದ ಹೃದಯವನ್ನು ಕಲಕುವ ರಾಗ 3
13. ಶರಣರಿಂದ ಬಂದ ಒಳ್ಳೆಯ ಮಾತು 5
14. ವೀರ ಸಾಹಸಗಳ ಹೆಗ್ಗಳಿಕೆಯ ರಾಜಸ್ಥಾನದ ರಜಪೂತ 5
17. ಉತ್ತರಭಾರತದವರ ದೃಷ್ಟಿ 3
18. ಈ ರೂಪ ಬಹಳ ವಿರಳ 4
20. ಗಾನದಲ್ಲಿ ಸೇರಿರುವ ಪದ ಸಿರಿ 5
22. ಈ ಋಷಿಕನ್ಯೆಯನ್ನು ಮನಸ್ಸಿನಿಂದ ಸ್ಮರಿಸುತ್ತೇವೆ 3
23. ಹಳೆಗನ್ನಡದ ಕವಿದ್ವಯರು 4
24. ನೆತ್ತರು ಶ್ರೀಗಂಧದ ಜೊತೆ ಸೇರಿದರೆ ಈ ಮರ ಹುಟ್ಟುತ್ತದೆ 5

ಪದಬಂಧ ಉತ್ತರ -2762

ಮೇಲಿಂದ ಕೆಳಕ್ಕೆ

1. ಜಲವಾಸ 2.ನಿರೀಕ್ಷಕ 3.ಆನೆಪಟಾಕಿ 4.ಸಿಹಿಗಡುಬು 7.ಗೆಣಸು 9.ಕಾಡುಕತ್ತೆ 11.ಕಾವ್ಯಸುಧ 12.ಕಣವಿ 13.ಕಿಚ್ಚುಹಾಯಿಸು 14.ಬಲಿಪಾಡ್ಯಮಿ 15.ಮಾತ್ರಮದ್ದು 16.ನವರಸ

ಎಡದಿಂದ ಬಲಕ್ಕೆ

1. ಜನಧ್ವನಿ 3.ಆಲಸಿ 5.ಕ್ಷಣಕೋಪ 6.ಗಡಿಗೆ 8.ಸಕಾಲಿಕ 10.ಕಿಲುಬುಕಾಸು 12.ಕತ್ತೆಕಿರುಬ 15.ಮಾನಧನ 17.ವಿರಹಾ 18.ಪಾದಯಾತ್ರೆ 19.ಸುನಾಮಿ 20.ದ್ದುಹರಸ

ಕಲೆ: ಗುಜ್ಜಾರ್

‘ಪುಟ್’ ಪುಟಾಣಿ ಕವಿತೆ

ಎನ್. ಶ್ರೀನಿವಾಸ ಉಡುಪ

ಚೆಂಡಿನ ಅಳಲು

ಯಾಕಪ್ಪಾ ನಂಗಿಂಥಾ ಶಿಕ್ಷೆ ಕೊಟ್ಟೆ ಭಗವಂತಾ?
ಮೂರು ಹೊತ್ತೂ ಒದೆತಾ ಹೊಡೆತಾ ತಿಂತಾ ಇರು ಅಂತಾ!

ಪುಸ್‌ಪುಸ್ ಎಂದು ಗಾಳಿ ತುಂಬಿಸಿ ‘ಫುಟ್‌ಬಾಲ್’ ಅಂತಾರೆ
ಎರ್ರಾಬಿರ್ರಿ ಒದೆದೂ ಒದೆದೂ ಜೀವಾನೆ ತಿಂತಾರೆ!

ಸುಸ್ತಾಗಿ ನಾ ಮೂಲೆ ಸೇರಿದರೆ ‘ಗೋಲ್, ಗೋಲ್’ ಅಂತಾರೆ
ಮತ್ತಲ್ಲಿಂದ ಹೊರಕ್ಕೆ ಎಳೆದು ಗೋಳು ಹೊಯ್ದಾರೆ!

‘ಕ್ರಿಕೆಟ್’ ಅಂತ ಬ್ಯಾಟಲಿ ನಂಗೆ ಫಟಾರ್ ಬಡೀತಾರೆ
ನೋವು ತಾಳದೆ ದೂರ ಓಡಿದರೆ, ಸಿಳ್ಳೆ ಹೊಡೀತಾರೆ!

ನೆಟ್ಟನು ಕಟ್ಟಿ ಆ ಕಡೆ ಈ ಕಡೆ ತಳ್ಳಿ ಕುಣೀತಾರೆ
ನೆಲದಲ್ಲಿರಿಸಿ ‘ಹಾಕೀ!’ ಎಂದು ದೊಣ್ಣೇಲಿ ಬಡಿತಾರೆ!

ಇಷ್ಟೊಂದ್ ಶಿಕ್ಷೆ ನಂಗೊಬ್ಬನಿಗೇ ಯಾಕೋ ಗೊತ್ತಿಲ್ಲ!
ದೊಡ್ಡಾಗಿದ್ರೂ ಚಿಕ್ಕಾಗಿದ್ರೂ ನೋವು ತಪ್ಪೋಲ್ಲ!

ಯಾರಿಗೂ ಬೇಡ ಇಂಥಾ ಗೋಳು, ಅಯ್ಯೋ ಭಗವಂತಾ!
ಯಾರು ಹೊಗಳಿದರೋ ನಿನ್ನನು ಭಾಳ ‘ಕರುಣಾಕರ’ ಅಂತಾ?!

ಕಪ್ಪೆಯ ಬಯಕೆ

ಊರಿನ ಆಚೆ ಇದೆಯಲ್ಲಪ್ಪ ದೊಡ್ಡ ಸಂತೆ ಮಾಳ - ಅಲ್ಲಿ
ಪೀರ ಗಫೂರ ಹೊಡೆಯುತ್ತಿದ್ದ ಕುದುರೇಗೆ ಲಾಳ.

ಠಣ್ ಠಣ್ ಠಪ್ ಠಪ್ ಎನ್ನುತ್ತಿತ್ತು ಸುತ್ತಿಗೇ ಹೊಡೆತ – ಜೊತೆಗೇ
ಹ್ಞೇ ಹ್ಞೇ ಅಂತಾ ಕೇಳುತ್ತಿತ್ತು ಕುದುರೇ ಕೆನೆತ.

ಧಪ್ ಧಪ್ ಎಂದು ಕುಪ್ಪಳಿಸುತ್ತಾ ಬಂತು ಒಂದು ಕಪ್ಪೆ - ಹಾಗೇ
ಏನಿದು ನಡೆದಿದೆ ಎನ್ನುತ ನೋಡಿತು ಮುಚ್ಚದೆಯೇ ರೆಪ್ಪೆ.

ಕಪ್ಪೆ ಕೇಳಿತು ಹೆದರೀ ಹೆದರೀ ಮಲಗಿದ ಕುದುರೇನ: ‘ಅಯ್ಯೋ
ನೋವಾಗಲ್ಲವೇ ಈ ಹೊಡೆತಕ್ಕೆ ಕೊಂಚವೂ, ಯಜಮಾನ?’

‘ಲಾಳ ಹೊಡೆದರೆ ಕಾಲು ಜಾರದು, ಗೊತ್ತಾ ನನರಾಜಾ? ನೀನೂ
ಹೊಡೆಸಿಕೊಂಡರೆ ಗೊತ್ತಾಗುತ್ತೆ ನಿನಗೂ ಅದರ ಮಜಾ!’

ಪೀರ ಗಫೂರನ ಕೇಳಕೊಂಡಿತು ಕಪ್ಪೆ ಅಂಗಲಾಚಿ: ‘ಅಯ್ಯಾ,
ನನ್ನ ಕಾಲಿಗೂ ಹೊಡೆಯೋ ಲಾಳ’ ಎಂದು ಕಾಲು ಚಾಚಿ.

ಗಫೂರ ಗದರಿದ: ‘ತೊಲಗಿಲ್ಲಿಂದ: ನಿನಗೇತಕೆ ಲಾಳ? ಅಲ್ಲದೆ
ಸುತ್ತಿಗೆ ಏಟಿಗೆ ಸತ್ತೇ ಹೋಗುವಿ, ಗೊತ್ತೇ ಮುಟ್ಠಾಳ!’

ಕಲೆ: ಗುಜ್ಜಾರ್

ಪನಿಶ್ಮೆಂಟು ವಾರ್ನಿಂಗ್

ಚಿದಾನಂದ ಸಾಲಿ

ಟ್ರಿಣ್ ಟ್ರಿಣ್ ಬೆಲ್ಲು ಬಾರಿಸಿತು
ಸ್ಕೂಲಿಗೆ ಟೈಮು ಆಗೋಯ್ತು
ಕಾಲಿಗೆ ಮಣಭಾರ ಬೂಟೇರ್ಸಿ
ಕೊರಳಿಗೆ ಬಾಟಲಿ ನೇತಾಡ್ಸಿ
ಬೆನ್ನಿಗೆ ಹೆಣಭಾರದ ಬ್ಯಾಗು
ಮುಖದಲಿ ಹುಸಿನಗೆಯ ಸೋಗು
ಕಾಲೆಳಕೊಂಡು ಹೋಗ್ಬೇಕು
ಮೂಗೇರಿಸಿಕೊಂಡು ಕೂರ್ಬೇಕು
ಗಲಾಟೆ ಮಾಡಿದರೆ ಬೈತಾರೆ
ಅತ್ತರೆ ಹಂಗಿಸಿ ನಗುತಾರೆ
ಮಿಸ್ಸಿನ ಮಾತು ಹಾಗಿರಲಮ್ಮ
ಆಯಾನೂ ಕಂಪ್ಲೇಂಟ್ ಕೊಡ್ತಾಳೆ
ನಿಜ ಹೇಳಮ್ಮ ನಿಜ ಹೇಳು
ಸ್ಕೂಲನು ಕಂಡ್ಹಿಡಿದವರಾರೇಳು?
ಎಲ್ಲಕೂ ನನಗೇ ಬೈತೀಯಲ್ಲ
ಅಂತವರಿಗೆ ಪನಿಶ್ಮೆಂಟ್ ಇಲ್ಲೇನು?!

ಕೋಳಿ ಕೋಳಿ ಕೊಕ್ಕೊಕ್ಕೋ
ಬೆಳಿಗ್ಗೆ ಸುಮ್ನೆ ನೀ ಮಕ್ಕೋ /ಅ/
ನೀನೇನ್ ಶಾಲೇಗ್ ಹೋಗ್ತೀಯ?
ನಮ್ಮಂಗ್ ಏಟು ತಿಂತೀಯ?
ಟೀವಿ ಗೀವಿ ನೋಡದೆ
ಠೀವಿಯಿಂದ ಇರ್ತೀಯ
ಹೋಮ್ ವರ್ಕೇ ಇಲ್ಲದೆ
ಓಣಿ ಓಣಿ ತಿರುಗ್ತೀಯ
ಇಕ್ಕಿದ್ದುಂಡು ಸಿಕ್ಕಲ್ ಮಲಗಿ
ಕುನುಕು ನಿದ್ದೆ ತೆಗಿತೀಯ
ಬೆಳಿಗ್ಗೆ ಬೇಗ್ನೆ ಎದ್ದು
ನಮ್ಮ ಪ್ರಾಣ ತಿಂತೀಯ
ನೀನೂ ಶಾಲೆಗೆ ಬಂದ್ನೋಡು
ನಮ್ಮ ಕಷ್ಟ ತಿಳಿಯುತ್ತೆ
ಟೀವಿ ಮುಂದೆ ಕುಂತ್ನೋಡು
ಕೂಗೋದು ತಾನೇ ನಿಲ್ಲುತ್ತೆ



ಕಲೆ: ಐಶ್ವರ್ಯ, 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ, ಹೆಗ್ಗಡಹಳ್ಳಿ

ಯಾರಿಗೆ, ಯಾವುದು?

ಕೆ. ವಿ. ತಿರುಮಲೇಶ್

ಹಣ್ಣು ಹಣ್ಣು ಯಾವ ಹಣ್ಣು
ತಿಂದರೆ ಮುಗಿಯದ ಮಾವಿನ ಹಣ್ಣು

ಕಣ್ಣು ಕಣ್ಣು ಯಾವ ಕಣ್ಣು
ತಾಳೆಮರದ ಬೊಂಡದ ಕಣ್ಣು

ಕಾಯಿ ಕಾಯಿ ಯಾವ ಕಾಯಿ
ಬಿಸಿಲಿಗೆ ತಣ್ಣನೆ ಬಚ್ಚಂಕಾಯಿ

ಹೂವು ಹೂವು ಯಾವ ಹೂವು
ಸಂಜೆಗೆ ಬಿರಿಯುವ ಮಲ್ಲಿಗೆ ಹೂವು

ಆಟ ಆಟ ಯಾವ ಆಟ
ಎಸೆದರೆ ಪುಟಿಯುವ ಚೆಂಡಿನ ಆಟ

ಊಟ ಊಟ ಯಾವ ಊಟ
ಪರಿಪರಿ ಪಲ್ಯದ ಹಬ್ಬದ ಊಟ

ತೋಟ ತೋಟ ಯಾವ ತೋಟ
ಬಾ ಬಾ ಅಳಿಲೇ ಎನ್ನುವ ತೋಟ

ಬಿಲ್ಲು ಬಿಲ್ಲು ಯಾವ ಬಿಲ್ಲು
ಏಳು ಬಣ್ಣಗಳ ಕಾಮನ ಬಿಲ್ಲು

ನೀರು ನೀರು ಯಾವ ನೀರು
ಹೊಳೆಯಲಿ ಹರಿಯುವ ಹೂಬಿಸಿ ನೀರು

ಗಂಟೆ ಗಂಟೆ ಯಾವ ಗಂಟೆ
ಬೆಕ್ಕಿನ ಕೊರಳಿಗೆ ಕಟ್ಟುವ ಗಂಟೆ

ಪಾಠ ಪಾಠ ಯಾವ ಪಾಠ
ಸತ್ಯವಂತನಾದ ಮಾದನ ಪಾಠ

ಹಾಡು ಹಾಡು ಯಾವ ಹಾಡು
ಪುಣ್ಯಕೋಟಿ ಗೋವಿನ ಹಾಡು

ಲೆಕ್ಕ ಲೆಕ್ಕ ಯಾವ ಲೆಕ್ಕ
ಬಯ್ಯಾಡ್ತೌ ಬುಕ್ಕ ಮಾಡುವ ಲೆಕ್ಕ



ಎಷ್ಟೊಂದು ಚಂದಿತ್ತು ನಂಬಾಲ್ಯ!

ಸೋಮಲಿಂಗ ಬೇಡರ

ಮಣ್ಣಾಗ ಆಡ್ತಿದ್ವಿ/ ಮುಳ್ಳಾಗ ತಿರುಗುತ್ತಿದ್ವಿ/ ಬಿಸಲಾಗ ಸುತ್ತಾಡ್ತಿದ್ವಿ/ ಆದ್ರೂ ಏನೂ ಆಗ್ತಿರ್ಲಿಲ್ಲ/ ಎಲ್ರೂ ಚನ್ನಾಗಿರ್ತಿದ್ವಿ/ ಎಷ್ಟೊಂದು ಚಂದಿತ್ತು ನಂಬಾಲ್ಯ!

ಹೌದು! ಏನೂ ಆಗ್ತಿರ್ಲಿಲ್ಲ ನಮಗೆ. ನೆಗಡಿ, ಕೆಮ್ಮು, ಜ್ವರ ಮತ್ತಿನ್ನಾವ ಕಾಯಿಲೆ ನಮ್ಮ ಹತ್ತಿರ ಸುಳಿಯುತ್ತಿರಲಿಲ್ಲ. ವರ್ಣನೆಗೆ ನಿಲುಕದ ಜೀವನವದು ನಂಬಾಲ್ಯ. ಬಿಡುವಿಲ್ಲದ ಆಟ, ಮನ ತಣಿಯದ ನೋಟ, ವಾರಿಗೆಯವರ ಕೂಟ, ದಣಿವರಿಯದ ತಿರುಗಾಟ ಮಜವೋ ಮಜ. ಜಾತಿ, ಧರ್ಮ, ಮೇಲು ಕೀಳು, ಬಡವ ಬಲ್ಲಿದ, ಗಂಡು ಹೆಣ್ಣು ಎಂಬ ಭೇದ ಭಾವವಿಲ್ಲದೆ ಕೂಡಿ ಇರುವ, ಕೂಡಿ ಕಲಿಯುವ, ಕೂಡಿ ಉಣ್ಣುವ, ಕೂಡಿ ನಲಿಯುವ ವಯಸ್ಸು ಅದು. ಉಡಲು ಒಂದೇ ಚಡ್ಡಿ, ಓದಲು ಚಿಮಣಿ ಬುಡ್ಡಿ, ಬರೆಯಲು ಪಾಟಿ, ಓದಲು ಹರಿದ ಪುಸ್ತಕ, ತಿನ್ನಲು ಪೇಪರಮಟ್ಟಿ, ಉಣ್ಣಲು ಸಜ್ಜಿ ರೊಟ್ಟಿ, ಹಾಸಲು ಚಾಪಿ, ಹೊದೆಯಲು ಕೌದಿ, ಕಾಡುವ ಹುರುಕು ಕಜ್ಜಿ, ಹೀಗಿತ್ತು ನಮ್ಮ ಕಾಲದ ಬಾಲ್ಯದ ಬದುಕು.

ಹಳ್ಳಿಗಳಲ್ಲಿ ಭಾಗಶಃ ಮಣ್ಣಿನ ಮನೆಗಳಿದ್ದವು. ಎಲ್ಲೋ ಒಂದೆರಡು ಕಲ್ಲು-ಮಣ್ಣು ಮಿಶ್ರಿತ ಮನೆಗಳನ್ನು ಕಾಣಬಹುದಾಗಿತ್ತು. ರಸ್ತೆಗಳಂತೂ ದೂಳು ತುಂಬಿಕೊಂಡಿರುತ್ತಿದ್ದವು. ಸೈಕಲ್ಲೇ ಆಗಿನ ಏರೋಪ್ಲೇನ್. ರೇಡಿಯೊ ಬಹು ಬೇಡಿಕೆಯ ಸಮೂಹ ಮಾಧ್ಯಮ. ಎಚ್‌ಎಂಟಿ ಗಡಿಯಾರ ಧರಿಸಿದವನೇ ಆಗಿನ ಹೀರೊ! ಟೇಪ್ ರೆಕಾರ್ಡರ್ ಇದ್ದವರ ಮನೆ ರಂಜನೀಯ ತಾಣ. ಕೆಂಪು ಬಸ್ಸು ಪ್ರಯಾಣಿಕರ ಐರಾವತ, ಬಿಳಿಕಾರು ಯಮದೂತ, ರಾಜದೂತ, ಎಜ್ಡಿ ಮೋಟರ ಸೈಕಲ್‌ಗಳು ಸ್ಥಿತಿವಂತರ ಶೋಕಿ. ಹಿಪ್ಪಿ ಕಟಿಂಗ್, ಬೆಲ್ ಬಾಟಂ ಪ್ಯಾಂಟ್, ದೊಡ್ಡ ಕಾಲರಿನ ಶರ್ಟ್, ಲಂಗಾ ದಾವಣಿ ಆಗಿನ ಫ್ಯಾಷನುಗಳಾಗಿದ್ದವು.

ಅವಿಭಕ್ತ ಕುಟುಂಬಗಳೇ ಹೆಚ್ಚಾಗಿದ್ದ ಕಾಲವದು. ಮನೆ ತುಂಬ ಜನ! ಮನೆ ಚಿಕ್ಕದು ಮಕ್ಕಳು ಬಹಳ. ಮನಸ್ಸು ಮಾತ್ರ ದೊಡ್ಡದು. ಅಜ್ಜ-ಅಜ್ಜಿ ಅಂದ್ರೆ ಮೊಮ್ಮಕ್ಕಳಿಗೆ ಪಂಚಪ್ರಾಣ. ಹೆತ್ತವರು ಹೊಲ, ಮನೆ, ಕೂಲಿ ಕೆಲಸದಲ್ಲಿಯೇ ದಿನ ಕಳೆಯುತ್ತಿದ್ದರು. ಊರ ಜಾತ್ರೆಗೊಮ್ಮೆ ಹೊಸ ಬಟ್ಟೆ, ದೊಡ್ಡ ಹಬ್ಬಗಳಿಗೊಮ್ಮೆ ಹೋಳಿಗೆ, ಚಪಾತಿ, ಅಕ್ಕಿ ಅನ್ನದ ಊಟ. ಉಳಿದ ದಿನಗಳಲ್ಲಿ ಸಜ್ಜಿರೊಟ್ಟಿ, ಹೊಲದಲ್ಲಿ ಪುಕ್ಕಟೆ ಸಿಗುವ ಚವಳಿ, ಪುಂಡಿ, ಗೋಳಿ, ರಾಜಗಿರಿ, ಕಿರಸಗಾನಿ, ಕುಂಬಳ, ಹೀರೆ, ತಿಪರಿ, ಹಾಗಲ ತರಕಾರಿ-ಸೊಪ್ಪಿನ ಜೊತೆಗೆ ಹುರುಳಿ, ಮೂಕಣಿ, ಹೆಸರು, ಅಲಸಂದಿ ಕಾಳುಕಡಿ ಕೂಲಿಯಿಂದ ಪಡೆದು ತಂದು, ಅಡುಗೆ ಮಾಡಿ ಅಮ್ಮ ಮನೆ ಮಂದಿಯ ಹೊಟ್ಟೆ ತುಂಬಿಸುತ್ತಿದ್ದಳು. ಒಂದ್ಹೊತ್ತು ಎಲ್ಲರಿಗೆ ತೃಪ್ತಿಯಾಗುವಷ್ಟು ಸಿಗುತ್ತಿತ್ತು. ರಾತ್ರಿ ಹೊತ್ತು ಗುಗ್ಗರಿ, ನುಚ್ಚು, ನವಣೆ ಅನ್ನ ಉಂಡು ಮಲಗಬೇಕಾಗಿತ್ತು. ತೂಗುವ ಗಿಡಗಳು, ಹಾಡುವ ಹಕ್ಕಿಗಳು, ಅರಳುವ ಹೂಗಳು, ಮೊಳೆಯುವ ಸಸಿಗಳು, ಹರಿವ ತೊರೆಗಳು, ತೇಲುವ ಮೋಡಗಳು, ಇವುಗಳೊಂದಿಗೆ ನಮ್ಮ ಬಾಲ್ಯದ ಆಕರ್ಷಣೆ ಮತ್ತು ಹರ್ಷದ ಕ್ಷಣಗಳು ಮಿಳಿತಗೊಂಡಿದ್ದವು. 1, 2, 5, 10, 20, 25, 50 ಪೈಸೆ (ನಾಣ್ಯ)ಗಳು ಹಾಗೂ 1, 2, 5 ಮತ್ತು ಅದಕ್ಕಿಂತಲೂ ಹೆಚ್ಚು ಬೆಲೆಯ ನೋಟುಗಳು ಚಲಾವಣೆಯಲ್ಲಿದ್ದವು. ಹೊಲದಲ್ಲಿ ಬೆಳೆದ ಹತ್ತಿ, ಹಸಿ ಶೇಂಗಾ, ಸಜ್ಜೆ, ಜೋಳ ಇಂಥವುಗಳನ್ನೇ ಕೊಟ್ಟು ಅಂಗಡಿಗಳಲ್ಲಿ ದಿನಸಿ ಕೊಳ್ಳುತ್ತಿದ್ದರು. ಬೆಲ್ಲ, ಪುಟಾಣಿ, ಚುರಮುರಿ ಉಂಡಿ, ಪೆಪ್ಪರಮೆಂಟು, ಬಿಸ್ಕತ್ತು, ದಪ್ಪನೆಯ ಬ್ರೆಡ್ಡು, ಲಿಂಬಿ ಗೋಳಿ, ಜುನ್ ಜುನ್ ಗೋಳಿ, ಶೇಂಗಾ ಗೋಳಿ, ಹುರಕಡ್ಲಿ, ವಟಾಣಿ ಇಂಥವುಗಳೇ ನಮ್ಮ ತಿಂಡಿಗಳಾಗಿದ್ದವು. ಅವುಗಳನ್ನು ಅಂಗಿ, ಚಡ್ಡಿ ಕಿಸೆಯಲ್ಲಿ ಹಾಕಿಕೊಂಡು ತಿನ್ನುತ್ತಾ ಮೈಮರೆಯುತ್ತಿದ್ದೆವು. ಜೇಬೆಲ್ಲ ಜಿಬಿಜಿಬಿಯಾಗಿ ರಾತ್ರಿ ಮಲಗಿದಾಗ ಇರುವೆಗಳು ಮೆತ್ತಿಕೊಂಡು ಕಿರಿಕಿರಿ ಉಂಟುಮಾಡುತ್ತಿದ್ದವು.

ಫೋನು, ಮೊಬೈಲು, ಕಂಪ್ಯೂಟರ್ ಇಲ್ಲದ ಕಾಲದಲ್ಲಿ ನಮ್ಮ ಬಾಲ್ಯ ಅರಳುತ್ತಿತ್ತು. ಪಿಜ್ಜಾ, ಬರ್ಗರ್, ಲಾಲಿಪಪ್ಪು ನಮ್ಮ ಕನಸಲ್ಲೂ ಬಾರದ ತಿಂಡಿಗಳಾಗಿದ್ದವು. ಖಾಲಿ ಕಡ್ಡಿ ಪೆಟ್ಟಿಗೆಗಳೇ ಮೊಬೈಲು, ಗರ್ದಿಗಮ್ಮತ್ತೇ ಸಿನಿಮಾ ಥೇಟರ್, ಮುಟಗಿ, ಥಾಲಿಪಟ್ಟಿಗಳೇ ಫಿಜ್ಜಾ ಬರ್ಗರ್, ಹುಂಚಿ ಕಡ್ಡಿಯೇ ಲಾಲಿಪಪ್ಪು, ಹಾಲು, ಮಜ್ಜಿಗೆಗಳೇ ಕೂಲ್ಡ್ರಿಂಕ್ಸ್ ಆಗಿದ್ದವು.

ನೆರೆ ಹೊರೆ, ಬಂಧು ಬಳಗ, ಗುರು ಹಿರಿಯರು ಹೀಗೆ ಇರುವ ಸಂಬಂಧಗಳು ದಟ್ಟವಾಗಿರುವ ಕಾಲದಲ್ಲಿ ನಮಗೇನೂ ಆಗುತ್ತಿರಲಿಲ್ಲ. ಪಾಟಿ ಪೆನ್ಸಿಲು, ಅರ್ಧಬೆಲೆಗೆ ಕೊಂಡ ಪುಸ್ತಕಗಳು, ಹಾಳೆ ಹರಿಯುವ ಮಸಿ ಪೆನ್ನುಗಳು, ತಗಡಿನ ಕಂಪಾಸು ಮೊದಲಾದವುಗಳನ್ನು ತುಂಬಿಸಿಕೊಂಡ ವಾಯರಿನ ಚೀಲ (ಪಾಟಿಚೀಲ) ಭುಜಕ್ಕೇರಿಸಿ ಶಾಲೆಗೆ ಹೋಗುವ ನಮ್ಮ ಹುರುಪು ನೋಡುಗರಿಗೆ ಖುಷಿ.

ಪಾಟಿಯ ಒಂದು ಭಾಗದಲ್ಲಿ ಶಬ್ದ, ಕ ಕಾ ಬಳ್ಳಿ, ಶುದ್ಧ ಬರಹ, ಇನ್ನೊಂದು ಕಡೆ ಮಗ್ಗಿ, ಲೆಕ್ಕ ಬರೆದು ರಾತ್ರಿ ಮನೆಯ ಗೋಡೆಯಲ್ಲಿ ತೂಗು ಹಾಕುತ್ತಿದ್ದೆವು. ಮರುದಿನ ಅವೆಲ್ಲ ಅಳಿಸಿ ಹೋಗದಂತೆ ಜತನದಿಂದ ಒಯ್ದು ಗುರುಗಳಿಗೆ ತೋರಿಸಿ ಪ್ರಶಂಸೆ ಪಡೆದುಕೊಳ್ಳುತ್ತಿದ್ದೆವು. ಹೆಚ್ಚಿನ ವರ್ಗಕ್ಕೆ ಹೋದಂತೆ ಪೆನ್ನು, ನೋಟುಪುಸ್ತಕ ಬಳಕೆ. ಬಡ ಮಕ್ಕಳು ಅಂಗಡಿಗೆ ಹೋಗಿ 5 ಪೈಸೆ ಕೊಟ್ಟು ಪೆನ್ನಿಗೆ ಮಸಿ ತುಂಬಿಸಿಕೊಳ್ಳುತ್ತಿದ್ದರು. ತಮ್ಮ ಅಂಗಡಿಗೇ ಮಕ್ಕಳು ಬರಲಿ ಎಂಬ ಉದ್ದೇಶದಿಂದ ಅಂಗಡಿಕಾರರು ಚೂರು ಬೆಲ್ಲ ಕೊಟ್ಟು ಕಳಿಸುತ್ತಿದ್ದರು. ನಾವು ದಿನಸಿ ಕೊಂಡಾದ ಮೇಲೆ ಕೈ ಮುಂದೆಮಾಡಿ ‘ಜರಾ ಬೆಲ್ಲ ಕೊಡ್ರಿ’ ಎಂದು ಕೇಳಿದ ನೆನಪು ಈಗಲೂ ಹಾಗೇ ಇದೆ.

ಪ್ರತೀ ಶನಿವಾರಕ್ಕೊಮ್ಮೆ ಶಾಲೆಯ ವರ್ಗ ಕೋಣೆಗಳನ್ನು ಸೆಗಣಿಯಿಂದ ಸಾರಿಸುವ ಕಾರ್ಯಾನುಭವ. ಹುಡುಗರು ಸೆಗಣಿ ಸಂಗ್ರಹಿಸಿ ತಂದರೆ, ಹುಡುಗಿಯರು ಚೆನ್ನಾಗಿ ಸಾರಿಸುತ್ತಿದ್ದರು. ಗುರುಗಳ ಸಂಖ್ಯೆ ಕಡಿಮೆ, ಅವರ ಮೇಲೆ ಭಕ್ತಿ, ಗೌರವ ಅಪಾರ. ಬೆಳಗ್ಗೆ ಪಾಠ, ಮಧ್ಯಾಹ್ನ ಕಂಠಪಾಟ, ಆಟ ಹೀಗಿತ್ತು ಕಲಿಕೆ. ಪದ್ಯದಲ್ಲಿನ ಹಾಡುಗಳು, ಮಗ್ಗಿಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿ ಬಾಯಿಪಾಠ ಮಾಡಲೇಬೇಕು. ಇಲ್ಲದಿದ್ದರೆ ಹಿರೇಮಣಿಗಳಿಂದ ಕಪಾಳಮೋಕ್ಷ ತಪ್ಪಿದ್ದಲ್ಲ. ಬಿಸಿಯೂಟ ಆಗ ಇರಲಿಲ್ಲ. ಆದರೆ, ಒಳ್ಳೆ ಪರಿಮಳಯುಕ್ತ ಉಪ್ಪಿಟ್ಟು ಇರುತ್ತಿತ್ತು. ಅದನ್ನು ಹಿರಿಯ ವಿದ್ಯಾರ್ಥಿಗಳು ತಯಾರಿಸುತ್ತಿದ್ದರು. ಗುರುಗಳು ತಮ್ಮ ಸ್ವಂತ ಊರುಗಳಿಂದ ಸೈಕಲ್ ಇಲ್ಲವೇ ಕಾಲ್ನಡಿಗೆಯಿಂದಲೆ ಬರುತ್ತಿದ್ದರು. ಅವರ ಬರುವಿಕೆಯನ್ನು ನೋಡುವುದೇ ಬಲು ಚಂದ. ಅವರು ಬರದಿದ್ದರಂತೂ ಚಂದವೋ ಚಂದ.

ಋತುಮಾನಕ್ಕೆ ತಕ್ಕಂತೆ ನಮ್ಮ ಬಾಲ್ಯದ ಶೈಲಿ ಬದಲಾಗುತ್ತಿತ್ತು. ಬೇಸಿಗೆ ರಜೆ ಬಿಟ್ಟರೆ ಸಾಕು, ನಮ್ಮನ್ನು ದನಕರು ಕಾಯಲಿಕ್ಕೆ ಹಚ್ಚುತ್ತಿದ್ದರು. ಆ ವೇಳೆ ಗೆಳೆಯರ ಜೊತೆ ದನ, ಎಮ್ಮೆ, ಆಡು, ಕುರಿ ಮೇಯಿಸಿಕೊಂಡು ಬರಲು ಅಡವಿಗೆ ಹೋಗಿ ಮಧ್ಯಾಹ್ನದ ಕಡು ಬಿಸಿಲಿನಲ್ಲಿ ಅವುಗಳನ್ನು ನೆರಳಿಗೆ ಬಿಟ್ಟು ಕೆರೆ, ಬಾವಿ, ಹಳ್ಳಗಳಲ್ಲಿ ಈಜಾಡುವುದು, ಗಿಡಮಂಗನ ಆಟ ಆಡುವುದು, ಅಡವಿಯಲ್ಲಿ ಸಿಗುವ ಹುಲ್ಲಿಕಾಯಿ, ಕವಳಿ ಹಣ್ಣು, ಸಿಂಬಳಕಾಯಿ, ಮುಳ್ಳುಗಳ್ಳಿ ಹಣ್ಣು, ಗೆಣಸು, ಮಾವಿನಕಾಯಿ ಹುಡುಕಿ ತಿನ್ನುವುದು, ಮುಳ್ಳು ಕಂಟಿ ಪೊದೆಗಳಲ್ಲಿನ ಜೇನು ಬಿಡಿಸಿ ಸವಿಯುವುದು. ಹೋಗುವಾಗ, ಬರುವಾಗ ಎಮ್ಮೆ ಮೇಲೆ ಕುಳಿತು ಸವಾರಿ ಮಾಡುವುದು, ದಾರಿಯಲ್ಲಿ ಚಲಿಸುವ ಎತ್ತಿನ ಬಂಡಿ ಜಿಗಿದು ಹತ್ತುವುದು...ಹೀಗೆ ಮಾಡುತ್ತಿರುವಾಗ ಹಲವು ಅವಘಡಗಳು ಸಂಭವಿಸಿದರೂ ಏನೂ ಆಗದವರಂತೆ ಮನೆ ಸೇರುತ್ತಿದ್ದೆವು. ಅಂಥ ಪೆಟ್ಟುಗಳು ಈಗ ನೋವಾಗಿ ಕಾಡಿದರೂ ನೆನಪುಗಳು ನಗು ತರಿಸುತ್ತವೆ.

ಮಳೆಗಾಲವಂತೂ ನಮಗೆ ಹಿಗ್ಗಿನ ಬುಗ್ಗೆಯಾಗುತ್ತಿತ್ತು. ಜೋರು ಮಳೆಯಿಂದ ಹರಿವ ನೀರಿಗೆ ಒಡ್ಡು ಕಟ್ಟಿ ಅಲ್ಲಲ್ಲಿ ಸಣ್ಣ ತೂತು ಕೊರೆದು ನೀರು ಹರಿಸಿ ಕೆಳಗಡೆ ಮಾಡಿದ ತೋಟಕ್ಕೆ ನೀರಣಿಸಿ ಬೆಳೆ ಬೆಳೆಯುವುದು, ಬಾವಿ, ಕೆರೆ, ಹೊಳೆ ತುಂಬಿ ಹರಿಯುವುದನ್ನು ಓಡೋಡಿ ಹೋಗಿ ಮನ ತಣಿಯುವವರೆಗೆ ನೋಡುವುದು, ತಪತಪನೆ ತೊಯ್ದು ನಿಂತ ಮರಗಿಡಗಳ ಕೆಳಗೆ ನಿಂತು ರೆಂಬೆ ಜಾಡಿಸಿ ಮೈ ತೊಯ್ಸಿಕೊಂಡು ಸಂತಸಪಡುವುದು, ತಿಪ್ಪೆಗಳಲ್ಲಿ ಮೊಳೆತ ಸಸಿಗಳನ್ನು ತಂದು ಮನೆಯಂಗಳದಲ್ಲಿ ನೆಟ್ಟು ಬೆಳೆಸುವುದು ಹೀಗೆಲ್ಲ ಮಾಡಿ ಒಬ್ಬರಿಗೊಬ್ಬರು ನಮ್ಮ ನಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದೆವು. ಎಷ್ಟೇ ಚಳಿ ಇದ್ದರೂ ಅದಕ್ಕಂಜದೆ ಚಳಿಗಾಲವನ್ನು ಅನುಭವಿಸುತ್ತಿದ್ದೆವು, ಗೆಳೆಯರೊಂದಿಗೆ ಸೇರಿ ಅವರ ಹೊಲ ತೋಟಗಳಿಗೆ ಹೋಗಿ ಸೀತನಿ, ಕಬ್ಬು, ಸುಲಗಾಯಿ, ಬಾರಿಹಣ್ಣು, ಸೌತೆಕಾಯಿ, ಪುಟ್ಟಿಕಾಯಿ ಇಂಥವುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆವು.

ಕಾರ ಹುಣ್ಣಿಮೆ ಎತ್ತುಗಳ ಓಟ, ಮಣ್ಣೆತ್ತಿನ ಅಮವಾಸ್ಯೆಯ ಮಣ್ಣಿನ ಎತ್ತುಗಳ ಮಾಟ, ಕಡ್ಲಿಕಡಬು ಹುಣ್ಣಿಮೆಯ ಕಡಬು ಕರ್ಚಿಕಾಯಿ, ನಾಗರಪಂಚಮಿಯ ಜೋಕಾಲಿ, ನೂಲು ಹುಣ್ಣಿಮೆ ರಾಖಿ, ಬೆನಕನ ಅಮವಾಸ್ಯೆಯ ಗಣಪತಿ, ಅನಂತನ ಹುಣ್ಣಿಮೆ ವೃತ, ಮಹಾನವಮಿಯ ಬನ್ನಿ ಬಂಗಾರ, ಸೀಗಿ ಹುಣ್ಣಿಮೆ ಭೂಮಿ ಪೂಜೆ, ದೀಪಾವಳಿ ಪಟಾಕಿ, ಗೌರಿ ಹುಣ್ಣಿಮೆ ಸಕ್ರಿ ಆರತಿ, ಛಟ್ಟಿ ಅಮವಾಸ್ಯೆ ಜಾತ್ರೆ, ಎಳ್ಳು ಅಮವಾಸ್ಯೆಯ ಚರಗ, ಸಂಕ್ರಾಂತಿ ಕುಸುರೆಳ್ಳು, ಬನದ ಹುಣ್ಣಿಮೆ ಬಾದಾಮಿ ಬನಶಂಕರಿ ಜಾತ್ರೆ, ಭಾರತ ಹುಣ್ಣಿಮೆ ಸವದತ್ತಿ ಯಲ್ಲಮ್ಮನ ಜಾತ್ರೆ, ಶಿವರಾತ್ರಿ ಜಾಗರಣೆ, ಹೋಳಿ ಹುಣ್ಣಿಮೆ ಬಣ್ಣ, ಯುಗಾದಿ ಬೇವು ಬೆಲ್ಲ, ದವನದ ಹುಣ್ಣಿಮೆ ಹನುಮ...ಹೌದು, ನಮಗೆ ಎಷ್ಟೊಂದು ಹಬ್ಬಗಳು.

ಇಂಥ ಬಾಲ್ಯ ಈಗೀನ ಮಕ್ಕಳಿಗೆ ಎಲ್ಲಿದೆ? ಅವರ ಬಾಲ್ಯ ಮೊಬೈಲ್, ಕಂಪ್ಯೂಟರ್, ಹೋಂವರ್ಕ್‌ಮಯವಾಗಿದೆ. ಕಣ್ಣಾ ಮುಚ್ಚಾಲೆ, ಚಿಣ್ಣಿದಾಂಡು, ಹಪ್ಪೆದುಪ್ಪೆ, ಗೋಲಿ, ಕುಂಟಾಬಿಲ್ಲೆ, ಆಣಿಕಲ್ಲು, ಹುಲಿಮನೆ, ಚೌಕಾಬಾರಾ, ಲಗೋರಿ, ಕಾನ್ ಕಾನ್ ಉತ್ತತ್ತಿ, ಬಡಿಗೆ ಚಿಮ್ಮುವಿಕೆ, ಸರಗೆರಿ, ಕಬಡ್ಡಿ, ಅಂಡ್ಯಾಳ, ಆಕಳ ಪತ್ತಾ, ಬಳಚೂರ, ಗಾಲಿ ಉರುಳಿಸುವುದು, ಲಗೋರಿ ಆಟಗಳೆಲ್ಲ ತೆರೆಮರೆಗೆ ಸರಿದಿವೆ. ಮೊಬೈಲ್ ಒಂದೇ ಅಂಗೈಯೊಳಗಿನ ಆಟದ ಅಂಗಳವಾಗಿದೆ. ಏಯ್, ಈಗೇನಿಲ್ಲ ತಗೀರಿ. ಎಷ್ಟೊಂದು ಚಂದಿತ್ತು ನಂಬಾಲ್ಯ! ❖



ಕಲೆ: ಮಮತಾ, 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ, ಹೆಗ್ಗಡಹಳ್ಳಿ

ಕಲೆ: ಗುರು ನಾವಳ್ಳಿ

ಕಾಗೆ ಮತ್ತು ಮರಕುಟಿಗ

ಈಶ್ವರ್ ಚಂದ್ರ



ಹಳೆಯ ಕಾಲದಲ್ಲಿ ಒಂದು ಸಲ ಒಂದು ಕಾಗೆಗೆ ಬಹಳ ಬಾಯಾರಿಕೆ ಆಯಿತು. ಅದು ಬೇಸಿಗೆ ಕಾಲ. ನದಿ ಹಳ್ಳಗಳು ಎಲ್ಲಾ ಬತ್ತಿ ಹೋಗಿದ್ದವು. ನಲ್ಲಿಗಳಲ್ಲೂ ನೀರು ಬರುತ್ತಿರಲಿಲ್ಲ. ಆಗ ಕಾಗೆಗೆ ಒಂದು ಹೂಜಿ ಕಾಣಿಸಿತು. ಅದರ ತಳದಲ್ಲಿ ಸ್ವಲ್ಪ ನೀರಿತ್ತು. ಕಾಗೆಗೆ ಅದು ಎಟಕುತ್ತಿರಲಿಲ್ಲ. ಅದು ಒಂದೊಂದೇ ಕಲ್ಲನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ಬಂದು ಹೂಜಿಗೆ ಹಾಕತೊಡಗಿತು. ಸ್ವಲ್ಪ ಹೊತ್ತಿನಲ್ಲೇ ನೀರು ಮೇಲೆ ಬಂತು. ಅದನ್ನು ಕುಡಿದು ಕಾಗೆ ಪುರ್ರನೆ ಹಾರಿ ಹೋಯಿತು.

ಆದರೆ ಈ ಹೊಸ ಕಾಲದಲ್ಲಿ ಅದೇ ಕಾಗೆಯ ಮರಿ ಮೊಮ್ಮಗ ಕಾಗೆಗೆ ಒಂದು ಸಲ ಬಹಳ ಬಾಯಾರಿಕೆಯಾಯಿತು. ನದಿ ಹಳ್ಳ ಕೆರೆಗಳು ಇದ್ದ ಜಾಗದಲ್ಲೆಲ್ಲ ಮನೆಗಳು ಬಂದಿದ್ದವು. ಬಾವಿಗಳು ಇರಲೇ ಇಲ್ಲ. ಎಲ್ಲಾ ಬೋರ್‌ವೆಲ್‌ಗಳು. ಎಲ್ಲೆಲ್ಲಿ ನೋಡಿದರೂ ಮನೆಗಳ ಮೇಲೆ ಕಪ್ಪು, ಹಳದಿ ಬಣ್ಣದ ಪ್ಲಾಸ್ಟಿಕ್ ಟ್ಯಾಂಕುಗಳು. ನೀರಿನ ಸುಳಿವೇ ಇಲ್ಲ. ಕಾಗೆಗೆ ಹಾರಿ ಹಾರಿ ಸುಸ್ತಾಯಿತು. ಬೇಸಿಗೆಯ ಸೂರ್ಯ ಧಗಧಗಿಸುತ್ತಿದ್ದ. ಅಲ್ಲೊಂದು ಮನೆ. ಮನೆಯ ಮೇಲೆ ಮರದ ನೆರಳು. ಅಲ್ಲೊಂದು ಪ್ಲಾಸ್ಟಿಕ್ ಟ್ಯಾಂಕ್ ಇತ್ತು. ಕಾಗೆ ಹಾರಿ ಹೋಗಿ ಅದರ ಮೇಲೆ ಕುಳಿತುಕೊಂಡಿತು. ಹ್ಞಾ... ಸ್ವಲ್ಪ ತಂಪಾಯಿತು. ಅಗೋ! ಎಲ್ಲೋ ನೀರು ಬುಳುಬುಳು ಬೀಳುತ್ತಿರುವ ಸದ್ದು. ಹ್ಞಾ... ನೀರು... ನೀರು...! ಕಾಗೆ ಕಣ್ಣರಳಿಸಿ ಸುತ್ತಮುತ್ತ ನೋಡಿತು. ಕಿವಿಯಾನಿಸಿ ಕೇಳಿತು. ಆ ಟ್ಯಾಂಕ್ ಒಳಗೆ ನೀರು ಬೀಳುತ್ತಿತ್ತು. ಕೆಳಗೆ ಎಲ್ಲೋ ಪಂಪ್ ಚಾಲನೆಯಲ್ಲಿದ್ದ ಜಿಯ್ ಎಂಬ ಸದ್ದು. ಕೆಳಗಿಂದ ನೀರು ಮೇಲಕ್ಕೆ ಬಂದು ಟ್ಯಾಂಕಿನೊಳಗೆ ಬೀಳುತ್ತಿದೆ. ಇಲ್ಲಿ ನೀರು ಕೇವಲ ಒಂದು ಶಬ್ದವಾಗಿದೆ. ಕಣ್ಣಿಗೆ ಕಾಣಿಸುತ್ತಿಲ್ಲ.

ಕಾಗೆ ಪ್ಲಾಸ್ಟಿಕ್ ಟ್ಯಾಂಕನ್ನು ತನ್ನ ಕೊಕ್ಕಿನಿಂದ ಕುಕ್ಕ ತೊಡಗಿತು. ಟ್ಯಾಂಕ್ ಬಹಳ ಗಟ್ಟಿಯಾಗಿತ್ತು. ಕುಕ್ಕಿ ಕುಕ್ಕಿ ಅದರ ತಲೆ ಗಿಮ್ ಎಂದು ಸುತ್ತಲಾರಂಭಿಸಿತು. ನೀರು ಮಾತ್ರ ಬರಲಿಲ್ಲ. ಆಗ ಕಾಗೆಗೆ ತನ್ನ ಗೆಳೆಯ ಮರಕುಟಿಗನ ನೆನಪಾಯಿತು. ಈ ಕೆಲಸಕ್ಕೆ ಅವನೇ ಸರಿ ಎಂದು ನಿರ್ಧರಿಸಿ ಕಾಗೆ ಹಾರಿ ಹೋಯಿತು.

ಅಪರೂಪಕ್ಕೆ ಬಂದ ಗೆಳೆಯನನ್ನು ಕಂಡು ಮರಕುಟಿಗನಿಗೆ ಬಹಳ ಸಂತೋಷವಾಯಿತು. ಚಳ್ಳೆ ಹಣ್ಣು ಕಂಬಳಿ ಹುಳುಗಳನ್ನು ಕೊಟ್ಟು ಉಪಚಾರ ಮಾಡಿತು. ಕಾಗೆ ಮಾತ್ರ ಏನನ್ನು ತಿನ್ನದೆ. ‘ನೀರು... ನನಗೆ ನೀರು ಬೇಕು!’ ಎಂದು ಕೀರಲು ಕಂಠದಲ್ಲಿ ಕೂಗಿತು. ಎಲ್ಲೂ ನೀರೇ ಇರಲಿಲ್ಲ. ಕಾಗೆ ತಾನು ಕಂಡ ನೀರಿನ ಟ್ಯಾಂಕ್ ಬಗ್ಗೆ ಹೇಳಿತು. ಮರಕುಟಿಗನು ಟ್ಯಾಂಕನ್ನು ಕುಕ್ಕಿ ನೀರು ಹೊರ ಬರುವಂತೆ ಮಾಡಿದರೆ ನೀರು ಸಿಗಬಹುದು ಎಂದಿತು ಕಾಗೆ.

ಸರಿ, ಕಾಗೆ, ಮರಕುಟಿಗ ಎರಡೂ ಅಲ್ಲಿಗೆ ಹಾರಿ ಬಂದವು. ಮರಕುಟಿಗ ಟ್ಯಾಂಕನ್ನು ಒಂದು ಸುತ್ತು ಹಾಕಿ ಯಾವ ಜಾಗ ಸೂಕ್ತ ಎಂದು ಪರೀಕ್ಷೆ ಮಾಡಿತು. ಅನಂತರ ಒಂದು ಜಾಗದಲ್ಲಿ ಕುಕ್ಕಲು ಆರಂಭಿಸಿತು. ಅದು ಎಷ್ಟು ವೇಗವಾಗಿ ಕೂಗುತ್ತಿತ್ತೆಂದರೆ ನಿಮಿಷಕ್ಕೆ ನೂರಿಪ್ಪತ್ತು ಬಾರಿ ಕುಕ್ಕುತ್ತಿತ್ತು. ಐದೇ ನಿಮಿಷ ಟ್ಯಾಂಕಿನಿಂದ ನೀರು ಚಿಲ್ಲನೆ ಹಾರಿತು. ಕಾಗೆಗೆ ಸಂತೋಷವೋ ಸಂತೋಷ! ಎರಡೂ ಪಕ್ಷಿಗಳು ಹೊಟ್ಟೆ ತುಂಬ ನೀರು ಕುಡಿದವು. ಕಾಗೆ, ‘ಕಾ ಕಾ... ಇಲ್ಲಿ ನೀರಿದೆ ಬನ್ನಿ’ ಎಂದು ತನ್ನ ಬಳಗವನ್ನೆಲ್ಲ ಕರೆಯಿತು. ಸ್ವಲ್ಪ ಹೊತ್ತಿನಲ್ಲಿ ನೂರಾರು ಕಾಗೆಗಳು, ಗೊರವಂಕಗಳು, ಪಾರಿವಾಳಗಳು, ಗಿಣಿಗಳು, ಕೋಗಿಲೆಗಳು, ಗುಬ್ಬಚ್ಚಿಗಳು ಅಲ್ಲಿಗೆ ಹಾರಿ ಬಂದು ನೀರು ಕುಡಿಯ ತೊಡಗಿದವು. ಬಣ್ಣ ಬಣ್ಣದ ಪಕ್ಷಿಗಳಿಂದ ಅದೊಂದು ಪಕ್ಷಿಕಾಶಿಯೇ ಆಯಿತು.

ಅವುಗಳ ಚಿಲಿಪಿಲಿ ಕೇಳಿ ಮನೆಯ ಯಜಮಾನ ಹೊರಗೆ ಬಂದ. ಮೆಟ್ಟಿಲು ಹತ್ತಿ ತಾರಸಿಗೆ ಬಂದ. ಅಲ್ಲಿ ಹಕ್ಕಿಗಳ ಮೇಳವೇ ನಡೆಯುತ್ತಿತ್ತು. ಟ್ಯಾಂಕಿನಿಂದ ಕಾರಂಜಿಯಂತೆ ನೀರು ಚಿಮ್ಮುತಿತ್ತು. ತಾರಸಿಯೆಲ್ಲ ನೀರುಮಯವಾಗಿತ್ತು. ಕೆಲವು ಪಕ್ಷಿಗಳು ನೀರು ಕುಡಿಯುತ್ತಿದ್ದವು. ಮತ್ತೆ ಕೆಲವು ನೀರಿನಲ್ಲಿ ಹೊರಳಾಡಿ ದೇಹ ತಂಪು ಮಾಡಿಕೊಳ್ಳುತ್ತಿದ್ದವು. ಮನೆ ಯಜಮಾನನಿಗೆ ಗಾಬರಿಯಾಯಿತು. ಹುಷ್ ಹುಷ್ ಎಂದು ಪಕ್ಷಿಗಳನ್ನು ಓಡಿಸಿದ. ಟ್ಯಾಂಕಿನ ರಂಧ್ರಕ್ಕೆ ಒಂದು ಬಟ್ಟೆಯ ತುಂಡನ್ನು ಸಿಕ್ಕಿಸಲು ನೋಡಿದ. ಸೋರುವುದು ನಿಲ್ಲಲಿಲ್ಲ. ಕೊಳಾಯಿ ದುರಸ್ತಿ ಮಾಡುವವನಿಗೆ ಫೋನ್ ಮಾಡಿದ. ಅವನು ಬಂದವನೇ ಅದನ್ನು ನೋಡಿ, ‘ದುರಸ್ತಿ ಮಾಡಲು ಆಗುವುದಿಲ್ಲ ಹೊಸದನ್ನ ತರಬೇಕು’ ಎಂದ. ಯಜಮಾನನಿಗೆ ಎದೆ ದಡ್ ಎಂದಿತು. ಹತ್ತು ಸಾವಿರ ರೂಪಾಯಿ ಖರ್ಚು ಮಾಡಬೇಕೆ? ‘ಒಂದು ಪ್ಲಗ್ ಹಾಕಿ, ವಾಷರ್ ಹಾಕಿ ನೋಡಿ’ ಎಂದ.

ಪ್ಲಂಬರ್ ಹೇಳಿದ, ‘ಹಾಗೆ ಮಾಡಬಹುದು. ಆದರೆ ಬೇರೆ ಕಡೆ ತೂತು ಕೊರೆದರೆ?’

‘ಹೌದಲ್ಲಾ... ಹಾಗಾದ್ರೆ ಇದಕ್ಕೆ ಏನು ಉಪಾಯ?’

‘ಒಂದು ಅಗಲವಾದ ಮಣ್ಣಿನ ಪರಾತದಲ್ಲಿ ನೀರು ತುಂಬಿಸಿ ಇಲ್ಲಿಡಿ. ಹಕ್ಕಿಗಳು ಬಂದು ಸಂತೋಷದಿಂದ ನೀರು ಕುಡಿಯುತ್ತವೆ. ದಿನಾ ನೀರು ತುಂಬಿಸಿ. ಹಕ್ಕಿಗಳಿಗೂ ಸಂತೋಷ ನಿಮ್ಮ ಟ್ಯಾಂಕು ಸುರಕ್ಷಿತ’ ಎಂದ ಪ್ಲಂಬರ್.

‘ಸರಿ, ಹಾಗೆ ಮಾಡುತ್ತೇನೆ’ ಎಂದ ಆ ಮನೆಯ ಯಜಮಾನ.

ಫುಟ್‌ಬಾಲ್ ಟೂರ್ನಿ: 10 ತಂಡಗಳ ಪೈಪೋಟಿ

ನೈಸ್ ಡಿಎಚ್ ಕಪ್ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಪೊರೇಟ್ ಕಂಪನಿಗಳ ಕ್ರೀಡಾ ಪ್ರತಿಭೆಗಳಿಗೆ ಸಾಮರ್ಥ್ಯ ತೋರಿಸಲು ವೇದಿಕೆಯಾಗಿರುವ 'ನೈಸ್ ಡಿಎಚ್ ಕಪ್ ಕಾರ್ಪೊರೇಟ್ ಫೈವ್ ಎ ಸೈಡ್ ಫುಟ್‌ಬಾಲ್ ಟೂರ್ನಿ'ಯಲ್ಲಿ 10 ತಂಡಗಳು ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ.

ಇದೇ ಮೊದಲ ಬಾರಿ ಆಯೋಜಿಸಿರುವ ಟೂರ್ನಿಗೆ ಇಲ್ಲಿನ ಇಂದಿರಾನಗರದಲ್ಲಿರುವ ಬಫೆಲೊ ವೈಲ್ಡ್ ವಿಂಗ್ಸ್‌ನಲ್ಲಿ ಶನಿವಾರ ಚಾಲನೆ ನೀಡಲಾಯಿತು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೀತಾರಾಮನ್ ಶಂಕರ್ ಮತ್ತು ಭಾರತ ಮಹಿಳಾ ಫುಟ್‌ಬಾಲ್ ತಂಡದ ಮಾಜಿ ನಾಯಕಿ ಚಿತ್ರಾ ಗಂಗಾಧರನ್ ಅವರು ರೋಲಿಂಗ್ ಟ್ರೋಫಿ ಹಾಗೂ ತಂಡಗಳ ಜೆರ್ಸಿ ಅನಾವರಣಗೊಳಿಸಿದರು.

ಟೂರ್ನಿಯಲ್ಲಿ ಅಡೋಬಿ, ಬಾಷ್, ಎಪ್ಸಿಲಾನ್, ಎಚ್‌ಎಲ್ ಕ್ಲೆಮೊವ್, ವಿಸೆನ್, ಐಕ್ವಿಯಾ, ಪುರವಂಕರ, ಸ್ವಿಸ್ ರೆ, ತಾವಂತ್ ಮತ್ತು ಟೈಟನ್ ತಂಡಗಳು ಭಾಗವಹಿಸಲಿವೆ.

ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಕಂಪನಿ ಈ ಟೂರ್ನಿಯ 'ಟೈಟಲ್ ಪ್ರಾಯೋಜಕತ್ವ' ವಹಿಸಿಕೊಂಡಿದೆ. ವಾರಾಂತ್ಯದಲ್ಲಿ ನಡೆಯುವ ಟೂರ್ನಿಯ ಪಂದ್ಯಗಳು ನ.19 ರಿಂದ ಆರಂಭವಾಗಲಿವೆ.

'ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳ 75ನೇ ವರ್ಷಾಚರಣೆ ಸಮಯದಲ್ಲೇ ಈ ಟೂರ್ನಿಗೆ ಚಾಲನೆ ನೀಡಲಾಗಿದೆ. ಈ ವರ್ಷ 10 ತಂಡಗಳು ಪಾಲ್ಗೊಳ್ಳುತ್ತಿದ್ದು, ಮುಂದಿನ ವರ್ಷದಿಂದ ತಂಡಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು' ಎಂದು ಸೀತಾರಾಮನ್ ಶಂಕರ್ ಹೇಳಿದರು.

ಮಹಿಳಾ ಫುಟ್‌ಬಾಲ್‌ಗೆ ಉತ್ತೇಜನ ಸಿಗಲಿ: ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಚಿತ್ರಾ ಗಂಗಾಧರನ್ ಮಾತನಾಡಿ, 'ನಮ್ಮ ದೇಶದಲ್ಲಿ ಫುಟ್‌ಬಾಲ್‌ನತ್ತ ಆಸಕ್ತಿ ತೋರುತ್ತಿರುವ ಹೆಣ್ಣುಮಕ್ಕಳಿಗೆ ಕೊರತೆಯಿಲ್ಲ. ಆದರೆ ಅವರಲ್ಲಿ ಹಲವರಿಗೆ ಶೂ ಖರೀದಿಸಲೂ ಹಣ ಇಲ್ಲ. ಕಾರ್ಪೊರೇಟ್ ಕಂಪನಿಗಳು 2–3 ಪ್ರತಿಭಾನ್ವಿತ ಆಟಗಾರ್ತಿಯರನ್ನು ದತ್ತು ತೆಗೆದುಕೊಳ್ಳಲು ಮುಂದಾಗಬೇಕು' ಎಂದರು.

ಫಿಟ್‌ನೆಸ್ ಟ್ರೇನರ್ ಗುಲ್ ಮೊಹಮ್ಮದ್ ಅಕ್ಬರ್ ಪಾಲ್ಗೊಂಡರು.

ಆಪಾ, ಬಾಡಿಕೋಟ್ (ಎಕೆಬಿ ಮೋಟರ್ಸ್), ಬಫೆಲೊ ವೈಲ್ಡ್ ವಿಂಗ್ಸ್, ಹಾಗೆನ್ ದಾಸ್ (ಎಕೆಬಿ ಫುಡ್ಸ್), ಪ್ಲೇಟೊ, ಪೋಪೈಸ್, ರೇರ್ ರ‍್ಯಾಬಿಟ್, ದಿ ಸ್ಕಿನ್ ಸ್ಟೋರ್.ಇನ್, ಯೋಗಾ ಬಾರ್ ಮತ್ತು ಜೈನ್ ಸಮೂಹದ ದಿ ಸ್ಪೋರ್ಟ್ಸ್ ಸ್ಕೂಲ್ ಟೂರ್ನಿಯ ಸಹಪ್ರಾಯೋಜಕತ್ವ ವಹಿಸಿಕೊಂಡಿವೆ.

ಬಾಕ್ಸಿಂಗ್:ಶಿವಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಶಿವ ಥಾಪಾ ಅವರು ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಬೆಳ್ಳಿ ಪದಕ ಗಳಿಸಿದರು. ಚಾಂಪಿಯನ್‌ಷಿಪ್ ಇತಿಹಾಸದಲ್ಲಿ ಇದು ಅವರಿಗೆ ಒಟ್ಟಾರೆ ಆರನೇ ಪದಕ.

ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್ 63 ಕೆಜಿ ವಿಭಾಗದ ಫೈನಲ್‌ನಲ್ಲಿ ಉಜ್ಬೆಕಿಸ್ತಾನದ ಅಬ್ದುಲ್ಲಾಯೆವ್ ರಸ್ಲಾನ್ ಎದುರು ಶಿವ ಸ್ಪರ್ಧಿಸಿದ್ದರು. ಆದರೆ ಬಲ ಮೊಣಕಾಲು ಗಾಯದಿಂದಾಗಿ ಭಾರತದ ಬಾಕ್ಸರ್ ಬೌಟ್‌ನ ನಡುವೆಯೇ ಹಿಂದೆ ಸರಿದರು.

165 ಎಸೆತದಲ್ಲಿ 407 ರನ್ ಗಳಿಸಿದ ತನ್ಮಯ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕ್ರಿಕೆಟ್ ಕ್ಲಬ್ ಆಫ್ ಸಾಗರ ತಂಡದ ಆಟಗಾರ ತನ್ಮಯ್ ಮಂಜುನಾಥ್, ಕೆಎಸ್‌ಸಿಎ ಶಿವಮೊಗ್ಗ ವಲಯದ 16 ವರ್ಷದೊಳಗಿನ ಬಾಲಕರ ಕ್ರಿಕೆಟ್ ಟೂರ್ನಿಯಲ್ಲಿ 165 ಎಸೆತಗಳಲ್ಲಿ 407 ರನ್ ಗಳಿಸಿ ನೂತನ ದಾಖಲೆ ನಿರ್ಮಿಸಿದ್ದಾರೆ.

ಇಲ್ಲಿನ ಫೆಸಿಟ್ ಮೈದಾನದಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಭದ್ರಾವತಿಯ ಎನ್‌ಟಿಸಿಸಿ ತಂಡದ ವಿರುದ್ಧ ಅವರು ಈ ಸಾಧನೆ ಮಾಡಿದ್ದಾರೆ. ತನ್ಮಯ್ ಅಬ್ಬರದ ಬ್ಯಾಟಿಂಗ್‌ನಲ್ಲಿ 24 ಸಿಕ್ಸರ್ ಹಾಗೂ 48 ಬೌಂಡರಿಗಳು ಸೇರಿವೆ.

'ಪಂದ್ಯದ 18ನೇ ಓವರ್‌ನಲ್ಲಿ ತನ್ಮಯ್ ಮಂಜುನಾಥ್ 60 ಎಸೆತಗಳಲ್ಲಿ ಶತಕ ಪೂರ್ಣಗೊಳಿಸಿದರು' ಎಂದು ಕೋಚ್ ನಾಗೇಂದ್ರ ಕೆ.ಪಂಡಿತ್ 'ಪ್ರಜಾವಾಣಿ'ಗೆ ತಿಳಿಸಿದರು. ಆರಂಭದಲ್ಲಿ ನಿಧಾನವಾಗಿ ಆಡಿದ ತನ್ಮಯ್ ನಂತರ ಅಬ್ಬರಿಸಿದರು.

ಆರಂಭಿಕ ಬ್ಯಾಟರ್ ಎ.ಅಂಶು ಹಾಗೂ ತನ್ಮಯ್ ಜೋಡಿಯು ಮೊದಲ ವಿಕೆಟ್‌ಗೆ 350 ರನ್ ಕಲೆ ಹಾಕುವ ಮೂಲಕ ಭದ್ರಾವತಿ ತಂಡದ ಬೌಲರ್‌ಗಳನ್ನು ದಂಡಿಸಿದರು. ಅಂಶು 127 (90 ಎಸೆತ) ರನ್ ಗಳಿಸಿ ಔಟಾದರು. ಸಾಗರ ತಂಡ ನಿಗದಿತ 50 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 583 ರನ್‌ಗಳ ಬೃಹತ್ ಮೊತ್ತ ಕಲೆ ಹಾಕಿತು. ತನ್ಮಯ್ ಮಂಜುನಾಥ್ 50ನೇ ಓವರ್‌ನ ಮೂರನೇ ಎಸೆತದಲ್ಲಿ ಕವರ್ಸ್ ಫೀಲ್ಡರ್‌ಗೆ ಕ್ಯಾಚಿತ್ತು ಔಟಾದರು.

ತನ್ಮಯ್ ಮಂಜುನಾಥ್

ಇದಕ್ಕೆ ಉತ್ತರವಾಗಿ ಭದ್ರಾವತಿ ತಂಡ ಕೇವಲ 73 ರನ್ ಗಳಿಸಿ ಆಲ್ ಔಟ್ ಆಯಿತು. ಸಾಗರ ತಂಡದ ಪರವಾಗಿ ಅಂಶು 5 ವಿಕೆಟ್ ಪಡೆದರೆ ಅಜಿತ್ 4 ವಿಕೆಟ್ ಗಳಿಸಿದರು.

ರಾಜ್ಯ ಹಾಕಿ: ಗೋವಿಂದರಾಜು ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜು ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಸದರ್ನ್ ಅಲ್ಫಾ ಸ್ಪೋರ್ಟ್ಸ್ ಅಕಾಡೆಮಿ ತಂಡವು ಕರ್ನಾಟಕ ರಾಜ್ಯ ಸಿ ಡಿವಿಷನ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿತು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ಸದರ್ನ್ ಅಲ್ಫಾ 5–2ರಿಂದ ಬಿಸಿವೈಎ ಬಿ ತಂಡವನ್ನು ಸೋಲಿಸಿತು. ಗೋವಿಂದರಾಜು 12, 26, 35ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ವಿಜೇತ ತಂಡಕ್ಕಾಗಿ ಸುರೇಶ್ (7, 46ನೇ ನಿ.) ಎರಡು ಗೋಲು ದಾಖಲಿಸಿದರು. ಬಿಸಿವೈಎ ಪರ ನಿರನ್ ಸುಬ್ಬಯ್ಯ (34ನೇ ನಿ.) ಮತ್ತು ಸಂತೋಷ್ ಕೆ. (44ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ 'ಬಿ' ತಂಡವು 3–1ರಿಂದ ನವೀನ್ ಹಾಕಿ ಕ್ಲಬ್ ಬಿ ಎದುರು ಗೆದ್ದಿತು. ವಿಜೇತ ತಂಡದ ಪರ ಶಿವ ಸೂರ್ಯ (3ನೇ ನಿ.), ಬಾಲಾಜಿ (29ನೇ ನಿ.) ಮತ್ತು ಶಿವ ಶಂಕರನ್ (41ನೇ ನಿ.) ಗೋಲು ಹೊಡೆದರು. ನವೀನ್ ಕ್ಲಬ್‌ಗಾಗಿ ಸೂರಜ್ (46ನೇ ನಿ.) ಗೋಲು ಹೊಡೆದರು.